
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 29, 2010 ರೂ. 12/-


ನರ್ಸ್ ರೇಣುಕನಿಗೆ ಗಂಟುಬಿದ್ದ AKKA



ಮೆಡಿಕಲ್ ಕಾಲೇಜ್ ಹಗರಣ

ಆಚಾರ್ಯ ನುಂಗಿದ್ದೆಷ್ಟು

...ಾಜಾಲ ಮೆಡಿಕಲ್ ಸೀಟು ವ್ಯಾಪಾರ



...ರುಸಾವಿರ ಮಠ ...ವಾರ್ಡಿಗೆ ...ಸ್ತಿ ಮಾರಿದ ...ರುಸಿದ್ಧ


ಎಚ್ಚರಿಕೆ..! ಬರುತ್ತಿದ್ದಾನೆ ಭೂಗಳ್ಳ MLA ಮುನಿರಾಜು

ಕುಮಟ ಪೋಲೀಸರು ಭೂಗಳ್ಳರು ವೇಶ್ಯೆಯರು ಪತ್ರಕರ್ತರು

ಹೆಣ್ಣಿನ ಹುಚ್ಚಿಗೆ ಹೆಣವಾದ ಕುರಿಕೃಷ್ಣ



ವಿಷ್ಣು ಇಲ್ಲದ ಹುಟ್ಟುಹಬ್ಬ



ಭಾರತಿ v/s ಆಪ್ತರಕ್ಷಕ

ಮನದ ಬಾಗಿಲ ಮುಚ್ಚಿ ಮನೆಯ ಬಾಗಿಲ ತೆರೆದವರು!



ಪೇಜಾವರ ಸ್ವಾಮೀಜಿಗಳ ದಲಿತ ಕಾಲೋನಿ ಯಾತ್ರೆಗೆ ಪ್ರತಿಯಾಗಿ ಮಾದಾರ ಚನ್ನಯ್ಯ ಸ್ವಾಮೀಜಿಗಳು ಮೈಸೂರಿನಲ್ಲಿ ಬ್ರಾಹ್ಮಣ ಕೇರಿಯಲ್ಲಿ ಪ್ರಾರಂಭಿಸಿರುವ ಪಾದಯಾತ್ರೆಯಲ್ಲಿ ಒಂದು ಬ್ರಾಹ್ಮಣ ಮನೆಯವರು ಅವರ ಕಾಲು ತೊಳೆದು ರಾತ್ರಿ ತಂಗಲು ಅವಕಾಶ ಕೊಟ್ಟಿರುವುದನ್ನು ನೋಡಿ ದೇವನೂರರ ಇತ್ತೀಚಿನ ಲೇಖನವೊಂದು ಜ್ಞಾಪಕಕ್ಕೆ ಬಂತು. "ಸಂವಿಧಾನಕ್ಕೆ ಭೂತಚೇಷ್ಟೆ" ಎಂಬ ಹೆಸರಿನ ಆ ಲೇಖನದ ಕೊನೆಯಲ್ಲಿ ಒಂದು ಪ್ರಸಂಗವನ್ನು ದೇವನೂರು ಮಹಾದೇವ ಅವರು ನೆನಪಿಸಿಕೊಂಡಿದ್ದಾರೆ. ಚಾಮರಾಜನಗರದ ಹಳ್ಳಿಯೊಂದರ ಟೀ ಅಂಗಡಿಯಲ್ಲಿ ದಲಿತರಿಗೆ ಬಹಿಷ್ಕಾರ ಹಾಕಲಾಗಿರುತ್ತದೆ. ಇದನ್ನು ಪ್ರತಿಭಟಿಸಲು ಕೃಷ್ಣ ಆಲನಹಳ್ಳಿ, ದೇವನೂರು ಮತ್ತು ಇತರ ದಲಿತ ಕಾರ್ಯಕರ್ತರು ಟೀ ಅಂಗಡಿಯತ್ತ ಹೊರಡುತ್ತಾರೆ. ಆ ಟೀ ಅಂಗಡಿ ಹತ್ತಿರ ಬರುತ್ತಿದ್ದಂತೆ ಆ ಅಂಗಡಿಯ ಗಲೀಜು, ಅದರ ಬದಿಯಲ್ಲಿರುವ ಚರಂಡಿಯಿಂದ ಹೊರಬರುತ್ತಿರುವ ಗಬ್ಬುನಾತ, ಲೋಟದ ತುಂಬಾ ಮುತ್ತಿಕೊಂಡಿರುವ ನೊಣಗಳು..ಇವನ್ನೆಲ್ಲಾ ಕಂಡು ಕೃಷ್ಣ ಆಲನಹಳ್ಳಿ ದೇವನೂರರಿಗೆ "ಮಹಾದೇವ, ಈ ಹೋಟೆಲ್‌ನಲ್ಲಿ ದಲಿತರು ಟೀ ಕುಡಿಯಲಿಲ್ಲ ಅಂದ್ರೆ ಅವರು ಏನು ಕಳೆದುಕೊಳ್ಳುತ್ತಾರೆ" ಎಂದು ಕೇಳುತ್ತಾರೆ. ಆಗ ದೇವನೂರು ಅವರಿಗೆ "ನಾವು ಅವರ ಹೋಟೆಲ್‌ಗೆ ಅಲ್ಲ, ಅವರ ಮನಸ್ಸಿಗೆ ಪ್ರವೇಶ ಕೇಳುತ್ತಿದ್ದೇವೆ" ಎಂದು ಕಾವ್ಯಾತ್ಮಕವಾಗಿ ಉತ್ತರಿಸಿ ಸುಮ್ಮನಾಗಿಸುತ್ತಾರೆ.

ಮಾದಾರ ಚನ್ನಯರನ್ನು ಪೇಜಾವರರು ತಮ್ಮೊಡನೆ ಬರಮಾಡಿಕೊಂಡಿದ್ದನ್ನು ನೋಡಿ ಈ ಪ್ರಸಂಗ ನನಗೆ ಜ್ಞಾಪಕ ಬಂದಿದ್ದಕ್ಕೆ ಕಾರಣವಿದೆ. ಮಾದಾರ ಚನ್ನಯ್ಯರವರು ಮತ್ತು ಈ ನಾಡಿನ ಎಲ್ಲಾ ದಲಿತ ಶೂದ್ರರು ಪ್ರವೇಶ ಕೇಳುತ್ತಿದ್ದದ್ದು ಬ್ರಾಹ್ಮಣರ ಅಗ್ರಹಾರಗಳಿಗೋ? ಮನುಷ್ಯತ್ವವಿರುವ ಮನ-ಮನೆಗಳಿಗೋ? ಈ ಪ್ರಶ್ನೆ ಕೇಳುತ್ತಿರುವುದಕ್ಕೂ ಕಾರಣವಿದೆ.

ಮಾದಾರ ಚನ್ನಯ್ಯರನ್ನು ಮನೆ ಒಳಗೆ ಬರಮಾಡಿಕೊಂಡ ಮೈಸೂರಿನ ಆ ಬ್ರಾಹ್ಮಣರು ಕರ್ನಾಟಕದ ಜನರಿಗೆ ಪರಿಚಯವಿಲ್ಲ, ಅವರು ಸಜ್ಜನರೇ ಇರಬಹುದು. ಪೇಜಾವರರ ಮತ್ತು ಮಾದಾರ ಚನ್ನಯರ ಸವಾಲಿನ ನಿಮಿತ್ತವಿಲ್ಲದೆಯೂ ಅವರು ದಲಿತರೊಡನೆ ಸಹಭೋಜನ ಮಾಡುತ್ತಲೇ ಬಂದಿರಬಹುದು. ದಲಿತರೊಂದಿಗೆ ಮದುವೆ ಸಂಬಂಧವನ್ನೂ ಬೆಳೆಸಿರಬಹುದು. ಈ ಸಂದರ್ಭವನ್ನು ಸಂಘಪರಿವಾರದ ಹುಸಿ ಹಿಂದೂ ಐಕ್ಯತೆಯ ಪ್ರದರ್ಶನದ ಥಿಯೇಟರ್ ಆಗಿ ಬಳಸಿಕೊಳ್ಳುತ್ತಿರುವ ಚೆಡ್ಡಿ ಪರಿವಾರದ ನಿಮಿತ್ತವೂ ಇಲ್ಲದೆ ಈ ನಾಡಿನ ಹಲವಾರು ಬ್ರಾಹ್ಮಣ ಕುಟುಂಬಗಳಂತೆ ಅವರೂ ಸಹ ಜಾತ್ಯತೀತರಾಗಿ ಬದುಕುತ್ತಿರಬಹುದು ಅಥವಾ ಅವರೂ ಸಹ ವಿಶ್ವೇಶತೀರ್ಥ ಸ್ವಾಮೀಜಿಗಳ ವಿಶ್ವಾತ್ಮಕ ಸಂಚಿನ ಭಾಗವಾಗಿ ಮಾದಾರ ಚನ್ನಯ್ಯರನ್ನು ಒಳಗೆ ಬಿಟ್ಟುಕೊಂಡು ನಂತರ ಪಂಚಗವ್ಯ ಸೇವಿಸಿ ಮನೆಯನ್ನೂ ಮತ್ತು ಮನಸ್ಸನ್ನು ಪುತ್ತೆ ಬ್ರಾಹ್ಮಣೀಕರಿಸಿಕೊಳ್ಳುವ ಬ್ರಾಹ್ಮಣರೂ ಆಗಿರಬಹುದು.



ಅದೇನೇ ಇರಬಹುದು, ಇದು ನಿರ್ದಿಷ್ಟವಾಗಿ ಮಾದಾರ ಚನ್ನಯ್ಯರನ್ನು ಮನೆಯೊಳಗೆ ಬಿಟ್ಟುಕೊಂಡ ಆ ನಿರ್ದಿಷ್ಟ ಬ್ರಾಹ್ಮಣ ಕುಟುಂಬದ ಬಗ್ಗೆಯಲ್ಲ, ಏಕೆಂದರೆ ಇಲ್ಲಿ ಕ್ರಿಯೆಗಿಂತ ಅದರ ಹಿಂದಿನ ಸಾಂಕೇತಿಕ ಅರ್ಥವೇ ಪ್ರಧಾನವಾದದ್ದು.

ಬ್ರಾಹ್ಮಣರ ಕೇರಿಯಲ್ಲಿ ಮಾದಾರ ಚನ್ನಯ್ಯರ ಪಾದಯಾತ್ರೆಯ ಸಾಂಕೇತಿಕ ಮಹತ್ವ ಇದ್ದದ್ದು ಬ್ರಾಹ್ಮಣರು ದಲಿತರನ್ನು ದೈಹಿಕವಾಗಿ ಮನೆಯೊಳಗೆ ಬಿಟ್ಟುಕೊಳ್ಳುತ್ತಾರಾ ಎಂಬುದರಲ್ಲಲ್ಲ, ಆಧುನಿಕ ನಗರ ಸಮಾಜ ಮತ್ತು ಆರ್ಥಿಕತೆಯ ಅನಿವಾರ್ಯಗಳು ಮೇಲ್ವರ್ಗದ ದಲಿತರನ್ನು ಬ್ರಾಹ್ಮಣರ ಜಗುಲಿಯಿಂದ ಪಡಸಾಲೆಗೆ ದೂಡಿದೆ. ಅದರೊಡನೆ ಇಷ್ಟೆಲ್ಲಾ ಭಾಜಾ ಭಜಂತ್ರಿಯ ಪ್ರಚಾರ, ಮಾಧ್ಯಮಗಳ ಗಮನ ಮತ್ತು ಈ ಸಂದರ್ಭವನ್ನು ತಥಾಕಥಿತ ಹಿಂದೂ ಐಕ್ಯತೆಯ ದೃಶ್ಯಪಟವನ್ನಾಗಿ ಪರಿವರ್ತಿಸಿಕೊಳ್ಳಬಹುದಾದ ಸಾಧ್ಯತೆ ಎಲ್ಲವೂ ಇದ್ದಾಗ ಬ್ರಾಹ್ಮಣರ ಮನೆಯೊಳಗೆ ದಲಿತ ಸ್ವಾಮಿಯೊಬ್ಬರ ದೈಹಿಕ ಪ್ರವೇಶ ಐತಿಹಾಸಿಕವಾದದ್ದೇನೂ ಅಲ್ಲ, ನೂರು ವರ್ಷಗಳ ಹಿಂದೆ ಇದೇ ಘಟನೆಗೆ ಮಹತ್ವದ ರಾಜಕೀಯ ಮತ್ತು ಸಾಂಸ್ಕೃತಿಕ ಅರ್ಥ ಪ್ರಾಪ್ತವಾಗುತ್ತಿತ್ತು.

ಇವತ್ತಿನ ಕಾಲಘಟ್ಟದಲ್ಲಿ ನಿಜಕ್ಕೂ ಮಹತ್ವ ಪಡೆಯುವುದು ಮನೆಯೊಳಗಿನ ಪ್ರವೇಶವಲ್ಲ, ಮನದೊಳಗಿನ ಪ್ರವೇಶ. ಅರ್ಥಾತ್ ಮನೆಗೆ ಬಂದ ಅಭ್ಯಾಗತನನ್ನು ನಿಜಕ್ಕೂ ಗೌರವಿಸಿ ಸತ್ಕರಿಸಲಾಯಿತೇ ಎಂಬುದು ಇಲ್ಲಿ ಮಹತ್ವದ ಪ್ರಶ್ನೆ. ಆದರೆ ಇಲ್ಲೂ ಕೇಳಬೇಕಾದ ನೈಜ ಪ್ರಶ್ನೆಯೊಂದಿದೆ. ಮಾದಾರ ಚನ್ನಯ್ಯರ ಪಾದಪೂಜೆ ಮಾಡಿ ಅತ್ಯುತ್ತಮ ಆಹಾರ ಕೊಟ್ಟು ಉಪಚಾರ ಮಾಡಿದ್ದನ್ನು ಮಾದಾರ ಚನ್ನಯ್ಯರು ಪ್ರತಿನಿಧಿಸುವ ದಲಿತ ಸಮುದಾಯಕ್ಕೆ ಬ್ರಾಹ್ಮಣರು ಮತ್ತವರ ಕುಲಗುರು ಪೇಜಾವರ ಸ್ವಾಮಿ ನೀಡಿದ ಗೌರವ ಎಂದು ಪರಿಗಣಿಸಲು ಸಾಧ್ಯವೇ?

ಖಂಡಿತಾ ಇಲ್ಲ, ಏಕೆಂದರೆ ಒಬ್ಬ ಮನುಷ್ಯ ಎದುರು ಮನುಷ್ಯನಿಗೆ ಗೌರವ ನೀಡಿದ್ದಾರೆಂದು ಭಾವಿಸಬೇಕಾದರೆ ಅವರ ಬಗ್ಗೆ ಮನದಲ್ಲಿ ಹೀನಾಯಭಾವನೆ ಇಲ್ಲದೇ ಇರಬೇಕಾದದ್ದು ಕನಿಷ್ಠ ಪೂರ್ವ ಷರತ್ತು. ಆದರೆ ಪೇಜಾವರ ಸ್ವಾಮೀಜಿಯವರಿಗೆ ಮಾದಾರ ಚನ್ನಯ್ಯರನ್ನೂ ಒಳಗೊಂಡಂತೆ ದಲಿತ ಸಮುದಾಯದ ಬಗ್ಗೆ ಮತ್ತು ಅವರ ಸಂಸ್ಕೃತಿಯ ಬಗ್ಗೆ ಹೀನಾಯ ಮನೋಭಾವ ವಿದೆಯೋ? ಗೌರವ ಭಾವವಿದೆಯೋ?

ಈಗ್ಗೆ ಒಂದೆರಡು ವಾರದ ಕೆಳಗೆ ದಲಿತ ಕಾಲೋನಿಯಲ್ಲಿ ಸಂಚಾರ ಮಾಡುತ್ತಿದ್ದ ಪೇಜಾವರರು ದಲಿತರು ಮಾಂಸಾಹಾರವನ್ನು ತ್ಯಜಿಸುವುದಾದರೆ ಅವರಿಗೆ ವೈಷ್ಣವ ದೀಕ್ಷೆ ಕೊಡುವುದಾಗಿ ಹೇಳಿದ್ದರು. ಈ ಹೇಳಿಕೆಯ ಸಾರಾಂಶವೇನು? ವೈಷ್ಣವ ದೀಕ್ಷೆ ಪಡೆದುಕೊಳ್ಳಲು ಮಾಂಸಾಹಾರ ಮತ್ತು ಮದ್ಯಪಾನಗಳನ್ನು ತ್ಯಜಿಸುವುದು ಕಡ್ಡಾಯ ಎನ್ನುವ ಮೂಲಕ ಈ ಪೇಜಾವರ ಸ್ವಾಮೀಜಿ ತನ್ನ ಧರ್ಮದ ನೀತಿ ಸೂತ್ರಗಳನ್ನು ಹೇಳುತ್ತಿಲ್ಲ, ಬದಲಿಗೆ ಈ ದೇಶದ ಬಹುಸಂಖ್ಯಾತ ಜನರ ಬದುಕುವ ವಿಧಾನಗಳ ಬಗ್ಗೆ ಮತ್ತು ಆಹಾರ ಸಂಸ್ಕೃತಿಯ ಬಗ್ಗೆ ಬ್ರಾಹ್ಮಣೀಯ ಅವಹೇಳನ ಮಾಡುತ್ತಿದ್ದಾರೆ.

ಮೊದಲಿಂದಲೂ ಮನದೊಳಗೆ ದಲಿತರ ಬಗ್ಗೆ ಈ ಬಗೆಯ ಹೀನಾಯವಾದ ಭಾವನೆಯನ್ನು ಇಟ್ಟುಕೊಂಡೇ ಪೇಜಾವರರು ದಲಿತರ ಕೇರಿಯಲ್ಲಿ ಸಂಚರಿಸುತ್ತಾ ಬಂದಿದ್ದಾರೆ. ಯಾವಾಗ ದಲಿತರು ಮತಾಂತರವಾಗತೊಡಗಿದರೋ ಮತ್ತು ಬ್ರಾಹ್ಮಣ್ಯದ ವಿರುದ್ಧ ಸಂಘಟಿತ ಪ್ರತಿರೋಧ ತೋರುತ್ತಿದ್ದರೋ ಆ ಎಲ್ಲಾ ಸಂದರ್ಭಗಳಲ್ಲೂ ಪೇಜಾವರ ಸ್ವಾಮಿಗಳು ಮನಸ್ಸಿನೊಳಗೆ ಮಾತ್ರ ದಲಿತರ ಸಂಸ್ಕೃತಿಯ ಬಗ್ಗೆ ಅಸಹ್ಯ ಭಾವನೆಯನ್ನಿಟ್ಟುಕೊಂಡೇ ಅಸ್ಪೃಶ್ಯತೆಯ ವಿರುದ್ಧ ಮತ್ತು ಹಿಂದೂ ಧರ್ಮದೊಳಗಿರುವ ಕೆಲವು ಮೌಢ್ಯಗಳ ವಿರುದ್ಧ ತಮ್ಮ ದನಿಯನ್ನೂ ಸೇರಿಸುತ್ತಾ ಬಂದಿದ್ದಾರೆ. ಆ ಮೂಲಕ ಈ ಆಧುನಿಕ ಕಾಲದಲ್ಲಿ ಬ್ರಾಹ್ಮಣ್ಯದ ತಾರತಮ್ಯವನ್ನು ದಲಿತರಿಗೆ ಸಹ್ಯವಾಗುವಂತೆ ಮಾಡಲು ಪ್ರಯತ್ನಿಸುತ್ತಲೇ ಬರುತ್ತಿದ್ದಾರೆ. ಅವರ ಈವರೆಗಿನ ಈ ಎಲ್ಲಾ ಪ್ರಯತ್ನಗಳ ಸಾರಾಂಶವೊಂದೇ! ಬದಲಾಗುತ್ತಿರುವ ಸಂದರ್ಭದಲ್ಲಿ ಅದರಲ್ಲೂ ದಲಿತ ಮತ್ತು ಶೂದ್ರಪ್ರಜ್ಞೆ ಜಾಗೃತಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಆ ಶಕ್ತಿಗಳು ಬ್ರಾಹ್ಮಣ್ಯದ ಅಡಿಯಾಳುತನದಿಂದ ಮುಕ್ತಗೊಳ್ಳದಂತೆ ಹಿಡಿದಿಟ್ಟುಕೊಳ್ಳುವುದು.

ಈ ಕುತಂತ್ರದ ಹೊಸ ವರಸೆಯೇ ಈ ವೈಷ್ಣವ ದೀಕ್ಷೆಯ ವಿಷಪ್ರಾಶನ. ಈ ದೇಶದಲ್ಲಿ ಪ್ರಾರಂಭದಲ್ಲಿ ಶಾಖಾಹಾರಿ ಮತ್ತು ಮಾಂಸಾಹಾರಿ ಎಂಬ ಆಹಾರ ಸಂಸ್ಕೃತಿ ಆಧಾರಿತ ಶ್ರೇಣೀಕರಣವೇ ಇರಲಿಲ್ಲ.

ಮಾಂಸಾಹಾರ ತ್ಯಜಿಸಿದರೆ ಮಾತ್ರ ತಮ್ಮ ಜೊತೆಗೆ ಸರಿಸಮರಾಗುತ್ತೀರಿ ಎಂದು ಹೇಳುವ ಮೂಲಕ ಪೇಜಾವರರು ಸಂವಿಧಾನಕ್ಕೆ ವ್ಯತಿರಿಕ್ತವಾದ ತಾರತಮ್ಯ ಮಾಡುತ್ತಿದ್ದಾರೆ.

ಚಾರ್ವಾಕ

ಶಿವಸುಂದರ್

ಹೀಗಾಗಿ ಮಾದಾರ ಚನ್ನಯ್ಯ ತನಗಿಂತ ಕೀಳು ಎಂಬ ಭಾವನೆ ಮನದಲ್ಲಿಟ್ಟುಕೊಂಡೇ ಅವರು ತೋರುವ ಪಾದಮಜ್ಜನದಂಥಾ "ಗೌರವ"ಗಳೆಲ್ಲಾ ಈ ಕಾಲದ ದೊಡ್ಡ ಅಪಮಾನಗಳೇ. ಸಾರಾಂಶದಲ್ಲಿ ಪೇಜಾವರರು ದಲಿತರಿಗೆ ಹಿಂದೂ ಸಮಾಜದಲ್ಲಿ ನೀಡುವ ಸ್ಥಾನ ಕೀಳಾದದ್ದೇ ಎಂದು ಮತ್ತೊಮ್ಮೆ ರುಜುವಾತು ಮಾಡಿದ್ದಾರೆ. ಇಂಥಾ ಅಮಾನವೀಯತೆಯ ಚರಂಡಿಯ ಮೇಲಿರುವ, ತಾರತಮ್ಯದ ವಾಸನೆ ಹೊಡೆಯುತ್ತಿರುವ, ಬ್ರಾಹ್ಮಣ್ಯದ ನೊಣಗಳು ಮುತ್ತಿಕೊಂಡು ಜಾತಿಯ ಗಬ್ಬುನಾತ ಹೊಡೆಯುತ್ತಿರುವ ಈ ಅಗ್ರಹಾರದ ಹೋಟೆಲಿನಲ್ಲಿ ಮಾದಾರ ಚನ್ನಯರು ಟೀ ಕುಡಿಯದಿದ್ದರೆ ದಲಿತರು ಏನನ್ನೂ ಕಳೆದುಕೊಳ್ಳುವುದಿಲ್ಲ.

ಮಾದಾರ ಚನ್ನಯ್ಯರು ಪ್ರತಿನಿಧಿಸುವ ದಲಿತರ ಸಹಜ ಆಹಾರ ಪದ್ಧತಿಯ ಭಾಗವಾದ ಮಾಂಸಾಹಾರವನ್ನು ಸಸ್ಯಾಹಾರಿಗಳಾದ ಪೇಜಾವರರು ಅಷ್ಟೇ ಗೌರವದಿಂದ ಕಾಣಬೇಕಿದೆ. ಮಾದಾರ ಚನ್ನಯ್ಯರ ತಮ್ಮ ಜನಾಂಗದ ಸಹಜ ಆಹಾರವಾದ ಮಾಂಸಾಹಾರವನ್ನು, ಪೇಜಾವರರು ತಮಗೆ ಸಹ್ಯ ಎನ್ನುವ ಭೋಜನವನ್ನು ಯಾವುದೇ ಅಗೌರವಗಳಿಲ್ಲದೆ ಒಟ್ಟಿಗೆ ಸಹಭೋಜನ ಮಾಡಿದ ದಿನ ಈ ಕ್ರಿಯೆಗೆ ಸಾಂಕೇತಿಕವಾಗಿಯಾದರೂ ಒಂದು ಅರ್ಥ ಬರುತ್ತದೆ. ಬ್ರಾಹ್ಮಣ್ಯದ ತಾರತಮ್ಯವನ್ನೇ ಉಸಿರಾಡುವ ಸಮಾಜಕ್ಕೆ ಒಂದು ಸಂದೇಶವನ್ನಾದರೂ ಕಳಿಸಿದಂತಾಗುತ್ತದೆ. ಇವು ಯಾವುದನ್ನೂ ಮಾಡದೆ, ದಲಿತರು ಈ ಹಿಂದಿನಂತೆ ಬ್ರಾಹ್ಮಣರಿಂದ ಯಾವುದೇ ಮಾನ್ಯತೆಯನ್ನು ನಿರೀಕ್ಷಿಸದೆ ಸಂವಿಧಾನ ಒದಗಿಸಿರುವ ಅವಕಾಶದಲ್ಲಿ ಹೊಸ ಆತ್ಮವಿಶ್ವಾಸವನ್ನೂ ಪಡೆದುಕೊಳ್ಳುತ್ತಿರುವಾಗ ನೀವು ಮಾಂಸಾಹಾರ ತ್ಯಜಿಸಿದರೆ ನಿಮಗೆ ವೈಷ್ಣವ ದೀಕ್ಷೆ ಕೊಡುತ್ತೇನೆ ಬನ್ನಿ ಎಂದು ಆಹ್ವಾನ ಕೊಡುತ್ತಿದ್ದಾರೆ.

ಆ ಹೋಟೆಲಿನ ರೂಪಕದಲ್ಲೇ ಹೇಳುವುದಾದರೆ ಆ ಗಲೀಜು ತುಂಬಿದ ಹೋಟೆಲಿನ ಎದುರಿಗೆ ಅತ್ಯುತ್ತಮ ಹೋಟೆಲೊಂದು ಅಗ್ಗದ ದರದಲ್ಲಿ ಎಲ್ಲರಿಗೂ ಟೀ ಕೊಡಲು ಪ್ರಾರಂಭಿಸಿದಾಗ ಪೇಜಾವರರು ಈಗ ಪ್ಲಾಸ್ಟಿಕ್ ಲೋಟದಲ್ಲಿ ನಿಮಗೆ ಟೀ ಕೊಡುತ್ತೇವೆ ಬನ್ನಿ ಎಂದು ದಲಿತರನ್ನು ಕರೆಯುವಂತಿದೆ ಈ ಪ್ರಯತ್ನ!!

ವಾಸ್ತವವಾಗಿ ದಲಿತರಿಗೆ ವೈಷ್ಣವ ದೀಕ್ಷೆಯ ಅಗತ್ಯವೇ ಇಲ್ಲ, ಅತ್ಯಗತ್ಯವಾಗಿ ಆಗಬೇಕಿರುವುದು ಪೇಜಾವರರಿಗೆ ಮತ್ತು ಅವರಂತ ಬ್ರಾಹ್ಮಣ್ಯದ ಮನಸ್ಸುಗಳಿಗೆ ಸಂವಿಧಾನ ದೀಕ್ಷೆ ಕೊಡುವುದು ಮಾತ್ರ ತುರ್ತಾಗಿ ಆಗಬೇಕಿದೆ.

ನೋ ಕಾಮೆಂಟ್ಸ್

"2008ರಲ್ಲಿ ವಿತರಿಸಲಾದ ಗ್ರಾಮೀಣ ಸಾಲಗ
ಹೆಚ್ಚೂಕಡಿಮೆ ಅರ್ಧಕ್ಕಿಂತ ಹೆಚ್ಚು ಸಾಲ ವಿತರಣೆಯ
ರುವುದು ಗ್ರಾಮೀಣ ಬ್ಯಾಂಕ್‌ಗಳಿಂದಲ್ಲ, ಬದ
ಅರ್ಬನ್ ಮತ್ತು ಮೆಟ್ರೊಪಾಲಿಟನ್ ಬ್ಯಾಂಕ್‌ಗಳಿ
ಅದರಲ್ಲಿ ಶೇ.42ರಷ್ಟು ಭಾಗ ವಿತರಣೆಯಾಗಿರುವು
ಮುಂಬೈನಲ್ಲಿ, ಇದರರ್ಥ ಕೆಲವು ಬೃಹತ್ ಉದ್ದಿಮೆ
ಈ ಗ್ರಾಮೀಣ ಸಾಲವನ್ನು ಲಪಟಾಯಿಸು
ಎಂದಾಯ್ತಲ್ಲವೇ?"

- ಪಿ. ಸಾಯಿನಾ

"2001ರಲ್ಲಿ 64 ಮಿಲಿಯನ್ ಟನ್ನಿನಷ್ಟು ಆಹ
ಧಾನ್ಯಗಳು ಗೋದಾಮುಗಳಲ್ಲಿದ್ದಾಗ 28 ಮಿಲಿಯ
ಟನ್ನಿನಷ್ಟು ಧಾನ್ಯವನ್ನು ಶ್ರೀಮಂತರ ಜಾನುವಾರು
ಮೇವಿಗಾಗಿ ರಫ್ತು ಮಾಡಲಾಯಿತು. 2004ರ ಯೋಜ
ಆಯೋಗದ ವರದಿಯ ಪ್ರಕಾರ ಶೇ.58ರಷ್ಟು ಪಡಿ
ಆಹಾರ ಧಾನ್ಯಗಳು ತಲುಪಬೇಕಾದವರಿಗೆ ತಲುಪುವು
ಈ ದೇಶದಲ್ಲಿ ಆರ್ಥಿಕ ಪ್ರಗತಿ ಎಷ್ಟೇ ವೇಗಗತಿಯ
ನಡೆಯುತ್ತಿದ್ದರೂ ಅದರ ಲಾಭ ಈ ದೇಶದ ಬಡಜನ
ಮಾತ್ರ ದಕ್ಕುತ್ತಿಲ್ಲ, ಇಷ್ಟೆಲ್ಲಾ ಪ್ರಗತಿಯ ನಡುವೆಯ
ನಮ್ಮ ದೇಶ ಈಗಲೂ ಪ್ರಪಂಚದಲ್ಲೇ ಅತಿ ಹ
ಅಪೌಷ್ಟಿಕತೆಯಿಂದ ನರಳುವವರ ದೇಶವಾಗಿದೆ. ಇ
ದೊಡ್ಡ ದೇಶಕ್ಕೆ ಉಚಿತವಾಗಿ ಆಹಾರ ಧಾನ್ಯ ವಿತ
ಮಾಡುವುದು ಸಾಧ್ಯವಿಲ್ಲ ಎಂದು ಪ್ರಧ
ಹೇಳುತ್ತಿರುವುದು ಕೇವಲ ನೆಪ. ಈ ದೇಶದಲ್ಲಿ 6
ಶಾಲೆಗಳಿವೆ. 10 ಲಕ್ಷ ಅಂಗನವಾಡಿ ಕೇಂದ್ರಗಳ
ಅವುಗಳ ಮೂಲಕ ಆಹಾರ ವಿತರಣೆ ಮಾಡುವು
ಏನೂ ಕಷ್ಟವಲ್ಲ."

- ಎನ್. ಸಿ. ಸಕ್ಸೇನಾ, ರಾಷ್ಟ್ರೀಯ ಸಲ
ಮಂಡಳಿ ಸ

ನಂಬಿದ್ರೆನಂಬಿ ಬಿಟ್ರೆಬಿಡಿ

"ಗೋಹತ್ಯಾ ನಿಷೇಧ ಕಾನೂನು ಜಾರಿಯ
ಮತೀಯ ಭಾವನೆಗಳು ಅಂಟಿಕೊಂಡಿವೆ. ಸರ್ಕಾರ ವಾ
ಸ್ಥಿತಿ ಅರಿತು ಕಾನೂನು ಜಾರಿ ಮಡಬೇಕು. ಇಲ್ಲವಾ
ಸಮುದಾಯಗಳ ನಡುವೆ ಸಂಘರ್ಷಕ್ಕೆ ಎಡೆಮ
ಕೊಟ್ಟಂತಾಗುತ್ತದೆ."

- ಶತಾವಧಾನಿ ಗಣೇ

"ಗೋಹತ್ಯಾ ನಿಷೇಧ ಕಾಯಿದೆಗೆ ಸಂಬಂಧಪಟ್ಟ
ಬಜೆಪಿ ಸಭೆ-ಸಮಾವೇಶ ನಡೆಸುತ್ತಿರುವುದು ಜನ
ಜಾಗೃತಿ ಮೂಡಿಸುವುದಕ್ಕಾಗಿಯೇ ವಿನಃ ರಾಜ್ಯಪಾ
ವಿರುದ್ಧ ಅಲ್ಲ."

- ವಿ.ಎಸ್. ಆಚಾಯ

"ಭಾರತ ಸರ್ಕಾರದ ಅಂಕಿಅಂಶಗಳ ಪ್ರಕಾರ
ಅತಿಹೆಚ್ಚು ಸಂದರ್ಭಗಳಲ್ಲಿ ರೋಗನಿದಾನಕ್ಕಾಗಿ ಬ
ಯಾಗುವ ಆಂಟಿ ಬಯಾಟಿಕ್ ಔಷಧವಾದ ಸಿಪ್ರಾಪ
ಸಿನ್-500ಎಂಜಿ ಯ ಹತ್ತು ಟ್ಯಾಬ್ಲೆಟ್‌ಗಳಿಗೆ ಭಾರತ
ಕೇವಲ ರೂ. 39 ಆದರೆ, ಅಮೆರಿಕಾದಲ್ಲಿ
ಔಷಧದ ದರ ರೂ.1818!. ಇನ್ಸುಲಿನ್‌ನ 100
ಔಷಧಕ್ಕೆ ಭಾರತದಲ್ಲಿ ಕೇವಲ 158 ರೂ. ತಗುಲಿ
ಅಮೆರಿಕದಲ್ಲಿ ರೂ. 30,936.40 ಆಗುತ್ತದೆ."

- ವ

ಬ್ರಹ್ಮಕುಮಾರಿಯರೇ ಬ್ರಹ್ಮಾಂಡವೆಂದುಕೊಂಡಾಗ!

"ಯಾವ ಸಂಸ್ಥೆಯೂ ಟೀಕೆಗಳಿಂದ ಮುಕ್ತವಾ
ಆದರೆ ಇಡೀ ಪ್ರಪಂಚದಲ್ಲಿ ಬ್ರಹ್ಮಕುಮಾರಿ ಸಂಸ
ಕುರಿತು ಯಾವುದೇ ರೀತಿಯ ಟೀಕೆಗಳನ್ನು ಕಾಣ
ಸಾಧ್ಯವಿಲ್ಲ."

- ಬಸಂತ್ ಕುಮಾರ್ ಪಾಟೀ

ವಚನಕಾರರು ಇವರ ಲೆಕ್ಕದಲ್ಲಿ ಸಾಹಿತಿಗಳೇ ಅಲ್ಲ!

ನನ್ನದು ಕನ್ನಡ ಪ್ರೀತಿ. ಆದರೂ, ದೇಸಿ ಭಾಷ
ಉ ವಿಗೆ ಸಂಸ್ಕೃತ ಅಗತ್ಯ. ಸಾಹಿತಿಯಾದವನಿಗೆ ಸಂ
ಜ್ಞಾನ ಇರಲೇ ಬೇಕು."


-ಎಸ್. ಎಲ್. ಭೈ

ಸೆಲೆಬ್ರಿಟಿಗಳ ದೇಶಪ್ರೇಮಕ್ಕೆ ಸಾಮಾ ಜನರು ತೆರಬೇಕಾದ ಬೆಲೆ!

"ಒಂದೆಡೆ ತಾವೇ ಸಂಗೀತ ನಿರ್ದೇಶನ ಮಾ
"ತಾಲ್" ಚಿತ್ರದ "ರಮ್ತಾ ಜೋಗಿ" ಚಿತ್ರದ ಬೀಟುಗ
ಉಳಿದಂತೆ ಯಾವ ಗಾಢವಾದ ಅರ್ಥವನ್ನೂ ಹೊಂದಿ
ಬಾಲಿವುಡ್ಡಿನ ಈಗಿನ ಫಿಲ್ಮೀ ಲಿರಿಕ್ಸ್‌ಗಳು ಮಾತ್ರ ಇ
ಕಾಮನ್‌ವೆಲ್ತ್ ಗೇಮ್ಸ್‌ನ ಸ್ವಾಗತ ಗೀತೆಯನ್ನು ಕಂಪೋ
ಮಾಡಲು ಶ್ರೇಷ್ಠ ಸಂಗೀತ ನಿರ್ದೇಶಕ ಎ.ಆರ್. ರೆಹಮಾ
ವಿಧಿಸಿರುವ ಶುಲ್ಕವೆಷ್ಟು ಗೊತ್ತೆ? ಕೇವಲ 5.5 ಕೋ
ರೂಪಾಯಿಗಳು. ಅಂದರೆ ಒಂದು ನಿಮಿಷಕ್ಕೆ 1
ಕೋಟಿ ರೂ.ಗಳು!!"

-ಸದಾನಂದ ಮೆನನ್, ಲೇ

...ಬಂದೂಕಿನಡಿ ಬದುಕುವ ನಾಡಿಗೆ ಹೊರಟು...



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಸಾಮಾನ್ಯವಾಗಿ ನಮ್ಮ ಶಿವಸುಂದರ್ ಅವರ ...ರ್ವಾಕ' ಅಂಕಣದೊಂದಿಗೆ 'ನಂಬಿದ್ರೆ ನಂಬಿ ಬಿಟ್ಟರೆ ...' ಎಂಬ ವ್ಯಂಗ್ಯ ಚಟಾಕಿ ಇರುತ್ತದೆ. ಈ ಬಾರಿ ನನ್ನ ಅಂಕಣದಲ್ಲಿ 'ನಂಬಲು ಅಸಾಧ್ಯವಾದರೂ ನಂಬಿ' ...ದು ಗಂಭೀರವಾಗಿ ಹೇಳುವ ಪ್ರಸಂಗ ಎದುರಾಗಿದೆ. ...ಕಳೆದ ಹತ್ತು ವರ್ಷಗಳಲ್ಲಿ ನಮ್ಮ ತಂಡ ಎಂದೂ ...ಕೆಯನ್ನು ತಡವಾಗಿ ಮುದ್ರಣಕ್ಕೆ ಕಳುಹಿಸಿಲ್ಲ, ಹಾಗೆಯೇ ...ು ಎಂದೂ ಪತ್ರಿಕೆ ಮುದ್ರಣಗೊಳ್ಳುವ ದಿನ ...ಗಳೂರಿನಿಂದ ಬೇರೆ ಊರಿಗೆ ಹೋಗಿದ್ದಿಲ್ಲ. (ಹಾಗೆ ...ವಾರ್ಯವಾಗಿ ಹೊರಗಿದ್ದ ಎರಡು ಪ್ರಸಂಗಗಳು ...ಭವಿಸಿದ್ದು ಬಾಬಾಬುಡನ್‌ಗಿರಿಗೆ ಸಂಬಂಧಿಸಿದ ...ರಾಟದಲ್ಲಿ ನಾನು ಒಮ್ಮೆ ಚಿಕ್ಕಮಗಳೂರು ಜೈಲಿನಲ್ಲಿ ...ಬಂಧನಕ್ಕೊಳಗಾಗಿದ್ದಾಗ ಮತ್ತು ನಮ್ಮೆಲ್ಲರ ಬಂಧನವನ್ನು ...ಖಂಡಿಸಿ ಅದೇ ಚಿಕ್ಕಮಗಳೂರಿನಲ್ಲಿ ಬೃಹತ್ ಸಮಾವೇಶ ...ದಾಗ ಮಾತ್ರ). ನಮ್ಮ ತಂಡದ ಈ ಶಿಸ್ತನ್ನು ಕಂಡು ... ಪತ್ರಿಕೆಗಳ ಸಂಪಾದಕರು ಮೆಚ್ಚುಗೆಯನ್ನು ಸೂಚಿಸಿದ್ದೂ ...ಿದೆ.

...ಇಷ್ಟು ಹೇಳಿದ ನಂತರ ನನಗೇ ನಂಬಲು ಅಸಾಧ್ಯ ...ವೆನಿಸುವಂಥ ಮಾತೊಂದನ್ನು ಈಗ ಹೇಳುತ್ತಿದ್ದೇನೆ: ನಿಮ್ಮ ...ಕೈಯಲ್ಲಿರುವ ಈ ಸಂಚಿಕೆಯೂ ಸೇರಿದಂತೆ ಬರುವ ...ಎರಡು ಸಂಚಿಕೆಗಳು ಮುದ್ರಣಕ್ಕೆ ಹೋಗುವ ಹೊತ್ತಿನಲ್ಲಿ ... ಬೆಂಗಳೂರಿನಲ್ಲಿರುವುದಿಲ್ಲ, ಅಂದರೆ ಇದೇ ಸೆಪ್ಟೆಂಬರ್ ...ರಂದು ಬೆಂಗಳೂರಿನಿಂದ ಹಾರಿ ಹೋಗುತ್ತಿರುವ ... ಮತ್ತೆ ವಾಪಸ್ ಬರುತ್ತಿರುವುದು 15 ದಿನಗಳ ...ರ, ಸೆಪ್ಟೆಂಬರ್ 30ರಂದು!

...ಕಳೆದ ಹತ್ತು ವರ್ಷಗಳಲ್ಲಿ ನಾನು ರಜೆ ತೆಗೆದುಕೊಂಡು ...' ಎಂದು ಹೋಗಿದ್ದು ಅಪರೂಪ. ಆದರೀಗ ಒಮ್ಮೆಗೆ ...ದಿನಗಳ ಕಾಲ ಹೊರಟು ಹೋಗುತ್ತಿದ್ದೇನೆ. ಅದೂ ...ಿ? ಬೆಂಗಳೂರಿನಿಂದ ಸುಮಾರು 3000 ಕಿ.ಮಿ. ...ದವಿರುವ ಭಾರತದ ಈಶಾನ್ಯ ರಾಜ್ಯಗಳಿಗೆ!

...ಒಂದು ಸಣ್ಣ ದಾರವನ್ನಾಧರಿಸಿ ಭಾರತದ ಭೂಭಾಗದಿಂದ ...ತಾಡುತ್ತಿರುವಂತೆ ಭೂಪಟದಲ್ಲಿ ಕಾಣುವ ಈಶಾನ್ಯ ...ಶದಲ್ಲಿರುವ ಈ ಏಳು ರಾಜ್ಯಗಳು ಹಲವಾರು ...ಗಳಿಂದ ನನ್ನನ್ನು ಚಕಿತಗೊಳಿಸಿವೆ. ಅದಕ್ಕೆ ಹಲವಾರು ...ಾಗಳಿವೆ. ಚಿಕ್ಕವಳಾಗಿದ್ದಾಗ ಅಲ್ಲಿನ ಜನರನ್ನು ನೋಡಿ ...ನ 'ಚೀನಿ' ಎಂದೋ, 'ಗೂರ್ಖಾ' ಎಂದೋ ...ಸುತ್ತಿದ್ದೆ. ಆನಂತರ, ಅಲ್ಲಿನ ಜನ ಮೇಲುನೋಟಕ್ಕೆ ...ಂತೆ' ಇಲ್ಲ (ಅಂದಮಾತ್ರಕ್ಕೆ ದಕ್ಷಿಣದ ರಜನೀಕಾಂತ್ ...ರಿಯಂತೆ ಕಾಣಿಸುತ್ತಾರೆ ಅಥವಾ ನಾನು ಪಂಜಾಬಿ ...ಳೆಯಂತಿದ್ದೇನೆ ಎಂದೇನಲ್ಲ!) ಮಾತ್ರವಲ್ಲ ಅವರು ...ಗೀಯವಾಗಿಯೂ, ಸಾಂಸ್ಕೃತಿಕವಾಗಿಯೂ, ರಾಜಕೀಯವಾಗಿಯೂ 'ನಮ'ಗಿಂತ ಸಂಪೂರ್ಣವಾಗಿ ವಿಭಿನ್ನ ಎಂದು ಗೊತ್ತಾಯಿತು. ಅದಕ್ಕಿಂತ ಮುಖ್ಯವಾಗಿ ಕಳೆದ ಹತ್ತಾರು ವರ್ಷಗಳಿಂದ ಈಶಾನ್ಯ ರಾಜ್ಯಗಳ ಮೇಲೆ 'ಪ್ರಜಾಪ್ರಭುತ್ವೀಯ' ಭಾರತ ನಡೆಸಿರುವ ದಬ್ಬಾಳಿಕೆ, ದೌರ್ಜನ್ಯಗಳ ಬಗ್ಗೆ ತಿಳಿದುಕೊಂಡ ನಂತರವಂತೂ ನನ್ನ ಮನಸ್ಸು ಅಲ್ಲಿನ ಜನರಿಗಾಗಿ ಮಿಡಿಯಿತು.

ಚಿಕ್ಕಂದಿನಲ್ಲಿ ಈಶಾನ್ಯ ರಾಜ್ಯಗಳಲ್ಲಿನ ಜನ ಮತ್ತು ಪ್ರಕೃತಿ ಸೌಂದರ್ಯವನ್ನು ನೋಡಬೇಕು ಎಂಬ ಹಂಬಲವಿದ್ದಂತೆ ಈ ಕಾಲಘಟ್ಟದಲ್ಲಿದ್ದರೂ ಅಲ್ಲಿನ ಜನರ ನೋವು ಮತ್ತು ಸಂಕಷ್ಟಗಳನ್ನು ಅರಿತುಕೊಳ್ಳಬೇಕು ಅನ್ನಿಸಿತ್ತು. ಇದಕ್ಕೆ ಸರಿಯಾಗಿ ಕಳೆದ ತಿಂಗಳು ಕಾಲ್ಮಿಯಾನ್ ಎಂಬುವವರು ನನಗೆ ಫೋನ್ ಮಾಡಿ "ಈಶಾನ್ಯ ಭಾರತದಲ್ಲಿ ಪ್ರಸ್ತುತ ನಡೆಯುತ್ತಿರುವ ಹೋರಾಟ, ವಲಸೆ ಮತ್ತು ಪರಿಸರ ನಾಶ ಕುರಿತು ಲೇಖನಗಳನ್ನು ಬರೆಯಲು ಭಾರತದ ವಿವಿಧ ನಗರಗಳಿಂದ ಆರು ಮಹಿಳಾ ಬರಹಗಾರ್ತಿಯರನ್ನು ಈ ಪ್ರದೇಶಕ್ಕೆ ಆಹ್ವಾನಿಸುತ್ತಿದ್ದೇವೆ. ಅವರಲ್ಲಿ ನೀವೂ ಒಬ್ಬರು. ನಿಮ್ಮ ಕೆಲಸದಲ್ಲಿ ಬಿಡುವು ಮಾಡಿಕೊಂಡು ಬರಲು ಸಾಧ್ಯವೇ?" ಎಂದು ಕೇಳಿದರು.



ನನಗೆ ಒಂದೆಡೆ ಸಂತೋಷ, ಇನ್ನೊಂದೆಡೆ ಅಷ್ಟು ದಿನಗಳ ಕಾಲ ಪತ್ರಿಕೆಯಿಂದ ದೂರವಿರಲು ಸಾಧ್ಯವೇ ಎಂಬ ಆತಂಕ. ಇದರ ಬಗ್ಗೆ ನನ್ನ ತಂಡದೊಂದಿಗೆ ಚರ್ಚಿಸಿದಾಗ ಅವರೆಲ್ಲರೂ "ಇದೊಂದು ಹೊಸ ಅನುಭವ. ನಿಮಗೂ ಒಂದು ಬ್ರೇಕ್ ಸಿಗುತ್ತದೆ. ಏನೂ ಯೋಚನೆ ಮಾಡಬೇಡಿ. ನಾವು ನೋಡಿಕೊಳ್ಳುತ್ತೇವೆ" ಎಂದು ಭರವಸೆ ನೀಡಿದರು. ಆದ್ದರಿಂದ ಈಗ ಹೊರಟಿದ್ದೇನೆ. ಈ ಸಂಚಿಕೆ ನಿಮ್ಮ ಕೈ ಸೇರಿದ ದಿನ ನಾನು ಮಣಿಪುರದ ರಾಜಧಾನಿ ಇಂಫಾಲ್‌ನಲ್ಲಿರುತ್ತೇನೆ. ಅಲ್ಲಿಂದ ಬಂದನಂತರ ಅಲ್ಲಿ ಕಂಡಿದ್ದನ್ನು, ನೋಡಿದ್ದನ್ನು, ಕೇಳಿದ್ದನ್ನು, ಅನುಭವಿಸಿದ್ದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದೇನೆ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತದ ವಿರುದ್ಧ ಈಶಾನ್ಯ ರಾಜ್ಯಗಳಲ್ಲಿ ಭಾರತದ ಸೈನ್ಯ ನಂಬಲು ಅಸಾಧ್ಯವಾದಂತಹ ಕ್ರೌರ್ಯದಲ್ಲಿ ತೊಡಗಿದ್ದರೆ ಭಾರತದ ಸರ್ಕಾರ ಆ ಪ್ರದೇಶಗಳನ್ನು "ಏಳು ಸಹೋದರಿಯರು" ಎಂದು ಬಣ್ಣಿಸುತ್ತಲೇ ಆ ಸಹೋದರಿಯರನ್ನು ಇನ್ನಿಲ್ಲದಂತೆ ಶೋಷಿಸಿದೆ.

ವಾಸ್ತವವಾಗಿ ಈಶಾನ್ಯ ರಾಜ್ಯಗಳು ಎಂದೂ ಭಾರತದ ಪ್ರಧಾನ ಭೂಭಾಗದ ಭಾಗವಾಗಿರಲಿಲ್ಲ. ಭಾರತೀಯ ನಾಗರಿಕತೆ ಕೂಡ ಈಶಾನ್ಯ ಪ್ರದೇಶಗಳನ್ನು ತಾಕದೆ ಇದ್ದುದರಿಂದಲೇ ಇತ್ತೀಚಿನ ತನಕ ಬ್ರಹ್ಮಪುತ್ರ ಮತ್ತು ಮಣಿಪುರ ಕಣಿವೆಗಳಲ್ಲಿ ಬಿಟ್ಟರೆ ಬೇರೆಲ್ಲೂ ಜಾತಿ ವ್ಯವಸ್ಥೆ ಎಂಬುದರ ಸೋಂಕೂ ಕಂಡುಬಂದಿರಲಿಲ್ಲ. ಇತರೆ ಸಾಮ್ರಾಜ್ಯಗಳ ಮಾತು ಬದಿಗಿರಲಿ, ಮೊಘಲ್ ಸಾಮ್ರಾಜ್ಯ ಕೂಡ ಈ ಪ್ರದೇಶಗಳನ್ನು ಒಳಗೊಂಡಿರಲಿಲ್ಲ. ಆದರೆ ಬ್ರಿಟಿಷರ ಆಡಳಿತದ ಅವಧಿಯಲ್ಲಿ ಈಶಾನ್ಯದ ಕೆಲವು ಪ್ರದೇಶಗಳು ಅದರ ಹಿಡಿತಕ್ಕೆ ಬಂದಿದ್ದರೂ ಇತರೆ ಪ್ರದೇಶಗಳ ಮೇಲೆ ಅಲ್ಲಿನ ರಾಜವಂಶಗಳೇ ಆಳ್ವಿಕೆ ನಡೆಸುತ್ತಿದ್ದವು. ಇದೆಲ್ಲದರ ಅರ್ಥ ಈ ಪ್ರದೇಶಗಳ ಮೇಲೆ ಭಾರತ ಎಂದೂ ಹಿಡಿತವನ್ನು ಹೊಂದಿರಲಿಲ್ಲ. ಮಾತ್ರವಲ್ಲ ಸೈಮನ್ ಕಮಿಷನ್ ಕಾಲದಿಂದಲೂ ಅಲ್ಲಿನ ನಾಗಾ, ಬೋಡೋ ಮತ್ತು ಇತರ ಸಮುದಾಯಗಳು ತಮಗೆ ಪ್ರತ್ಯೇಕ ದೇಶವೆಂಬ ಸ್ಥಾನಮಾನ ಬೇಕೆಂಬ ಬೇಡಿಕೆಯನ್ನು ಇಟ್ಟಿದ್ದವು.

ನಾಗಾ ಸಮುದಾಯದ ನಾಗಾ ನ್ಯಾಷನಲ್ ಕೌನ್ಸಿಲ್ ಎಂಬ ಸಂಘಟನೆಯ ಮುಖ್ಯಸ್ಥ ಫಿಜೋ ಎಂಬುವವರು ಸ್ವಾತಂತ್ರ್ಯಕ್ಕೂ ಮೊದಲೆ ಮಹಾತ್ಮಾ ಗಾಂಧಿಯವರನ್ನು ಭೇಟಿಯಾಗಿ, ನಾಗಾಗಳದ್ದೇ ವಿಭಿನ್ನ ರಾಷ್ಟ್ರೀಯತೆ ಆಗಿರುವುದರಿಂದ ತಮ್ಮ ಜನರಿರುವ ಪ್ರದೇಶವನ್ನು ಭಾರತದ ಭಾಗವಾಗಿ ಪರಿಗಣಿಸಕೂಡದು ಎಂದಿದ್ದರು. ಅದಕ್ಕೆ ಮಹಾತ್ಮ ಗಾಂಧಿ ಕೂಡ ಒಪ್ಪಿದ್ದರಲ್ಲದೆ "ಯಾವುದೇ ಕಾರಣಕ್ಕೂ ನಿಮ್ಮನ್ನು ಬಲವಂತವಾಗಿ ಭಾರತದೊಂದಿಗೆ ಇಟ್ಟುಕೊಳ್ಳುವುದಿಲ್ಲ" ಎಂದು ಭರವಸೆ ನೀಡಿದ್ದರು. ಆದರೆ ಬ್ರಿಟಿಷರು ಭಾರತೀಯರಿಗೆ 1947 ರಲ್ಲಿ ಅಧಿಕಾರವನ್ನು ಹಸ್ತಾಂತರಿಸಿದಾಗ ತಮ್ಮ ಪ್ರದೇಶಗಳನ್ನೂ ಭಾರತದ ವಶಕ್ಕೆ ನೀಡಲಿದ್ದಾರೆ ಎಂದು ಯಾವಾಗ ಗೊತ್ತಾಯಿತೋ ಆ ಕ್ಷಣದಿಂದಲೇ ಈಶಾನ್ಯ ಪ್ರದೇಶದವರು ಭಾರತದ ವಿರುದ್ಧ ಸಿಡಿದೆದ್ದು ನಿಂತರು. ಸ್ವಾತಂತ್ರ್ಯದ ನಂತರ ಅಸ್ಸಾಮಿನ ಭಾಗವಾಗಿದ್ದ ನಾಗಾಲ್ಯಾಂಡ್ ಅನ್ನು ಭಾರತ ಕಬ್ಜಾ ಮಾಡಿಕೊಂಡಿತಲ್ಲದೆ, 1949 ರಲ್ಲಿ ಮಣಿಪುರ್ ಮತ್ತು ತ್ರಿಪುರಗಳನ್ನು ತನ್ನ ವಶಕ್ಕೆ ಪಡೆದುಕೊಂಡಿತು. ಆನಂತರದ ವರ್ಷಗಳಲ್ಲಿ ಆ ಪ್ರದೇಶಗಳನ್ನು ಏಳು ವಿವಿಧ ರಾಜ್ಯಗಳನ್ನಾಗಿ ವಿಭಾಗಿಸಲಾಯಿತಾದರೂ ಇವತ್ತಿಗೂ ಸ್ವಾತಂತ್ರ್ಯಕ್ಕಾಗಿ ಅಲ್ಲಿನ ಸಮುದಾಯಗಳ ಸಂಘರ್ಷ ನಿಂತಿಲ್ಲ.

ಈಶಾನ್ಯ ರಾಜ್ಯಗಳನ್ನು ಕುರಿತು ಇಷ್ಟೆಲ್ಲಾ ಬರೆಯುತ್ತಿರುವ ದಿನವೇ (ಸೋಮವಾರ, ಸೆ. 13) ಇವತ್ತಿನ ದಿನಪತ್ರಿಕೆಗಳಲ್ಲಿ ಮಣಿಪುರದ ಹೋರಾಟಗಾರ್ತಿ ಇರೋಮ್ ಶರ್ಮಿಳಾ ಅವರಿಗೆ 51 ಲಕ್ಷ ರೂಪಾಯಿ ಮೌಲ್ಯದ ರವೀಂದ್ರನಾಥ್ ಟ್ಯಾಗೋರ್ ಶಾಂತಿ ಪ್ರಶಸ್ತಿ ನೀಡಿ ಸನ್ಮಾನಿಸಿದ್ದು ವರದಿ ಆಗಿದೆ. ಕಳೆದ ಹತ್ತು ವರ್ಷಗಳಿಂದ ಅಮರಣಾಂತ ಉಪವಾಸದಲ್ಲಿ ತೊಡಗಿರುವ ದಿಟ್ಟ ಮಹಿಳೆ ಇರೊಮ್ ಶರ್ಮಿಳಾ ಆ ಪ್ರದೇಶಗಳ ಜನರ ಮೇಲಿನ ದೌರ್ಜನ್ಯಕ್ಕೂ, ಅಲ್ಲಿನ ಜನರ ನಿರಂತರ ಹೋರಾಟಕ್ಕೂ ಸಂಕೇತವಾಗಿರುವವರು.



ಇವತ್ತು ಕಾಶ್ಮೀರದಲ್ಲಿ ಭಾರತದ ಸೈನ್ಯವು ಸಶಸ್ತ್ರಪಡೆಗಳ (ವಿಶೇಷ ಅಧಿಕಾರ) ಕಾಯಿದೆಯನ್ನು (AFPSA) ಪ್ರಯೋಗಿಸಿ ಅಮಾಯಕರನ್ನು ಕೊಂದು ಹಾಕುತ್ತಿರುವುದರ ಬಗ್ಗೆ ಅಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆಯಲ್ಲದೆ, ಆ ಕಾಯಿದೆಯ ಬಗ್ಗೆ ಎಲ್ಲೆಡೆ ಚರ್ಚೆ ಕೂಡ ಆಗುತ್ತಿದೆ. ಆದರೆ ಈ ಕಾಯಿದೆಯನ್ನು ಕಾಶ್ಮೀರದಲ್ಲಿ ಜಾರಿಗೊಳಿಸಿದ್ದು 1990ರಲ್ಲಿ, ಅಂದರೆ ಕೇವಲ ಇಪ್ಪತ್ತು ವರ್ಷಗಳ ಹಿಂದೆ.

ಆದರೆ ವಾಸ್ತವವಾಗಿ ಈ ಕಾಯಿದೆಯನ್ನು ಭಾರತದ ಸಂಸತ್ತು 1958ರಷ್ಟರ ಹಿಂದೆ ರೂಪಿಸಿ ಜಾರಿಗೆ ತಂದದ್ದು ಈ ಏಳು ಈಶಾನ್ಯ ರಾಜ್ಯಗಳಲ್ಲಿ ಜನರು ನಡೆಸುತ್ತಿದ್ದ ವಿಮೋಚನೆಯ ಹೋರಾಟವನ್ನು ದಮನ ಮಾಡುವ ಏಕೈಕ ಉದ್ದೇಶದಿಂದ; ಕಳೆದ ಐವತ್ತೆರಡು ವರ್ಷಗಳಿಂದಲೂ ಈಶಾನ್ಯ ರಾಜ್ಯಗಳ ಜನ ಈ ಕರಾಳ ಕಾಯಿದೆಯಡಿ ಭಯಭೀತರಾಗಿ ಜೀವನ ನಡೆಸುತ್ತಿದ್ದಾರೆಂದರೆ ಅವರ ಪರಿಸ್ಥಿತಿ ಹೇಗಿರಬಹುದೆಂದು ಊಹಿಸುವುದು ಸುಲಭ.

ಇರೊಮ್ ಶರ್ಮಿಳಾ ಅಮರಣಾಂತ ಉಪವಾಸ ನಡೆಸುತ್ತಿರುವುದೂ ಈ ಕಾಯಿದೆಯ ವಿರುದ್ಧವೇ. ಹಾಗೆಯೇ 2004ರಲ್ಲಿ ಭಾರತೀಯ ಸೈನ್ಯದ ಪ್ರಮುಖ ಪಡೆಯಾಗಿರುವ ಅಸ್ಸಾಮ್ ರೈಫಲ್ಸ್ ಕಾರ್ಯಾಲಯದ ಮುಂದೆ ಹನ್ನೆರಡು ಮಣಿಪುರಿ ತಾಯಂದಿರು ನಗ್ನರಾಗಿ ಪ್ರತಿಭಟಿಸಿದ್ದೂ ಇದೇ ಕರಾಳ ಕಾಯಿದೆಯ ವಿರುದ್ಧ. ಈ ಕಾಯಿದೆಯ ಮುಖ್ಯ ಅಂಶ ಯಾವುದೆಂದರೆ ಭಾರತೀಯ ಸೈನ್ಯದ ಯಾವುದೇ ದಫೇದಾರನಿಗೂ ಯಾರ ಬಗ್ಗೆ ಗುಮಾನಿ ಬಂದರೂ ಸಾಕು, ಆ ದಫೇದಾರ ಆತನನ್ನು ಅಲ್ಲೇ ಗುಂಡು ಹಾರಿಸಿ ಸಾಯಿಸಬಹುದು. ಆತ ಅಮಾಯಕರನ್ನು ಕೊಂದಿದ್ದರೂ ಆ ದಫೇದಾರನನ್ನು ಯಾರೂ ಪ್ರಶ್ನಿಸುವಂತಿಲ್ಲ. ಹಾಗೊಮ್ಮೆ ಈ ಕಾಯಿದೆ ನೀಡುವ ವಿಶೇಷ ರಕ್ಷಣೆಯನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲುನೋಟಕ್ಕೆ ಕಾಣಿಸಿದರೂ ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ದಫೇದಾರನ ವಿರುದ್ಧ ಯಾವುದೇ ಕ್ರಮವನ್ನೂ ತೆಗೆದುಕೊಳ್ಳುವಂತಿಲ್ಲ. ಸಹಜವಾಗಿಯೇ ಕಳೆದ ಆರು ದಶಕಗಳಲ್ಲಿ ಲೆಕ್ಕವಿಲ್ಲದಷ್ಟು ಅಮಾಯಕರನ್ನು ಈಶಾನ್ಯ ಪ್ರದೇಶಗಳಲ್ಲಿ ಭಾರತೀಯ ಸೈನಿಕರು ಕೊಂದು ಹಾಕಿದ್ದಾರೆ, ಕಂಡಕಂಡಲ್ಲಿ ದೌರ್ಜನ್ಯ ನಡೆಸಿಯೂ ಸುರಕ್ಷಿತರಾಗಿದ್ದಾರೆ.....

ಆದರೆ ಇರೊಮ್ ಶರ್ಮಿಳಾರ ಅಮರಣಾಂತ ಉಪವಾಸ ಮತ್ತು ತಾಯಂದಿರ ನಗ್ನ ಪ್ರತಿಭಟನೆಯು ಈ ದೇಶದ ಜನರಿಗೆ ಈಶಾನ್ಯ ರಾಜ್ಯಗಳಲ್ಲಿಯ ವಾಸ್ತವ ಪರಿಸ್ಥಿತಿಯನ್ನು ತೋರಿಸಿತ್ತಲ್ಲದೆ, ಎಲ್ಲರ ಅಂತಃಸಾಕ್ಷಿಯನ್ನೇ ಅಲುಗಾಡಿಸಿತ್ತು. ಆಗ ಪ್ರಧಾನಿ ಮನಮೋಹನ್ ಸಿಂಗ್ ಅವರು ಈ ಕರಾಳ AFPSA ಕಾಯಿದೆಯ ಬದಲಾಗಿ ಮಾನವೀಯ ಕಾಯಿದೆಯೊಂದನ್ನು ಜಾರಿಗೆ ತರುವುದಾಗಿ ಮಣಿಪುರದ ಮಹಿಳೆಯರಿಗೆ ಮಾತು ಕೊಟ್ಟಿದ್ದರು. ಆ ನಿಟ್ಟಿನಲ್ಲಿ ನ್ಯಾ. ಬಿ.ಪಿ. ಸಂಜೀವ್ ರೆಡ್ಡಿ ನೇತೃತ್ವದಲ್ಲಿ ಒಂದು ಸಮಿತಿಯನ್ನೂ ರಚಿಸಿದ್ದರು. ನ್ಯಾ. ರೆಡ್ಡಿ ಸಮಿತಿಯು AFPSA ಜಾಗದಲ್ಲಿ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ (UAPA) ಅನ್ನು ತರಬಹುದು ಎಂದು ಸೂಚಿಸಿತ್ತು. ಆದರೆ ಸೈನ್ಯಾಧಿಕಾರಿಗಳು ಅದನ್ನು ತೀವ್ರವಾಗಿ ವಿರೋಧಿಸಿದ್ದರಿಂದ ಸಿಂಗ್‌ರ ಸರ್ಕಾರ ಆ ಸಮಿತಿಯ ವರದಿಯನ್ನು ಮೂಲೆಗೆಸೆದು ತೆಪ್ಪಗಾಯಿತು.

ಆದರೆ ಇರೊಮ್ ಶರ್ಮಿಳಾ ಇನ್ನೂ ತನ್ನ ಅಮರಣಾಂತ ಉಪವಾಸವನ್ನು, ಈಶಾನ್ಯ ರಾಜ್ಯಗಳ ಜನ ತಮ್ಮ ಹೋರಾಟಗಳನ್ನು ಮುಂದುವರಿಸುತ್ತಿದ್ದಾರೆ; ದೊಡ್ಡಣ್ಣ ಭಾರತದ ಶೋಷಣೆಯಿಂದ ಸದ್ಯದಲ್ಲೇ ತಮಗೆ ಮುಕ್ತಿ ದೊರಕೀತು ಎಂಬ ಆಶಯದಲ್ಲಿ ಎಲ್ಲ ರೀತಿಯ ಕಷ್ಟಕಾರ್ಪಣ್ಯಗಳ ನಡುವೆಯೂ ತಮ್ಮ ಜೀವನ ಸಾಗಿಸುತ್ತಿದ್ದಾರೆ.....


ಈಶಾನ್ಯ ಪ್ರದೇಶಗಳ ಅಧ್ಯಯನ ಪ್ರವಾಸದ ಸಿದ್ಧತೆಯ ಭಾಗವಾಗಿ ಮೊನ್ನೆ ಇರೊಮ್ ಶರ್ಮಿಳಾ ಮತ್ತು ಮಣಿಪುರಿ ತಾಯಂದಿರ ಪ್ರತಿಭಟನೆಗಳನ್ನು ಕುರಿತ ಸಾಕ್ಷ್ಯ ಚಿತ್ರವೊಂದನ್ನು ನೋಡುತ್ತಿದ್ದೆ. ಆಗ ನನ್ನೊಂದಿಗೆ ನನ್ನ ಅಮ್ಮ ಕೂಡ ಇದ್ದರು.

ಆ ಮಹಿಳೆಯರ ಅಸಹಾಯಕತೆ, ಇರೊಮ್ ಶರ್ಮಿಳಾರ ಮೌನ, ಆಕ್ರೋಶ ಭರಿತರಾದ ತಾಯಂದಿರು ವಿಧಿ ಇಲ್ಲದೆ ತಮ್ಮ ಮೇಲಿನ ಬಟ್ಟೆಯನ್ನೆಲ್ಲ ತೊರೆದು ಕಣ್ಣೀರಿಡುತ್ತಾ ಪ್ರತಿಭಟಿಸಿದ್ದನ್ನೆಲ್ಲ ನೋಡಿ ಅಮ್ಮನ ಕಣ್ಣಲ್ಲಿ ನೀರು ಹರಿಯಲಾರಂಭಿಸಿತು, ಅವರ ಹೃದಯದಲ್ಲಿ ಕೋಪ ಉಕ್ಕೇರಿತು...

ಅಂತಹ ಪ್ರದೇಶಕ್ಕೆ ಹೋಗುತ್ತಿದ್ದೇನೆ. ಒಂದಿಷ್ಟು ಕಲಿಯಲು, ಒಂದಿಷ್ಟು ಸಾಂತ್ವನ ಹೇಳಲು, ಕೆಲವರ ಕೈಹಿಡಿದು ಬೆಂಬಲವನ್ನು ವ್ಯಕ್ತಪಡಿಸಲು....

ನನ್ನ ಗೈರುಹಾಜರಿಯಲ್ಲಿ ನಿಮ್ಮೆಲ್ಲರ ಸಹಕಾರ ನಿಮ್ಮ ಈ ಪತ್ರಿಕೆಗಿರಲಿ ಎಂದು ಆಶಿಸುತ್ತೇನೆ. ●

ಸುಂಕದಕಟ್ಟೆಯ ಸ್ಟ್ರೀಟ್ ಫೈಟಿಂಗ್ ಹೆಣ್ಣಿನ ಹುಚ್ಚಿಗೆ ಹೆಣವಾದ ಕುರಿ!



ಕುರಿಕೃಷ್ಣ

ಸೆಪ್ಟೆಂಬರ್ ಹತ್ತರ ರಮಜಾನ್ ಹಬ್ಬದ ಮಧ್ಯಾಹ್ನ ಉಲ್ಲಾಳು ಏರಿಯಾದ ವಜ್ರೇಶ್ವರಿ ಥೇಟರಿನ ಮುಂದೆ ಅದ್ಯಾವಳೋ ಆಂಟಿಯ ಬೆನ್ನುಬಿದ್ದಿದ್ದ ಕುರಿಯ ಅಂತ್ಯ ಬಹುಶಃ ಆಕೆಯ ಹೆಸರಲ್ಲೇ ನಿರ್ಧಾರವಾಗಿ ಹೋಗಿತ್ತೇನೊ!

ಯಾವ ಕೊಕ್ರಿ ರಾಘವೇಂದ್ರ ತನ್ನ ಪ್ರೇಯಸಿಯನ್ನು ನಿನಗೆ ಬಿಟ್ಟುಕೊಡ್ತೀನಿ ಬಾ ಎಂದು ಕುರಿಯನ್ನು ಕರೆಸಿಕೊಂಡು ಕುಡಿಸಿದ್ದನೋ ಆತನೇ ದುಷ್ಮನ್ ಪಾಳ್ಯದ ಶಿವನ ಪ್ರತಿರೂಪವಾಗಿ ನಿಂತಿದ್ದ.

ಸೆಪ್ಟೆಂಬರ್ 10 ರ ಶುಕ್ರವಾರದ ಮಧ್ಯಾಹ್ನ ಹೊತ್ತಿಗೆಲ್ಲ ಕುರಿಕೃಷ್ಣ ಹೆಣವಾಗಿ ಹೋಗಿದ್ದ.

ಕತ್ತರಿಸಿದ ಏಟಿಗೆ ಎರಡೂ ಕೈನ ಬೆರಳುಗಳೆಲ್ಲ ಉದುರಿಬಿದ್ದಿದ್ದವು. ಸರಿಸುಮಾರು ಹತ್ತು ಮಂದಿಯಿದ್ದ. ಕಿರಾತಕರು ಕುರಿಯೊಂದನ್ನು ನೆಲಕ್ಕೆ ಹಾಕಿ ಕತ್ತರಿಸಿದಂತೆ ಕೃಷ್ಣನನ್ನು ಅದ್ಯಾವ ಪರಿ ತುಂಡರಿಸಿದ್ದರೆಂದರೆ; ಆತನ ಇಡೀ ರುಂಡವೇ ಗೊಜ್ಜಿನಂತೆ ಮುದ್ದೆಗಟ್ಟಿತ್ತು, ಕೊರಳಿಗೆ ಮಾಂಸದ ಮುದ್ದೆ ಮೆತ್ತಿಕೊಂಡಂತೆ ಮೆದುಳು ಚಟ್ನಿಯಾಗಿ, ತಲೆಚಿಪ್ಪು ಪುಡಿಯಾಗಿ, ಬಾಯಿ, ಕಣ್ಣು, ಮೂಗು, ಕಿವಿ, ಹಣೆ, ತಲೆ, ಕೂದಲು; ಯಾವುದೂ ಗುರುತಿಸಲಾಗದಷ್ಟು ಉಂಡೆಗಟ್ಟಿತ್ತು, ಕೊಲ್ಲಲು ಬಂದವರು ಮಿಕ ಬದುಕಿರಲೇಬಾರದೆಂದು ನಿರ್ಧರಿಸಿದಂತಿತ್ತು, ತೊಟ್ಟು ರಕ್ತ ಕೂಡ ಉಳಿಯದೇ ಕುರಿಕೃಷ್ಣನ ದೇಹ ರಸ್ತೆಗೆ ಅಂಟಿದ ಹಾಗಿತ್ತು.


ಭೀಕರವಾಗಿ ಕೊಲೆಯಾದ ಕುರಿ ಕೃಷ್ಣ

ಸುಂಕದಕಟ್ಟೆಯ ಮಚ್ಚನ ಪಾಳೇಪಟ್ಟಿನ ಅಳಿದುಳಿದ ಕಟ್ಟಾಳುಗಳ ಪೈಕಿ ಕುರಿಕೃಷ್ಣ ಕೊನೆಯ ಪಾಳಿಯವನಿರಬೇಕು. ಸದ್ಯ ಕೋತಿರಾಮ ಜೈಲೊಳಗಿದ್ದಾನೆ. ಕಡಬಗೆರೆ ಜಾನಿಗೆ ಬಡಿದಾಟ ಸಾಕಾಗಿದೆ. ಪೆದ್ದಗುಂಡನಿಗೆ ಜೈಲಲ್ಲಿದ್ದರೂ ತಾನು ಬದುಕುಳಿಯುವುದೇ ಕಷ್ಟ. ಹಂಡೆ ಕುಮಾರ ಕುಡಿದು ನಡುರಸ್ತೆಯಲ್ಲಿ ಸತ್ತ. ಕಲಗಚ್ಚು ಸೀನ ಊರನ್ನೇ ಬಿಟ್ಟ. ಮಚ್ಚನ ಹತ್ಯೆಯ ರಿವೆಂಜಿಗೆ ಅಂತ ನಿಂತ ಕುಲ್ಡಾ ದಿನೇಶ, ತುರೇ ಸತೀಶ, ಟಗರು ಇವರಷ್ಟೆ ಸದ್ಯ ಹೊರಗಿದ್ದು ಫೀಲ್ಡು ಮಾಡುವವರಾದರೆ ಮಿಕ್ಕೆಲ್ಲರೂ ಜೈಲು ಹಕ್ಕಿಗಳೇ.


ಪುನೀತ್


ರಾಘವೇಂದ್ರ

ಆದರೆ ವಿರೋಧಿ ಸಿಂಡಿಕೇಟು ಹಾಗಲ್ಲ, ಮುಲಾಮ ದಿವಿನಾಗಿ ಓಡಾಡಿಕೊಂಡಿದ್ದಾರೆ. ಪಾಯ್ಸನ್ ರಾಮ ಮೊನ್ನೆ ತಾನೇ ಜೈಲಿಂದ ಬಂದು ಪಂಚಾಯ್ತಿ ಛೇರ್ಮನ್‌ಗಿರಿ ನಡೆಸುತ್ತಿದ್ದಾನೆ. ಗೋಪಾಲಯ್ಯ, ಗೂಳಿ ಬಸವ, ಧರಣಿ, ಮುಲಾಮನ ಬಂಟರಾದ ರಾಮ ಲಕ್ಷ್ಮಣ; ಹೀಗೆ ಯಾರೆಲ್ಲ ಸೇರಿ ಮಚ್ಚನನ್ನು ಮುಗಿಸಿದರೋ ಅವರೆಲ್ಲರೂ ಚೆನ್ನಾಗಿ ಫೀಲ್ಡು ಮಾಡಿಕೊಂಡಿದ್ದು ಕೋಟ್ಯಾಧಿಪತಿಗಳಾಗಿದ್ದಾರೆ.

ಈ ಪೈಕಿ ಯಾರೇ ಸಿಕ್ಕರೂ ಅವರ ಹೆಣ ಬೀಳಿಸ್ತೀನಿ ಎಂದು ಹೊಂಟವನು ಸುಂಕದಕಟ್ಟೆಯ ಕುರಿ ಅಲಿಯಾಸ್ ಕೃಷ್ಣಮೂರ್ತಿ. ಆತ ಸುಂಕದಕಟ್ಟೆಯ ಹಿರಿತಲೆ ಗಾಡಿಕೆಂಪಣ್ಣನ ಮಗ. ಚಿಕ್ಕಪ್ಪ ತಿಮ್ಮಯ್ಯ ಹಿಂದೊಮ್ಮೆ ಕೌನ್ಸಿಲರ್ ಆಗಿ ಗೆದ್ದಿದ್ದ; ಗೋಪಾಲಯ್ಯನ ಕಾರಣ ಮಚ್ಚ ಮತ್ತು ಮುಲಾಮರ ಮಧ್ಯೆ ಬಿರುಕುಂಟಾದಾಗ ಕುರಿ ಮಚ್ಚಾನನ್ನೇ ನೆಚ್ಚಿಕೊಂಡ. ಆತನಕ ಒಂದೇ ತಂಡವಾಗಿದ್ದ ಸುಂಕದಕಟ್ಟೆಯ ಹುಡುಗರಲ್ಲೇ ಎರಡೂ ಗುಂಪಾಯಿತು. ಭೀಕರ ಬೀದಿ ಕಾಳಗಗಳಾದವು. ಅದು 2002ರ ಕಾಲ. ಮುಲಾಮನ ಶಿಷ್ಯರಾದ ರಾಮ-ಲಕ್ಷ್ಮಣ ಸೇರಿಕೊಂಡು ಮೂವತ್ತಕ್ಕೂ ಹೆಚ್ಚು ಮಂದಿ ಹುಡುಗರ ತಂಡ ಕಟ್ಟಿದ್ದೇ ಸುಂಕದಕಟ್ಟೆಯ ಮುರುಡೇಶ್ವರ ಹೋಟೆಲಿಗೆ ನುಗ್ಗಿ ಮಚ್ಚನ ಶಿಷ್ಯರಾದ ವಿಜಿ ಮತ್ತು ಶಂಕ್ರನನ್ನು ಕೊಂದು ಬಿಟ್ಟರು.

ಶಂಕ್ರನನ್ನು ಲಗ್ಗೆರೆಯ ಮಂಡ್ಯ ಕೃಷ್ಣನ ಅಡ್ಡೆಗೆ ಎಳೆದೊಯ್ದು ಕೊಂದರೆ ವಿಜಿಯನ್ನು ಮುರುದೇಶ್ವರ ಹೋಟೆಲಿನ ಎದುರೇ ಕೊಚ್ಚಿ ಹಾಕಿದ್ದರು. ಆವತ್ತು ಗೆಳೆಯ ವಿಜಯನನ್ನು ಕೊಂದ ಸುದ್ದಿ ಕೇಳಿ ಧಾವಿಸಿ ಬಂದಿದ್ದ ಕುರಿಕೃಷ್ಣನನ್ನು ರಾಮ-ಲಕ್ಷ್ಮಣರ ಪಡೆ ಅದೆಷ್ಟು ಭೀಕರವಾಗಿ ಕತ್ತರಿಸಿತ್ತೆಂದರೆ, ಆತನ ಒಂದು ಕೈಯೇ ಕತ್ತರಿಸಿ ಹೋಗಿತ್ತು, ಹೊಟ್ಟೆಯ ಕರುಳೇ ಹೊರಬಂದು ಬೆನ್ನು ಸಿಗಿದು ಹೋಗಿತ್ತು. ಸತ್ತನೆಂದೇ ಭಾವಿಸಿ ಕುರಿಯನ್ನು ಮುಲಾಮನ ಗ್ಯಾಂಗ್ ಬಿಟ್ಟುಹೋಗಿದ್ದರೆ ಇನ್ನೂ ಉಸಿರಾಡುತ್ತಿದ್ದ ಕುರಿ ಸಕಾಲದಲ್ಲಿ ಆಸ್ಪತ್ರೆ ಸೇರಿ ಬದುಕುಳಿದುಬಿಟ್ಟ.

ಆವತ್ತು ಕುರಿ ಬದುಕುಳಿದದ್ದೇ ಪವಾಡವಾಗಿತ್ತು, ಕೈ ಲ್ಯಾಪ್ಸ್ ಆಗಿತ್ತು, ಹೊಟ್ಟೆಗೆ ಹೊಲಿಗೆ ಬಿದ್ದಿತ್ತು, ಹೀಗೆ ವರ್ಷಗಟ್ಟಲೇ ಚಿಕಿತ್ಸೆ ಪಡೆದು ಮತ್ತೆ ರೆಡಿಯಾದ ಕುರಿಗೆ ತನ್ನ ಜೀವದ ಬೆಲೆ ಗೊತ್ತಾಗಬೇಕಿತ್ತು, ರೌಡಿಜಮ್ಮಿಗೆ ವಿದಾಯ ಹೇಳಬೇಕಿತ್ತು, ಗುರು ಮಚ್ಚನನ್ನೇ ಮುಲಾಮನ ಗ್ಯಾಂಗ್ ಮುಗಿಸಿ ಹಾಕಿತ್ತು, ಕೊರಂಗುನನ್ನೂ ಬಿಡದೆ

ಸಾವಿನ ಬಾಯೊಳಗಿಂದ ಒಮ್ಮೆ ಬಚಾವಾಗಿ ಬಂದವನಿಗೆ ತನ್ನ ಪ್ರಾಣದ ಬೆಲೆ ಏನೆಂದು ಗೊತ್ತಿರಲೇಬೇಕು. ಅದನ್ನು ಎಷ್ಟು ಹುಷಾರಾಗಿ ಜೋಪಾನ ಮಾಡಬೇಕೆಂಬ ಕನಿಷ್ಠ ಪ್ರಜ್ಞೆಯಾದರೂ ಇರಬೇಕು. ಪಾಪ; ಕುರಿಕೃಷ್ಣನಿಗೆ ತನ್ನ ಸಾವು ಕಾಮದ ಮಾಯೆಯಾಗಿ ಆವರಿಸಿಕೊಳ್ಳಲಿದೆ ಎಂಬುದು ಹೇಗೆ ಗೊತ್ತಾಗಬೇಕು?

ರಾಮ-ಲಕ್ಷ್ಮಣರನ್ನು ಹೊಡೆದೇ ಬಿಡ್ತೀನಿ ಎಂದು ರೌಂಡಿಂಗ್ ಮಾಡಿದ್ದೇ ಮಾಡಿದ್ದು. ಕಡಬಗೆರೆ ಪಾಯ್ಸನ್ ರಾಮನ್ನ ನಿಕಾಲಿ ಮಾಡಿ ಗುರು ಮಚ್ಚನ ರಿವೇಂಜ್ ತಗೋತೀನಿ ಎಂದು ಪೋಜು ಕೊಟ್ಟೇ ಸುಸ್ತಾಗಿ ಹೋದ ಗೋಪಾಲಯ್ಯನ್ನ ಮುಗಿಸ್ತೀನಿ ಎಂದ. ಮುಲಾಮನ್ನ ನಿಕಾಲಿ ಮಾಡ್ತೀನಿ ಎಂದು ಹೂಂಕರಿಸುತ್ತಲೇ ಇದ್ದ. ರಾಮ-ಲಕ್ಷ್ಮಣರ ಮನೆ ಮಗನಂತಿದ್ದ ಪುನಿತೇಶನನ್ನು ಮುಗಿಸಿದ. ಆತನ ಶಿಷ್ಯ ಕಾಪರ್‌ನನ್ನು ಅರೆಜೀವ ಹೊಡೆದ. ಮುಲಾಮನ ಪಡೆಯ ಸಟುತ್ತು ಬ್ಯಾಟ್ಸ್‌ಮನ್ ಪಾಳ್ಯದ ಶಿವನನ್ನು ಹೆಣ ಹಾಕ್ತೀನಿ ಎಂದೇ ಅಬ್ಬರಿಸಿದ.

ಕೊನೆಗೆ ಆತನ ಕೈಯಲ್ಲೇ ಕುರಿ ಹೆಣವಾಗಿ ಹೋದ!

ಬಿಜೆಪಿ ಚುನಾವಣಾ ವಂಚನೆ ಮೌಲ್ಯಗಳ ಕತ್ತಿಗೆ ಕಾಂಚಾಣದ ಕುಣಿಕೆ!

ಬಹುಶಃ ರಾಜ್ಯದ ಚುನಾವಣಾ ರಾಜಕೀಯ ಇತಿಹಾಸದಲ್ಲೇ ಇಂಥ ಹೇಸಿಗೆ ತಾಂಡವವಾಡಿರಲಿಕ್ಕಿಲ್ಲ, ಅಷ್ಟಿಷ್ಟು ಹಣ-ಹೆಂಡ ಹರಿದಾಡಿದ್ದರೂ ಅವುಗಳೇ ನಿರ್ಣಾಯಕ ಸ್ಥಿತಿ ತಲುಪಿರಲಿಲ್ಲ. ದುರಂತವೆಂದರೆ, ಕಡೂರಿನಲ್ಲಿ ಬಿಜೆಪಿಯ ಭಟ್ಟಂಗಿಗಳು ಹೇಸಿಗೆಯಲ್ಲೇ ಉಳ್ಳಾಡಿ ಅದನ್ನ ಮತದಾರರಿಗೂ ಎರಚಿ ಅಸಹ್ಯ ಹುಟ್ಟಿಸಿದ್ದಾರೆ.

ಬಿಜೆಪಿ ಮಂದಿ ಚುನಾವಣೆ ಗೆಲ್ಲುವುದಕ್ಕಾಗಿ ನಡೆಸಿದ ಅಂದಾದುಂದಿಗಳ ವಿವರ ಎಂಥವರೂ ದಂಗು ಬಡಿಯುವಂತಿವೆ. ಇವರು ನಡೆಸಿದ್ದು ಮತದಾರರನ್ನು ಸೆಳೆಯುವ ಕಾನೂನು ಸಮ್ಮತ ಪ್ರಯತ್ನವನ್ನಲ್ಲ, ಬದಲಾಗಿ ಮತದಾರರನ್ನು ಖರೀದಿಸಿದೆಯೇ ಬಿಡುವ ದುಷ್ಟ ಕೆಲಸವೆಂಬ ವಿಚಾರ ಚುನಾವಣೆಯ ಆರಂಭದಲ್ಲೇ ಸಾಬೀತಾಗಿದೆ.

ಕಟ್ಟಾ ಸುಬ್ರಮಣ್ಯ ನಾಯ್ಡು ವಿ. ಸೋಮಣ್ಣ ಸಿ.ಟಿ. ರವಿ ಮುಂತಾದವರೆಲ್ಲ ಕಡೂರಲ್ಲಿ ಬೀಡುಬಿಟ್ಟು ಒಂದಿಡೀ ವ್ಯವಸ್ಥೆಯನ್ನೇ ಬುಡಮೇಲಾಗಿಸಲು ಮನಸಾರೆ ಶ್ರಮಿಸಿದರು. ಇವರುಗಳೆಲ್ಲಾ ತಂತಮ್ಮ ಚೇಲಾಗಳೊಂದಿಗೆ ಹಳ್ಳಿಹಳ್ಳಿಗಳಿಗೂ ದಾಂಗುಡಿಯಿಟ್ಟು ರಾಜಾರೋಷವಾಗಿ ಹಣ ಹಂಚುತ್ತಾ ಮತ ಖರೀದಿಯ ಕಸರತ್ತು ನಡೆಸಿದರು. ಒಂದು ಓಟಿಗೆ ಐನೂರರಿಂದ ಸಾವಿರದವರೆಗೆ ಬೆಲೆಕಟ್ಟಿದರಲ್ಲದೆ, ಸಿ.ಟಿ. ರವಿಯ ಸಾರಥ್ಯದಲ್ಲಿ ಸಾರಾಯಿಯ ಹೊಳೆಯನ್ನೇ ಹರಿಸಿದರು. ಇಂಥಾ ಅಡ್ನಾಡಿ ಕೆಲಸ ನಡೆಸುತ್ತಲೇ ಕೆಲ ಮಂದಿ ರೆಡ್‌ಹ್ಯಾಂಡಾಗಿ ತಗುರಿಕೊಂಡು ತದುಕಿಸಿಕೊಂಡಿದ್ದೂ ನಡೆಯಿತು.

ಮೊದಲಿಗೆ ಕಟ್ಟಾ ಸುಬ್ರಮಣ್ಯ ನಾಯ್ಡುವಿನ 'ಸಾಹಸ'ಗಾಥೆಯತ್ತ ಗಮನ ಹರಿಸೋಣ. ಎಲ್ಲರಿಗಿಂತ ಮುಂಚೆಯೇ ಕಡೂರಿಗೆ ಬಂದು ಠಿಕಾಣಿ ಹೂಡಿದ ಈತ ತನ್ನ ಜುಬ್ಬಾದ ಎಡ ಜೇಬಲ್ಲಿ ಐನೂರು ಹಾಗೂ ಬಲ ಜೇಬಲ್ಲಿ ಸಾವಿರದ ನೋಟುಗಳನ್ನಿಟ್ಟುಕೊಂಡು ಚೇಲಾ ಪಡೆಯೊಂದಿಗೆ ದಂಡಯಾತ್ರೆ ಹೊರಟ. ಹಳ್ಳಿಗಳಿಗೆ ತೆರಳಿ ಅರಳೀಕಟ್ಟೆಗಳಲ್ಲಿ ಕುಕ್ಕರಿಸಿದ ಕಟ್ಟಾ ಪಕ್ಷಭೇದ ಮರೆತು ಮುಖಂಡರುಗಳನ್ನೆಲ್ಲ ಗುಡ್ಡೆ ಹಾಕಿಕೊಂಡು ಲಕ್ಷಾಂತರ ರೂಪಾಯಿ ಹಂಚಿದ. 'ನೀವು ಯಾವ ಪಕ್ಷದೋರಾಗಿದ್ರೂ ಬಿಜೆಪಿಗೇ ಓಟಾಕಿ' ಅಂತ ದೈನೇಸಿಯಂತೆ ಬೇಡಿಕೊಂಡ.


ಇದೆಲ್ಲದರ ನಡುವೆಯೇ ಲಿಂಗಾಯತರನ್ನು ಒಗ್ಗೂಡಿಸಲೆಂದೇ ಬಂದಿಳಿದ ವಿ. ಸೋಮಣ್ಣ ಜಾತಿಜಾತಿಗಳ ನಡುವೆ ತಂದಿಕ್ಕುವ ಕೆಲಸವನ್ನು ನಿಷ್ಠೆಯಿಂದ ನೆರವೇರಿಸಿದರು. ಆ ಆಸಾಮಿ ಮುಸ್ಲಿಮರು ಹೇಗಿದ್ದರೂ ಬಿಜೆಪಿಗೆ ಓಟು ಹಾಕುವುದಿಲ್ಲ ಅಂತೊಂದು ಲೆಕ್ಕಾಚಾರ ಹಾಕಿ ಮುಸ್ಲಿಮರಿಂದ ಐಡಿ ಕಾರ್ಡ್ ಕಿತ್ತುಕೊಳ್ಳುವ ಹೀನ ಕೆಲಸವನ್ನೂ ಮಾಡಿಸಿದರು. ಈ ಸಂಬಂಧ ಮುಸ್ಲಿಮರಿಂದ ಐಡಿ ಕಾರ್ಡ್ ಪಡೆದುಕೊಂಡು ಹತ್ತು ಜನರಿರುವ ಕುಟುಂಬವೊಂದಕ್ಕೆ ಹತ್ತು ಸಾವಿರದಂತೆ ಹಣ ಹಂಚಿದರು.

ಇಂಥ ಘನಂದಾರಿ ಕೆಲಸ ಮಾಡುತ್ತಿದ್ದ ಸೋಮಣ್ಣನಿಗೆ ಸಿ.ಟಿ. ರವಿ, ರೇವೂ ನಾಯಕ್ ಬೆಳಮಗಿ, ಮಾಜಿ ಶಾಸಕ ಮನೋಹರ ಐನಾಪುರ ಮತ್ತಿತರರು ಪೂರ್ತಾ ಸಾಥ್ ನೀಡಿದರು. ತೀರಾ ಅಸಹ್ಯ ಹುಟ್ಟಿಸುವಂತೆ ಜಾತಿವಾದ ಪ್ರದರ್ಶಿಸಿದ ಸೋಮಣ್ಣ ಹೋದ ಕಡೆಯಲ್ಲೆಲ್ಲಾ ಲಿಂಗಾಯತ ಹಾಗೂ ಇತರೆ ಕೋಮುಗಳ ನಡುವೆ ಕಂದಕ ನಿರ್ಮಿಸಿದರು. ಒಂದು ಹಳ್ಳಿಯಲ್ಲಿ ಕುರುಬರು, ಲಂಬಾಣಿಗರು ಹಾಗೂ ಲಿಂಗಾಯತರಿದ್ದರೆ ಈ ಸೋಮಣ್ಣ ಲಿಂಗಾಯತರನ್ನಷ್ಟೇ ಕರೆದು ಹಣ ಹಂಚುತ್ತಾ ಸಾಗಿದರು.

ಇನ್ನೂ ಅಸಹ್ಯದ ವಿಚಾರವೆಂದರೆ, ಚುನಾವಣೆಯ ಮುನ್ನಾ ದಿನ ಕಡೂರಿಗೆ ಬಂದ ಯಡಿಯೂರಪ್ಪ ಜಾತಿವಾರು ಸಭೆ ಸಮಾವೇಶ ನಡೆಸಿದರು. ಲಂಬಾಣಿ ಸಮುದಾಯದ್ದೊಂದು ಸಭೆ, ಹರಿಜನರ ಸಭೆ ಅಂತೆಲ್ಲ ಜಾತಿಗಳನ್ನು ವಿಂಗಡಿಸುವ ಕೆಲಸಕ್ಕೆ ಕೈ ಹಚ್ಚಿದರು.


ಸೋಮಣ್ಣ

ಇನ್ನು ಬಿಜೆಪಿ ಮಂದಿಯ ಹಣ ಮದದಿಂದ ರೋಸಿಹೋದ ಕೆಲ ಜನರು ಹಣ ಹಂಚುತ್ತಿದ್ದವರಿಗೆ ಅಟ್ಟಾಡಿಸಿ ಹೊಡೆದ ಘಟನೆಗಳೂ ನಡೆದವು. ಬಿಜೆಪಿ ಅಭ್ಯರ್ಥಿ ಡಾ. ವಿಶ್ವನಾಥ್ ಕಡೂರು ಟೌನ್‌ನಲ್ಲಿ ಪ್ರಚಾರ ನಡೆಸುತ್ತಿದ್ದ ಸಂದರ್ಭವದು. ಇವರ ಮತಯಾಚನೆಯ ಮೆರವಣಿಗೆ ಕೋಟೆ ಬಡಾವಣೆ ತಲುಪುತ್ತಲೇ ಸ್ಥಳೀಯ ಬಿಜೆಪಿ ಮುಖಂಡ ಶಿವಶಂಕರ್ ಎಂಬಾತ ಹಣ ಹಂಚಲಾರಂಭಿಸಿದ. ಇದನ್ನು ಗಮನಿಸಿದ ಕಾಂಗ್ರೆಸ್ ಅಭ್ಯರ್ಥಿ ಕೆಂಪರಾಜು ಮಗ ಭರತ್ ತಕರಾರು ತೆಗೆದ. ಸೇರಿದ್ದ ಮಂದಿ ಶಿವಶಂಕರ್‌ನನ್ನು ಹಿಡಿದು ಬಡಿದರು.


ಸಿ.ಟಿ.ರವಿ

ಇನ್ನು ಕಡೂರು ಪಟ್ಟಣದ ಕೋಟೆ ಪ್ರದೇಶದಲ್ಲಿ ಬಿಜೆಪಿಯ ಸಿದ್ದೇಶ್ವರ್ ಕೂಡಾ ಕಾಂಚಾಣ ಹಂಚುವ ಕೆಲಸ ಮಾಡುತ್ತಿದ್ದ. ಸಿಕ್ಕವರಿಗೆ ಐನೂರು ನೂರಿನ ನೋಟುಗಳನ್ನು ವಿತರಿಸುತ್ತಿದ್ದ. ಕೆಲಮಂದಿ ಸ್ಥಳೀಯ ಸಿದ್ದೇಶ್ವರ್‌ಗೆ ಹಿಡಿದು ಬಾರಿಸಿ ಹಣ ಕಿತ್ತುಕೊಂಡು ರಂಪ ಎಬ್ಬಿಸಿದರು. ಈ ಸಂದರ್ಭದಲ್ಲಿ ಲಾಠಿ ಚಾರ್ಜ್ ಕೂಡಾ ನಡೆಯಿತು.

ಈ ದರಿದ್ರ ಕೆಲಸದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಬಿಜೆಪಿ ಮಂದಿ ಗಣಪತಿ ಹಬ್ಬವನ್ನು ಮತ ಖರೀದಿಯಾಗಕ್ಕೆ ಬಳಸಿಕೊಂಡರು. ಗಣಪತಿ ಕೂರಿಸುವಾಗ ಮೈಕ್, ಡ್ರಮ್ಸ್ ಎಲ್ಲ ಬಳಸುತ್ತಾರಲ್ಲಾ? ಇವೆಲ್ಲವನ್ನು ಬಿಜೆಪಿಗಳೇ ಸರಬರಾಜು ಮಾಡಿ ಮಸ್ತಾ ಹೊಡೆಯಲೆತ್ನಿಸಿದರು. ಸಿಸ್ಮಿ ತಾಂಡಾ, ಬೀರನಳ್ಳಿ ತಾಂಡಾ ಹಾಗೂ ವಡ್ಡರ ಕ್ಯಾಂಪ್‌ಗಳಿಗೂ ಲಕ್ಷಲಕ್ಷ ಹಂಚಿದರು.

ಒಟ್ಟಾರೆಯಾಗಿ ಹೇಳಬೇಕೆಂದರೆ ಆಡಳಿತಾರೂಢ ಬಿಜೆಪಿಯ ಹಣದ ದೌಲು ನೋಡಿ ಬೇರೆ ಪಕ್ಷದವರೆಲ್ಲ ಕಂಗಾಲಾಗಿ ಹೋದರು. ಇದು ನಾಡಿನ ಪ್ರಜ್ಞಾವಂತರೆಲ್ಲರನ್ನು ಕಂಗಾಲಾಗಿಸುವಂತ ಬೆಳವಣಿಗೆಯೂ ಹೌದು ಎಂಬುದರಲ್ಲಿ ಎರಡು ಮಾತಿಲ್ಲ.

ಬಿಜೆಪಿ ಮಂದಿಯ ಹಡಬೆ ಹಣ ಜನರನ್ನೆಲ್ಲ ಯಾವ ಪರಿ ಆವರಿಸಿಕೊಂಡಿತ್ತೆಂಬುದಕ್ಕೆ, ಉದಾಹರಣೆ ಒಂದಿದೆ ನೋಡಿ. ಕುರುಬ-ಲಿಂಗಾಯತರೇ ಹೆಚ್ಚಿರುವ ಬೂದಿಗೆರೆ ಗ್ರಾಮದಲ್ಲಿ ಕುರುಬ ಸಮುದಾಯ ಚುನಾವಣೆ ಬಹಿಷ್ಕರಿಸಿತು. ಅದಕ್ಕೆ ಕಾರಣ ಬಿಜೆಪಿಯವರು ಲಿಂಗಾಯತರಿಗಷ್ಟೇ ಹಣ ನೀಡಿ ತಮಗೆ ಕೊಟ್ಟಿಲ್ಲ ಎಂಬುದು! ಇಂಥ ಕೆಟ್ಟ ಬೆಳವಣಿಗೆಗೆ ನಾಂದಿ ಹಾಡಿದ್ದು ವಿ. ಸೋಮಣ್ಣ, ಕುರುಬರು ಹೇಗೂ ಬಿಜೆಪಿಗೆ ಹಾರುವುದಿಲ್ಲ ಅಂತ ಲೆಕ್ಕಾಚಾರ ಹಾಕಿದ ಈ ಆಸಾಮಿ ಲಿಂಗಾಯತರಿಗಷ್ಟೇ ಹಣ ಹಂಚಿದ್ದರು.

ಹಣ ಕೊಟ್ಟಿಲ್ಲ ಎಂಬುದಕ್ಕೇ ಚುನಾವಣೆ ಬಹಿಷ್ಕರಿಸುವಂಥ ಹೀನಾಯ ಸ್ಥಿತಿಗೆ ಕಾರಣ ಬಿಜೆಪಿ ಎಂಬುದಿಲ್ಲಿ ಗಮನೀಯ. ಇದರಲ್ಲಿ ಆ ಸಮುದಾಯದ ತಪ್ಪೇನೂ ಕಾಣಿಸುವುದಿಲ್ಲ, ಯಾಕೆಂದರೆ ಬಿಜೆಪಿಯ ಹಡಬೆ ಹಣದ ಕರಾಮತ್ತು ಜನರೊಳಗಿನ ಸೂಕ್ಷ್ಮತೆ, ಸ್ವಾಭಿಮಾನಗಳನ್ನೆಲ್ಲ ಕೊಂದು ಹಾಕುವ ಹಂತ ತಲುಪಿದೆ.

ಬಿಜೆಪಿ ದರ್ಬಾರಿನಲ್ಲಿ ಪ್ರಜಾಪ್ರಭುತ್ವ ಅರ್ಥ ಕಳೆದುಕೊಳ್ಳುತ್ತಿರುವುದಕ್ಕೆ ಕಡೂರು ಚುನಾವಣೆ ಸಾಕ್ಷಿಯಾಗಿರುವುದಂತೂ ಸತ್ಯ.

ಲಾಮ ಅರೆಜೀವಗೊಳಿಸಿದ್ದ. ಕೋತಿರಾಮ, ಜಾನಿ, ರಾಜ, ಕಲಗಚ್ಚು ಸೀನ, ಯದುಗಿರಿ ಬಲರಾಮ; ದಿ ಮಚ್ಚನ ಗ್ಯಾಂಗೇ ಜೈಲು ಪಾಲಾಗಿತ್ತು. ಲ್ಲ ನೋಡಿಯೂ ಪಾಠ ಕಲಿಯದ ಕುರಿಕೃಷ್ಣ ಲಾಮನ ಸಿಂಡಿಕೇಟಿನ ಯಾರೇ ಸಿಕ್ಕರೂ ಗಿಸ್ತೀನಿ ಎಂದು ರೌಂಡಿಂಗ್ ಶುರು ಹಚ್ಚಿಕೊಂಡಿದ್ದ. ಅದ್ಯಾರು ಕಿವಿಕಚ್ಚಿದರೋ, ಮುಲಾಮನ ಪಡೆಯ ಮನ್ ಪಾಳ್ಯದ ಶಿವನ ಜೊತೆಗಿದ್ದ ಕೊಕ್ರೆ ಜೊತೆ ಕುರಿ ಓಡಾಡಲಾರಂಭಿಸಿದ್ದ. ಪಾಳ್ಯದ ವಿರುದ್ಧ ಕೊಕ್ರೆ ತಿರುಗಿಬದ್ದಿದ್ದಾನೆ ಎಂದೇ ಕುರಿ ಕೊಂಡಿರಲಿಲ್ಲ, ಇಬ್ಬರೂ ಸ್ನೇಹಿತರಾಗೇ ಇದ್ದರು. ಮಧ್ಯೆ ಕೊಕ್ರೆ ರಾಘು ಅಂಜನಾನಗರದಲ್ಲಿ ಯೋ ಆಂಟಿಯೊಬ್ಬಳನ್ನು ಪಟಾಯಿಸಿದ್ದಾನೆಂಬ ಕುರಿಯ ಕಿವಿಗೆ ಬಿತತ್ು. ನೋಡಲು ತ್ವಾಗೇ ಇದ್ದ ಆ ಹೆಂಗಸಿನ ಮೇಲೆ ಕುರಿಯ ಕಣ್ಣು

ಅನೇಕಾನೇಕ ಕೇಸು ಹೊತ್ತು ಜೈಲು ಪಾಲಾಗಿದ್ದ ಮೊನ್ನೆ ಅಂದರೆ ಸೆಪ್ಟೆಂಬರ್ 6 ರಂದು ಂದ ಹೊರಬಿದ್ದ. ಅದೇನು ಕೇಡುಗಾಲವ್ರೋ, ಬಂದವನೇ ಕೊಕ್ರೆಗೆ ಗಂಟುಬಿದ್ದವನೇ 'ನಿನ್ನ ಂಟಿಯನ್ನು ಒಂದು ದಿನದ ಮಟ್ಟಿಗಾದರೂ ನನ್ನ ಕಳಿಸು......' ಎಂದು ಪೀಡಿಸಲಾರಂಭಿಸಿದ. ಂದ ಹೊರಬಿದ್ದು ಇನ್ನೂ ಮೂರು ದಿನಗಳಾಗಿಲ್ಲ. ತನ್ನ ಪ್ರೇಯಸಿಗೆ ಗಂಟುಬಿದ್ದ ಕುರಿಯನ್ನು ಗಂಡಸಾದರೂ ಸುಮ್ಮನೇ ಬಿಡುವುದುಂಟಾ? ಪಾಕಷ್ಟು ಬುದ್ಧಿ ಹೇಳಿದ ನಂತರವ್ರೂ ಯೋಗದ ಕುರಿಗೆ ಕೊಕ್ರೆ ಮುಹೂರ್ತ ಗೊಳಿಸಿದ್ದ. ತನ್ನ ಹಳೇ ಗುರು ಪಾಳ್ಯದ ಶಿವನ ದೀಲು ಕುದುರಿಸಿಬಿಟ್ಟ. ಆಂಟಿ ಪಿಕ್ಚರಿಗೆ ಗಿದ್ದಾಳೆ, ಇನ್ನೇನು ಬಂದುಬಿಡ್ತಾಳೆ ಎಂದು ಳು ಏರಿಯಾದ ವಜ್ರೇಶ್ವರಿ ಥೇಟರಿನ ಎದುರು ದ. ತನ್ನ ಸ್ಯಾಂಟ್ರೋ ಕಾರಿನಲ್ಲಿ ಕೂರಿಸಿಕೊಂಡೇ ಕುಡಿಸಿದ್ದ. ಹಿಂದೆ ಬಂದು ನಿಂತಿದ್ದ ಕ್ವಾಲೀಸ್ ಯಲ್ಲಿ ಆಂಟಿ ಇದ್ದಾಳೆ ಬಾ ಎಂದು ಕೊಕ್ರೆ ಯರ್ದ್ರೆ ಕುಡಿದು ಚಿತ್ತಾಗಿದ್ದ ಕುರಿಗೆ ತನ್ನ ಸಾವು ತವಾಗಿದ್ದು ಗೊತ್ತಾಗಲೇ ಇಲ್ಲ. ಎಂಟು ಮಂದಿ ಹಂತಕರೊಂದಿಗೆ ನಿಂದಿಳಿದವನು ಪಾಳ್ಯದ ಶಿವ. ಕೈಮಾ ದಂತೆ ಕುರಿಯನ್ನು ಕೊಚ್ಚಿಬಿಟ್ಟರು. ಗೆಳೆಯನ ಸಿಯ ಹುಚ್ಚಿಗೆ ಬಿದ್ದ ಕುರಿ ಅಕ್ಷರಶಃ ಮಂತೆ ಸಾವಿನ ಬೋನಿಗೆ ಬಿದ್ದಿದ್ದ. ●

ಬಕ್ಕಬೋರಲು ಬಿದ್ದ ಬಿಜೆಪಿ ಚಿಗಿತುಕೊಂಡ ಜೆಡಿಎಸ್...


ವಿಜಯೋತ್ಸವದಲ್ಲಿ ಅರುಣಾ...

ತೀವ್ರ ಕುತೂಹಲ ಹಾಗೂ ಜಿಜ್ಞಾಸೆಗೆ ಕಾರಣವಾಗಿದ್ದ ಗುಲಬರ್ಗಾ ದಕ್ಷಿಣ ಮತಕ್ಷೇತ್ರದ ಚುನಾವಣೆಯ ಫಲಿತಾಂಶ ಹಲವಾರು ಜನರ ಊಹೆಗಳನ್ನು ಮಣ್ಣುಪಾಲು ಮಾಡಿದೆ. ಬಿಜೆಪಿಗಳೆಂಬ ಚೆಡ್ಡಿಗಳು ಸುಳ್ಳಿನ ಸೂಡು ಕಟ್ಟಿ ಏನೆಲ್ಲ ಬೊಂಬಡಾ ಬಜಾಯಿಸಿದರೂ ಮತದಾರ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಇಡೀ ಬಿಜೆಪಿಯ ಸರಕಾರವೇ ಟೊಂಕ ಕಟ್ಟಿಕೊಂಡು ನಿಂತು, ಯಡ್ಡಿ ತೀವ್ರ ಆಸಕ್ತಿಯನ್ನೂ ತೋರಿಸಿದರು ಮತದಾರ ಜಪ್ಪಯ್ಯ ಅನ್ನಲಿಲ್ಲ. "ಒಂದು ನೂರು ಕೋಟಿ ರೂಪಾಯಿಗಳನ್ನು ಗುಲಬರ್ಗಾಕ್ಕೆ ಬಿಡುಗಡೆ ಮಾಡಿ ನಗರವನ್ನು ಸುಂದರವಾಗಿ ಮಾಡುತ್ತೇನೆ. ನಿಮ್ಮ ಮನೆಯ ಮುಂದಿನ ಚರಂಡಿ, ಗಟಾರಗಳನ್ನು ತೆಗೆದು ಹಾಕುತ್ತೇನೆ. ಸ್ವಚ್ಛವಾದ ಕುಡಿಯುವ ನೀರು, ವಿದ್ಯುತ್ ದೀಪಗಳನ್ನು ಒದಗಿಸತ್ತೇನೆ. ಅಲ್ಲದೆ ಚುನಾವಣೆ ಮುಗಿದ ಬಳಿಕ ಮೂರನೆಯ ಸಂಪುಟ ಸಭೆಯನ್ನು ಗುಲಬರ್ಗಾದಲ್ಲಿಯೇ ಕರೆಯುತ್ತೇನೆ" ಎಂದೆಲ್ಲ ರಾಗ ಹಾಡಿ ರೋಡ್ ಶೋಗಳನ್ನು ಮುಗಿಸಿದ ಯಡ್ಡಿಯ ಅಡ್ನಾಡಿತನವನ್ನು ಇಲ್ಲಿಯ ಮತದಾರ ಸ್ಪಷ್ಟವಾಗಿ ಗುರುತಿಸಿದ್ದಾನೆ.

ಹಾಗಾಗಿಯೇ ಬಿಜೆಪಿಯ ಅಭ್ಯರ್ಥಿ ಶಶೀಲ ನಮೋಶಿ (ಪತ್ರಿಕೆ ಈ ಹಿಂದೆಯೇ ಸ್ಪಷ್ಟ ಪಡಿಸಿದಂತೆ) ಮೂರನೆಯ ಸ್ಥಾನ ಪಡೆದಿದ್ದಾನೆ. 'ಲಂಕೇಶ್' ಈ ಹಿಂದೆಯೆ ಬರೆದಂತೆ ಶಶೀಲ ನಮೋಶಿಗೆ ಟಿಕೆಟ್ ನೀಡಿದ್ದೆ ಪಕ್ಷದ ಆಂತರಿಕ ಭಿನ್ನಮತಕ್ಕೆ ಕಾರಣವಾಯಿತು. ಇದನ್ನು ಬಹುಬೇಗ ಪಕ್ಷ ಗುರುತಿಸಿಕೊಂಡಿದ್ದರೂ ಅದನ್ನು ನಿರ್ಲಕ್ಷಿಸಿತು. ಪಕ್ಷದ ಕೆಲವು ಹಿರಿಯ ಮುಖಂಡರನ್ನು ಕಡೆಗಣಿಸಿ ನೇರ ಮತದಾರರ ಮನೆ ಬಾಗಿಲಿಗೆ ತಲುಪುವ ಸರ್ಕಸ್ ಆರಂಭಿಸಿತು. ಅಂದರೆ ಪ್ರತಿ ಕುಟುಂಬದ ಮನೆ ಬಾಗಿಲಿಗೆ ಬಿಜೆಪಿಯ ದುಡ್ಡಿನ ಪಾಕೆಟ್ ತಲುಪಿತು. ಆದರೂ ಸ್ವತಃ ಯಡ್ಡಿಯೆ ಪಕ್ಷದ ಮುಖಂಡರ ತುರ್ತು ಸಭೆ ಸೇರಿಸಿ "ಶಶೀಲ ನಮೋಶಿ ಯಾವುದೆ ಕಾರಣಕ್ಕೂ ಸೋಲಬಾರದು. ಅವರ ಸೋಲು ನಿಮ್ಮೆಲ್ಲರ ಸೋಲೆಂದೆ ಪರಿಗಣಿಸಬೇಕಾಗುತ್ತದೆ'' ಎಂಬ ಎಚ್ಚರಿಕೆಯ ಮಾತುಗಳನ್ನು ಆಡಿದ್ದರು.

ಶಶೀಲ ನಮೋಶಿಯ ಅಧಿಕಾರ ದಾಹವೇ ಅವರ ಸೋಲಿಗೆ ಕಾರಣವಾಯಿತು. ಈಗಾಗಲೇ ಡಾ.ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಹಾಗೂ ಸ್ಥಳೀಯ ಎಚ್.ಕೆ.ಇ ಸೊಸೈಟಿಯ ಅಧ್ಯಕ್ಷನಾಗಿದ್ದರೂ ಮತ್ತೆ ಶಾಸಕನಾಗಬಯಸುವ ತೆವಲು ಈತನಿಗೆ. ಶಿಸ್ತಿನ ಪಕ್ಷ. ಒಬ್ಬರಿಗೆ ಕೇವಲ ಒಂದು ಹುದ್ದೆ ಮಾತ್ರ ಎಂದೆಲ್ಲ ಚೀರಾಡಿದ್ದ ಬಿಜೆಪಿ ಇಲ್ಲಿ ದಶಾಬತ್ತಲೆ ಆಯಿತು.

ಇನ್ನೂ ಧರ್ಮುವಿನ ಮಗ ಡಾ. ಅಜಯಸಿಂಗ್ ಎಲ್ಲರಿಗೂ ಗೊತ್ತಿರುವಂತೆ ನಗರದ ಹೈಟೆಕ್ ಜನಗಳಿಗೆ ಮಾತ್ರ ಹತ್ತಿರವಾಗುವ ವ್ಯಕ್ತಿತ್ವದವ. ಹಳ್ಳಿಗಳಲ್ಲಿ ತಿರುಗಾಡಿ ಎತ್ತಿನ ಗಾಡಿಯಲ್ಲಿ ಬಂದ ಮಾತ್ರಕ್ಕೆ ಜನ ಅದನ್ನು ನಾಟಕವೆಂದು ಗುರುತಿಸದಷ್ಟು ದಡ್ಡರೇನಲ್ಲ. ಅಲ್ಲದೆ ಧರ್ಮಸಿಂಗ್ ಜೇವರ್ಗಿಯ ಮತಕ್ಷೇತ್ರದಲ್ಲಿ ಸತತ ಏಳೆಂಟು ಬಾರಿ ಆಯ್ಕೆಯಾಗಿ ಬಂದರೂ ಕ್ಷೇತ್ರ ಅಭಿವೃದ್ಧಿಯನ್ನು ಹೇಗೆಲ್ಲ ಮಾಡಿದ್ದಾರೆ ಎಂದು ಅವರೆಲ್ಲ ಬಲ್ಲವರಾಗಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ತನ್ನ ಮಗ ಪ್ರಿಯಾಂಕ ಖರ್ಗೆಯನ್ನು, ಧರ್ಮು ತನ್ನ ಮಗ ಡಾ. ಅಜಯಕುಮಾರನನ್ನು ರಾಜಕೀಯ ಅಖಾಡದಲ್ಲಿ ಗಟ್ಟಿಯಾಗಿ ನೆಲೆ ನಿಲ್ಲುವಂತೆ ಮಾಡಿಕೊಳ್ಳಬೇಕೆಂಬ ಹುನ್ನಾರ ಪಕ್ಷದ ಹಲವಾರು ಜನರನ್ನು ಕೆಣಕಿದೆ. ಆದರೆ ಅದನ್ನು ಎಲ್ಲರ ಎದುರುಗಡೆಯೆ ಪ್ರದರ್ಶಿಸುವ ಧಾಡಸಿತನ ಇಲ್ಲದ್ದರಿಂದ ಒಳಗೊಳಗೆ ಅವರೆಲ್ಲ ಅಜಯ್‌ಸಿಂಗ್‌ಗೆ ಬತ್ತಿ ಇಟ್ಟಿದ್ದಾರೆ.


ಅವರಬಿಟ್ರೆ ಇವರ್‍ಯಾರು? ಎನ್ನುವಂತೆ ಕಡೆಗೆ ಅವರೆಲ್ಲರ ಚಿತ್ತ ಶ್ರೀಮತಿ ಅರುಣಾ ಪಾಟೀಲರತ್ತ ವಾಲಿದೆ. ಅರುಣಾ ಪಾಟೀಲರ ಸುಪುತ್ರ ಉಡಾಳ ಹುಡುಗನೇನೋ ಖರೆ! ಆದರೆ ಅವರ ತಾಯಿ ಶ್ರೀಮತಿ ಅರುಣಾ ಪಾಟೀಲ. ತೀರಾ ಇತ್ತೀಚೆಗೆ ಗಂಡನಾದ ಶ್ರೀ ಚಂದ್ರಶೇಖರ ಪಾಟೀಲರನ್ನು ಕಳೆಕೊಂಡು ಹೈರಾಣಾಗಿದ್ದಾರೆ. ತನ್ನ ಹೆಣ್ಣು ಮಕ್ಕಳನ್ನು ಕರಕೊಂಡು ಎಲ್ಲರ ಮನೆಗೆ ಬಾಗಿಲಿಗೆ ಬಂದು ಮತಭಿಕ್ಷೆ ಕೇಳಿದ್ದು ಎಲ್ಲರಲ್ಲು ಕನಿಕರ ಹುಟ್ಟಿಸಿತು. ಸರಿಯಾಗಿ ರಾಜಕೀಯದ ಎಬಿಸಿಡಿ ಗೊತ್ತಿಲ್ಲದ, ಚಾಲಾಕಿತನ ತೋರದ, ಮತಕೇಳುವುದಕ್ಕೂ ಬಾರದ ಶ್ರೀಮತಿ ಅರುಣಾ ಪಾಟೀಲ ತಮ್ಮ ಅಭ್ಯರ್ಥಿಯೆಂದು ಹಳ್ಳಿಯ ಮತದಾರ ಮೊದಲೇ ನಿರ್ಣಯಿಸಿದಂತಿದೆ.

ಇದೆಲ್ಲಕ್ಕೂ ಸಾತ್ ಎಂಬಂತೆ ಮಾಜಿ ಮುಖ್ಯ ಮಂತ್ರಿ ಎಚ್.ಡಿ.ಕುಮಾರ ಸ್ವಾಮಿ ಗುಲಬರ್ಗಾದಲ್ಲಿಯೇ ಬೀಡುಬಿಟ್ಟು ತಮ್ಮ ಪಕ್ಷದ ಬೇರುಗಳನ್ನು ಇನ್ನಷ್ಟು ಭದ್ರಪಡಿಸಿದ್ದಾರೆ. ಜನಪರ ಚಳವಳಿಯ ನೇತಾರನೆಂದೆ ಕರೆಯಲ್ಪಡುವ ಎಸ್.ಕೆ.ಕಾಂತಾ ಎಂಬ ಮಾಜಿ ಮಂತ್ರಿಯ ಓಡಾಟಗಳು, ರಾಜು ಕುಳಗೇರಿಯ ಒಲವು, ಅರುಣಕುಮಾರ ಪಾಟೀಲ, ದೇವೇಗೌಡ ತೆಲ್ಲೂರ್ ಹಾಗೂ ಪಕ್ಷದ ಬಹುತೇಕ ಕಾರ್ಯಕರ್ತರ ಹುಮ್ಮಸ್ಸು ಜೆ.ಡಿ.ಎಸ್. ಗೆಲುವಿಗೆ ಕಾರಣವಾಗಿವೆ.

ಹಿಂದುಳಿದವರು, ಲಿಂಗಾಯತರು ಹಾಗೂ ಪ್ರಗತಿಪರರೆಲ್ಲ ಒಂದುಗೂಡಿದರೆ ವಿಪ್ರ ಸಮುದಾಯದ ಓಟುಗಳು ಎಷ್ಟಿದ್ದರೂ ಅದೆಲ್ಲ ತರಗಲೆಗಳಂತೆ ಓಡುತ್ತವೆ ಎಂಬುದಕ್ಕೆ ಗುಲಬರ್ಗಾದ ಜೆ.ಡಿ.ಎಸ್. ಗೆಲುವು ತೋರಿಸುತ್ತದೆ. ಶಶೀಲ ನಮೋಶಿ ಲಿಂಗಾಯತನಾಗಿದ್ದರೂ ಆತ ಚಡ್ಡಿಗಳೊಂದಿಗೆ ಗುರುತಿಸಿಕೊಂಡಿದ್ದು ಆತನ ಗೆಲುವಿಗೆ ಮುಳುವಾಗಿದೆ.

● ವಿಶ್ವಾರಾಧ್ಯ ಸತ್ಯಂಪೇಟೆ
satyampet1969@gmail.com

...ಡೂರು: ಹೆಂಡದಲೆಯಲ್ಲಿ ದಡ ಸೇರಿದ ಬಿಜೆಪಿ!


ವಿಶ್ವನಾಥ್

ಚುನಾವಣೆಗಳ ವಿಚಾರದಲ್ಲಿ ಮತದಾರರ ನ್ನು ಗೌರವಿಸಬೇಕು ಅಂತೊಂದು ಮಾತಿದೆ. ಗ ಅದನ್ನೂ ಕೂಡಾ ಗುಮಾನಿಯಿಂದ ಬೇಕಾದ ಪರಿಸ್ಥಿತಿ ಬಂದೊದಗಿದೆ. ಸುದೊಂದು ಪ್ರಶ್ನಾರ್ಹ ಸ್ಥಿತಿಗೆ ಕಡೂರು ಕ್ಷೇತ್ರದ ವಣಾ ಫಲಿತಾಂಶ ವೇದಿಕೆಯಾಗಿ ಬಿಟ್ಟಿದೆ. ದರೆ ಅಲ್ಲಿ ಬಿಜೆಪಿ ಪಕ್ಷ ಹಣ-ಹೆಂಡಗಳ ಲ್ಲಿ ಗೆಲುವಿನ ದಡ ಸೇರಿಕೊಂಡಿದೆ! ಬ್ಯಾರೆಂಯಾಗಿ ಬಿಜೆಪಿ ಮುಖಂಡರುಗಳು ಮನಿ ಮಸಲ್ ಪವರ್‌ಗಳನ್ನು ಪ್ರದರ್ಶಿಸುವ ಲಕ ತಮ್ಮ ಅಭ್ಯರ್ಥಿ ವಿಶ್ವನಾಥ್‌ರನ್ನು ಕೊಂಡಿದ್ದಾರೆ. ತೀರಾ ಸರಳ-ಸಜ್ಜನಿಕೆಗಳ ದಿಂದ ಗೆಲ್ಲುತ್ತಾರೆಂದುಕೊಂಡಿದ್ದ ಜೆಡಿಎಸ್ ದತ್ತಾ ಹಾಗೂ ಅಣ್ಣ ಕೃಷ್ಣಮೂರ್ತಿಯವರ ಸಾವಿನ ಅನುಕಂಪದಿಂದಲಾದರೂ ಗೆಲ್ಲಬಹುದೆಂದುಕೊಂಡಿದ್ದ ಕೆಂಪರಾಜು ಸೋತು ಹೋಗಿದ್ದಾರೆ.

ಮೊದಲಿಗೆ ಬಿಜೆಪಿ ಗೆಲುವಿನ ಹಿಂದಿರುವ ಅಂದಾದುಂದಿಗಳ ಬಗ್ಗೆ ಗಮನ ಹರಿಸೋಣ. ಈ ಗೆಲುವಿಗೆ ಹಣ-ಹೆಂಡಗಳೇ ಪ್ರಮುಖ ಕಾರಣವೆಂಬ ಸಾರ್ವತ್ರಿಕ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಜೊತೆಗೆ ಈ ಗೆಲುವನ್ನು ಪ್ರತಿಷ್ಠೆಯ ಪ್ರಶ್ನೆಯೆಂಬಂತೆ ಒಂದಿಡೀ ಬಿಜೆಪಿ ಕೂಟ ಪ್ರಚಾರಕ್ಕಿಳಿದದ್ದು ಕೂಡಾ ಕಾರಣವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸಿ.ಟಿ. ರವಿ ಸಚಿವ ಸ್ಥಾನಕ್ಕೆ ತನ್ನ ಅರ್ಹತೆಯನ್ನು ತೋರ್ಪಡಿಸಲು ಕಡೂರನ್ನು ಅಖಾಡವಾಗಿ ಬಳಸಿಕೊಂಡಿದ್ದು. ಇನ್ನೊಂದು ಪ್ರಮುಖ ಕಾರಣ. ಇದಕ್ಕೆ ಕಾರ್ಕಳದಲ್ಲಿ ಗೋತಾ ಹೊಡೆದಿದ್ದ ಸುನಿಲ್ ಕುಮಾರ್ ಕೂಡಾ ಮನಸಾರೆ ಸಾಥ್ ನೀಡಿರುವುದು ಕಣ್ಣಮುಂದಿನ ಸತ್ಯ.

ಸಿ.ಟಿ. ರವಿ ಅಂಡ್ ಗ್ಯಾಂಗ್ ಹಣ ಹೆಂಡಗಳ ಜೊತೆಗೇ ಕಾಂಗ್ರೆಸ್-ಜೆಡಿಎಸ್ ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ಗೂಂಡಾಗಿರಿ ನಡೆಸುವ ಮೂಲಕ ಮತ ಚದುರಿಸಲು ಪ್ರಯತ್ನಿಸಿತು. ಇದಕ್ಕೆ ಚುನಾವಣೆಯಂದು ಲಕ್ಷೀಪುರದಲ್ಲಿ ನಡೆದ ಘಟನೆಯೇ ಸಾಕ್ಷಿ. ಇದು ಜೆಡಿಎಸ್ ಅಲೆಯಿರುವ ಪ್ರದೇಶ. ಇಲ್ಲಿನ ಮತಗಳನ್ನು ಸೆಳೆದುಕೊಳ್ಳುವುದು ಕಷ್ಟ. ಆದರೆ ಚದುರಿಸಿಯಾದರೂ ಜೆಡಿಎಸ್ ಅನ್ನು ಹಣಿಯಬೇಕೆಂಬ ಉದ್ದೇಶದಿಂದಲೇ ರವಿಯ ಕಡೆಯಿಂದ ಸ್ಕೆಚ್ಚು ರೆಡಿಯಾಯಿತು.


ದತ್ತ

ಇದರನ್ವಯ ಮತದಾನ ನಡೆದ ದಿನ ಬೆಳಗ್ಗೆ ಇದ್ದಕ್ಕಿದ್ದಂತೆ ಗಲಾಟೆ ಸೃಷ್ಟಿಸಲಾಯಿತು. ತೀರಾ ಬಿಜೆಪಿಯ ಕಟ್ಟಾಳುಗಳಂತೆ ವರ್ತಿಸಿದ ಪೊಲೀಸು ಪಡೆ ಕಂಡವರ ಮನೆಗೆ ನುಗ್ಗಿ ಲಾಠಿ ಚಾರ್ಜ್ ಮಾಡಿ ಪೌರುಷ ಮೆರೆಯಿತು. ಜೊತೆಗೆ ಹೊರಗೆ ಬಾರದಿರುವಂತೆ ಎಚ್ಚರಿಕೆಯನ್ನೂ ಕೊಟ್ಟರು. ಈ ಗಲಾಟೆಯಲ್ಲಿ ಚಂದ್ರಪ್ಪ, ಅಣ್ಣಪ್ಪ, ತಿಮ್ಮಗೋವಿ, ಮಹೇಶ ಎಂಬುವರು ಏಟು ತಿಂದು ಆಸ್ಪತ್ರೆ ಸೇರಿದ್ದೂ ನಡೆಯಿತು.

ಇದು ಮತ ಹಾಕದಂತೆ ತಡೆಯುವ ಹುನ್ನಾರವೆಂದರಿತ ಕಾಂಗ್ರೆಸ್-ಜೆಡಿಎಸ್ ಮಂದಿ ದೂರು ಕೊಟ್ಟರೂ ಯಾವ ಪ್ರಯೋಜನವೂ ಆಗಲಿಲ್ಲ. ದುರಂತವೆಂದರೆ, ಸಿ.ಟಿ. ರವಿ ಮತ್ತು ಸುನೀಲ್ ಕುಮಾರ್ ಚುನಾವಣಾ ನೀತಿಸಂಹಿತೆ ಉಲ್ಲಂಘಿಸಿ ಕ್ಷೇತ್ರದಲ್ಲಿ ಬೀಡು ಬಿಟ್ಟರೂ ಚುನಾವಣಾ ಆಯೋಗದ ಮಂದಿ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಅಲ್ಲಿಗೆ ಕಡೂರು ಚುನಾವಣೆ ಗೆಲ್ಲಲು ಬಿಜೆಪಿ ಸರ್ಕಾರ ಒಂದಿಡೀ ವ್ಯವಸ್ಥೆಯನ್ನೇ ಮುಷ್ಟಿಯಲ್ಲಿಟ್ಟುಕೊಂಡಿದ್ದು ಸ್ಪಷ್ಟವಾಗುತ್ತದೆ.

ಇದು ಬಿಜೆಪಿಯ ಅಪರಾತಪರಾಗಳ ಪುರಾಣವೆಂದರೆ, ಈ ಕಾಂಗ್ರೆಸ್-ಜೆಡಿಎಸ್‌ಗಳ ಪ್ರಭೃತಿಗಳಿಗೆ ಏನಾಗಿದೆ ಅಂತೊಂದು ಪ್ರಶ್ನೆ ಏಳುತ್ತದೆ. ಇದಕ್ಕೆ ಎರಡೂ ಪಕ್ಷಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ವರ್ಚಸ್ಸು ಕಳೆದುಕೊಂಡಿರುವುದು, ಹಾಗೂ ನಾಯಕರುಗಳ ಆಲಸೀತನಗಳೇ ಪ್ರಮುಖ ಕಾರಣವೆಂಬ ಅಂಶ ಮನದಟ್ಟಾಗುತ್ತದೆ.

ಹಾಗೆ ನೋಡಿದರೆ ಚಿಕ್ಕಮಗಳೂರು ಕಾಂಗ್ರೆಸ್‌ನ ಭದ್ರಕೋಟೆ. ಆದರೀಗ ಅದು ಛಿದ್ರಗೊಂಡಿದೆ. ಈ ಆಸಾಮಿಗಳ ಹಳಸಲು ಶೈಲಿಯ ನಡಾವಳಿಗಳೇ ಇದಕ್ಕೆ ಕಾರಣ. ರಾಜೀವ್, ಇಂದಿರಾ ಗಾಂಧಿಗಳ ಹೆಸರಲ್ಲೇ ಪ್ರಚಾರ ನಡೆಸುವ ಇವರಿಗೆ ಸ್ವಂತ ವರ್ಚಸ್ಸಿನ ಮೇಲೆ ಗೆಲ್ಲುವ ಭರವಸೆಯಿಲ್ಲ, ಆ ದಿಸೆಯಲ್ಲಿ ಹೆಜ್ಜೆಯಿಡುವ ಮನಸ್ಸೂ ಇದ್ದಂತಿಲಿಲ. ಗೆಲ್ಲಲು ಬೇಕಾದ ಬೇಕಾದ ಕ್ರಿಯಾಶೀಲತೆಯೂ ಇಲ್ಲ, ಅಷ್ಟಕ್ಕೂ ಇಲ್ಲಿ ಕುರುಬರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸಿದ್ಧರಾಮಯ್ಯ ಅಹಿಂದವನ್ನು ಇಲ್ಲೂ ಸಂಘಟಿಸಿದ್ದರು. ಆದರೂ ಕಾಂಗ್ರೆಸ್ ಗೋತಾ ಹೊಡೆದಿದೆಯೆಂದರೆ ಇದು ಸಿದ್ದು ಸೋಲೂ ಹೌದು ಅಂತ ಜನ ಮಾತಾಡಿಕೊಳ್ಳುತ್ತಿರುವುದು ಸತ್ಯ.

ಇದೆಲ್ಲದರ ನಡುವೆ ಬಿಜೆಪಿಯ ವಿಶ್ವನಾಥ್ ಐವತ್ತೈದು ಸಾವಿರ ಚಿಲ್ಲರೆ ಮತ ಪಡೆದಿದ್ದರೆ, ಜೆಡಿಎಸ್‌ನ ದತ್ತ 41,899 ಮತ ಪಡೆದಿದ್ದಾರೆ. ಕಾಂಗ್ರೆಸ್‌ನ ಕೆಂಪರಾಜು 30.330 ಮತದಿಂದ ತೃಪ್ತಿಪಟ್ಟುಕೊಂಡಿದ್ದಾರೆ.

ಸಿ.ಟಿ. ರವಿಯ ಮುಖದಲ್ಲಿ ಸಚಿವನಾಗೇ ತೀರುವ ಹೊಳಪು ಕಾಣುತ್ತಿದ್ದರೆ, ಕಾಂಗ್ರೆಸ್-ಜೆಡಿಎಸ್‌ಗಳ ಮುಖಂಡರುಗಳ ಮುಖ ಕಳಾಹೀನವಾಗಿ ಕಂಗೊಳಿಸುತ್ತಿವೆ!


ಜೆಡಿಎಸ್-ಕಾಂಗ್ರೆಸ್‌ಗಳ ಅಲಸೀತನಗಳೇನೇ ಇದ್ದರೂ ಬಿಜೆಪಿ ವಾಮಮಾರ್ಗ ಹಾಗೂ ಹಣ-ಹೆಂಡಗಳ ಅಲೆಯಲ್ಲಿ ಪೊಲೀಸ್ ಬಳಸಿ ಗೆಲುವನ್ನು ಖರೀದಿಸಿದೆಯೆಂಬುದು ದುರಂತ ಸತ್ಯ.

● ಅಜೀಜ್ ಕಿರಗುಂದ

ಬಡವರೇ ಎಚ್ಚರಿಕೆ, ಬರುತ್ತಿದ್ದಾನೆ ದಾಸರಹಳ್ಳಿ ಎಮ್ಮೆಲ್ಲೇ


ಮುನಿರಾಜು

ದಾಸರಹಳ್ಳಿ ಎಂಬ ವಿಧಾನಸಭಾ ಕ್ಷೇತ್ರಕ್ಕೆ ಮುನಿರಾಜು ಎಂಬ ಸೈಟು ಬ್ರೋಕರ್ ಎಮ್ಮೆಲ್ಲೇಯಾಗಿದ್ದೇ ಬಂತು, ಬಡವರ್‍ಯಾರೂ ಭೂಮಿ ಹೊಂದಿರುವಂತಿಲ್ಲ ಎಂಬ ಚಂಡ ಶಾಸನವೊಂದು ತನ್ನಿಂತಾನೇ ಜಾರಿಗೆ ಬಂದಿದೆ. ಕೋರ್ಟು, ಪೊಲೀಸು, ಕಾನೂನು, ಕಂದಾಯ ಇಲಾಖೆ ಯಾವುದೂ ಇಲ್ಲಿ ಬಡವನ ಭೂಮಿಯನ್ನು ರಕ್ಷಿಸುವುದಿಲ್ಲ. ಸರ್ಕಾರಿ ಜಮೀನು, ಗೋಮಾಳ, ಆಟದ ಗ್ರೌಂಡು, ಸೀಎ ಸೈಟು ಯಾವುದೂ ಉಳಿದಿಲ್ಲ ವಾದ್ದರಿಂದ ಸದ್ಯ ಬಡವರ್‍ಯಾರೂ ಭೂಮಿ ಹೊಂದಿರುವಂತಿಲ್ಲ ಎಂಬ ಅಘೋಷಿತ ಹುಕ ಮ್ಮೊಂದನ್ನು ಚಾಲ್ತಿಗೆ ತಂದವನು ದಾಸರ ಹಳ್ಳಿಯ ಬಿಜೆಪಿ ಶಾಸಕ ಅರ್ಥಾತ್ ಅಶೋಕ್ ಸಾಹೇಬರ ನೆಚ್ಚಿನ ಬಂಟ ಶೆಟ್ಟಿಹಳ್ಳಿ ಮುನಿ ರಾಜು!


ಅಶೋಕ್

ಹೆಣ ಹೂಳುವುದಕ್ಕೂ ಸರ್ಕಾರಿ ಭೂಮಿ ಉಳಿಸದೇ ಸೈಟು ವಿಂಗಡಿಸಿ ಮಾರಿ ಹಾಕಿದ ಮುನಿರಾಜುವಿಗೆ ದೋಚಲು ಉಳಿದಿರುವುದು ರೈತಾಪಿ ಬಡಬಗ್ಗರ ಆಸ್ತಿಯೊಂದೇ. ದಾಸರಹಳ್ಳಿ ಹೇಳಿಕೇಳಿ ಅರ್ಧ ಗ್ರಾಮಾಂತರ ಕ್ಷೇತ್ರ. ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಬಾಣಾವರ, ಮಲ್ಲಸಂದ್ರ, ಸೋಮಶೆಟ್ಟಳ್ಳಿ, ಕೆರೆಗುಡ್ಡದಹಳ್ಳಿ, ಸಿಡೇದಹಳ್ಳಿ, ಸೋಲದೇವನಹಳ್ಳಿ; ಇತ್ಯಾದಿ ಬೆಂಗಳೂರು ಹೊರವಲಯದ ಹಳ್ಳಿಗಳಲ್ಲಿ ದಲಿತರು-ಒಕ್ಕಲಿಗರಾದಿಯಾಗಿ ಅಷ್ಟಿಷ್ಟು ಆಸ್ತಿ ಉಳಿಸಿಕೊಂಡಿದ್ದಾರೆ. ಇಂಥವರ ಪೈಕಿ ಯಾರ್‍ಯಾರಿಗೆ ಬಡಿದಾಡುವ ತಾಕತ್ತಿಲ್ಲವೋ, ಕಾನೂನು ಗೊತ್ತಿಲ್ಲವೋ ಅಂಥವರನ್ನೇ ಆಯ್ದು ಕಾಟ ಕೊಟ್ಟು ಆಸ್ತಿ ಬರೆಸಿಕೊಳ್ಳುವುದು ಎಮ್ಮೆಲ್ಲೇ ಮುನಿರಾಜನ ದುಷ್ಟಬುದ್ಧಿ.


ಕೆರೆಗುಡ್ಡದ ಹಳ್ಳಿಯ ಮಲ್ಲಮ್ಮನ ಆಸ್ತಿ

ಬಡವಿಧವೆ ಮಲ್ಲಮ್ಮ

ಮುನಿರಾಜು ಹುಟ್ಟೂರಾದ ಶೆಟ್ಟಿಹಳ್ಳಿಗೆ ಹೊಂದಿಕೊಂಡಂತಿರುವ ಕೆರೆಗುಡ್ಡದಹಳ್ಳಿಯ ಬಡವಿಧವೆ ಮಲ್ಲಮ್ಮ ಮತ್ತು ಆಕೆಯ ಮಕ್ಕಳಿಗೆ ಶಾಸಕ ಮುನಿರಾಜು ನೀಡುತ್ತಿರುವ ಕಿರುಕುಳ ಮತ್ತು ಗೂಂಡಾದಬ್ಬಾಳಿಕೆಯ ವಿರುದ್ಧ ಮಾನವಹಕ್ಕು ಆಯೋಗ, ಲೋಕಾ ಯುಕ್ತ ರಾಜ್ಯಪಾಲರು, ಮುಖ್ಯಮಂತ್ರಿ ಯಾದಿಯಾಗಿ ದೂರು ಹೋಗಿದೆ. ಅಷ್ಟಕ್ಕೂ ಕೆರೆಗುಡ್ಡದಹಳ್ಳಿಯ ಮಲ್ಲಮ್ಮ ಓರ್ವ ನಿರ್ಗತಿಕ ರೈತಾಪಿ ವಿಧವೆ ಎಂಬು ದನ್ನು ಬಿಟ್ಟರೆ ಶಾಸಕ ಮುನಿ ರಾಜುವಿಗಾಗಲಿ ಆಕೆಗಾಗಲಿ ಏನೇನು ವ್ಯವಹಾರವಿಲ್ಲ.

ಕೆರೆಗುಡ್ಡದಹಳ್ಳಿಯ ಸರ್ವೆ ನಂ. 1211 ರಲ್ಲಿ ಆಕೆಗಿದ್ದ 1.15 ಎಕರೆ ಜಮೀನಿನ ಮೇಲೆ ಎಮ್ಮೆಲ್ಲೇ ಮುನಿರಾಜು ಕಣ್ಣು ಹಾಕದೇ ಹೋಗಿದ್ದರೆ ಆಕೆಗಾಗಲಿ, ಆಕೆಯ ಮಕ್ಕಳು ಅಳಿಯಂದಿರಿಗಾಗಲಿ ಈ ಗತಿ ಬರುತ್ತಿರಲಿಲ್ಲ. ಮಲ್ಲಮ್ಮ ಪಟೇಲ್ ಲಿಂಗೇಗೌಡರ ಎರಡನೇ ಪತ್ನಿ. ಸಾಯುವ ಮುನ್ನ ಲಿಂಗೇಗೌಡರು ತಮ್ಮ ಆಸ್ತಿಯನ್ನು ಹಂಚಿಕೆ ಮಾಡಿಟ್ಟೇ ಹೋಗಿದ್ದಾರೆ. ಆದರೆ ಮಲ್ಲಮ್ಮನ ಪಾಲಿಗೆ ಬಂದಿದ್ದ 1.15 ಎಕರೆ ಜಮೀನನ್ನು ಭೂಮಿತಿ ಕಾಯ್ದೆ ರೀತ್ಯ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತ್ತು, ಆದರ ವಿರುದ್ಧ ದಶಕಗಟ್ಟಲೇ ಹೈಕೋರ್ಟಿನಲ್ಲಿ ಸೆಣಸಾಡಿದಳು ಮಲ್ಲಮ್ಮ. ಅಂತಿಮವಾಗಿ 2007 ರ ಜುಲೈ 25 ರಂದು ಸರ್ಕಾರ ಮಲ್ಲಮ್ಮನ ಆಸ್ತಿ ಮುಟ್ಟುಗೋಲು ಹಾಕಿಕೊಂಡಿದ್ದೇ ತಪ್ಪೆಂದು ಹೈ ಕೋರ್ಟ್ ತೀರ್ಪಿತ್ತಿದ್ದೇ ಬಂತು.

ಹೇಗೂ ಬಡ ವಿಧವೆ. ಹೆಣ್ಣು ಮಕ್ಕಳ ಹೊರತಾಗಿ ಉಳಿದವರೆಲ್ಲ ಅಳಿಯಂದಿರೆ. ತಾನೇ ಎಮ್ಮೆಲ್ಲೇಯಾಗಿರುವುದರಿಂದ ಸಲೀಸಾಗಿ ಪೊಲೀಸರು ಗೂಂಡಾಗಳನ್ನು ಛೂಬಿಟ್ಟು ಮಲ್ಲಮ್ಮನನ್ನು ಒದ್ದೋಡಿಸಿ ಆಸ್ತಿ ದೋಚುವುದು ಮುನಿರಾಜು ಹುನ್ನಾರ.

ಇಲ್ಲದ ಭೂಮಿಗೆ ಕಳ್ಳ ದಾಖಲೆ

ಇಲ್ಲಿಗೆ ವರ್ಷದ ಹಿಂದೆ ಮಲ್ಲಮ್ಮ ಮತ್ತು ಆಕೆಯ ಹೆಣ್ಣುಮಕ್ಕಳನ್ನು ಮನೆಗೆ ಕರೆಸಿಕೊಂಡ ಮುನಿರಾಜು 'ನಿನ್ನ ಮಗಳ ಮಾಂಗಲ್ಯ ಉಳೀಬೇಕಾ ಅಥವಾ ಜಮೀನು ಬೇಕಾ? ನೀನೇ ನಿರ್ಧರಿಸು' ಎಂದು ಧಮಕಿ ಕೊಟ್ಟ. ಮೊದಲೇ ರೋಸತ್ತಿದ್ದ ಮುದುಕಿ ಮಲ್ಲಮ್ಮ 'ಕೊಲೆ ಮಾಡೋದು ಬಿಟ್ಟರೆ ನಿನ್ನ ಕೈಲಿ ಇನ್ನೇನಯ್ಯಾ ಮಾಡೋಕ್ಕಾಗುತ್ತೆ...' ಎಂದಿದ್ದೇ ಝಾಡಿಸಿ ಎದ್ದು ಬಂದಳು. ಅಲ್ಲಿಂದಾಚೆಗೆ ಮುನಿರಾಜು ಆಕೆಗೆ ಕೊಟ್ಟ ಹಾವಳಿಯಿದೆಯಲ್ಲ ಬಹುಶಃ ಕರ್ನಾಟಕದ ಇನ್ನೂರಿಪ್ಪತ್ನಾಲ್ಕು ಶಾಸಕರ ಪೈಕಿ ಬೇರೆ ಯಾರೂ ಈ ಮಟ್ಟಕ್ಕಿಳಿದಿರಲಾರರು.

ಈ ಮಲ್ಲಮ್ಮನ 1.15 ಎಕರೆ ಜಮೀನಿಗೆ ಹೊಂದಿಕೊಂಡಂತೆ ಆಕೆಯ ಸವತಿ ಅಂದರೆ ಲಿಂಗೇಗೌಡರ ಹಿರಿ ಹೆಂಡತಿ ಪಾರ್ವತಮ್ಮನ ಮಗ ನಾಗರಾಜುವಿನ ಒಂದೆಕರೆ ಆಸ್ತಿಯಿದೆ. ಈ ಪೈಕಿ 8 ಗುಂಟೆಯನ್ನು 1978 ರಲ್ಲೇ ಶಿವಣ್ಣ ಎಂಬಾತನಿಗೂ 20 ಗುಂಟೆಯನ್ನು 1987 ರಲ್ಲಿ ಗಂಗಣ್ಣ ಎಂಬಾತನಿಗೂ ನಾಗರಾಜು ಮಾರಿದ್ದಾನೆ. ಉಳಿದದ್ದು 12 ಗುಂಟೆ ಮಾತ್ರ. ಭೂಮಿಯೇ ಇಲ್ಲದಿದ್ದರೂ ಅದೇನೋ ಕಳ್ಳ ದಾಖಲೆ ಸೃಷ್ಟಿಸಿದ ನಾಗರಾಜು 1991 ರಲ್ಲಿ ಮುನಿರಾಜುವಿಗೆ ಛೇಲಾ ಆಗಿದ್ದ ಕೇಶವಮೂರ್ತಿಗೆ 1 ಎಕರೆ ಮಾರುತ್ತಾನೆ. ಹೀಗೆ ಕಾಗದದಲ್ಲಷ್ಟೇ ಉಳಿದ 1 ಎಕರೆಯ ಪೈಕಿ ಕೇಶವಮೂರ್ತಿ ತಾನು 10 ಗುಂಟೆ ಇಟ್ಟುಕೊಂಡು 30 ಗುಂಟೆಯನ್ನು 1995 ರಲ್ಲಿ ಮುನಿರಾಜುಗೆ ಮಾರುತ್ತಾನೆ.


ಮಲ್ಲಮ್ಮ

ಇಲ್ಲಿ ವಾಸ್ತವವಾಗಿ ಮುನಿರಾಜು ಕೈ ಸೇರಿದ್ದು ಕೇವಲ ಎರಡು ಗುಂಟೆಯಾದರೂ ದಾಖಲೆಗಳಲ್ಲಿ ಅದು 30 ಗುಂಟೆಯಾಗಿದ್ದು ಪಕ್ಕದ ಮಲ್ಲಮ್ಮನ ಆಸ್ತಿ ದೋಚುವ ಉದ್ದೇಶದಿಂದ ಮಾತ್ರ. ಪಕ್ಕದ ಮಲ್ಲಮ್ಮನ ಜಮೀನನ್ನೇ ತೋರಿ ಮುನಿರಾಜು ರಾಜಾಜಿನಗರದ ಪುಷ್ಪಾ ಹಳದಿ ಎಂಬಾಕೆಗೆ ಅಸ್ತಿತ್ವದಲ್ಲೇ ಇಲ್ಲದ ದಾಖಲೆಗಷ್ಟೇ ಇದ್ದ ಹತ್ತು ಗುಂಟೆಯನ್ನು 97 ರಲ್ಲಿ ಮಾರಿಬಿಟ್ಟ. ಬಹುಶಃ ಹೈಕೋರ್ಟ್ ಮಲ್ಲಮ್ಮನ ಪರ ತೀರ್ಪು ನೀಡದೇ ಹೋಗಿದ್ದರೆ ಸರ್ಕಾರಿ ಲೆಕ್ಕಕ್ಕೆ ಸೇರಿರುತ್ತಿದ್ದ ಆಕೆಯ 1.15 ಎಕರೆ ಭೂಮಿಯನ್ನು ಪಕ್ಕದ ಆಸ್ತಿಯ ದಾಖಲೆಗಳನ್ನಿಟ್ಟುಕೊಂಡು ಮುನಿರಾಜು ಮಾರಿ ತಿನ್ನುತ್ತಿದ್ದ.

ಭ್ರಷ್ಟ ಪಿಎ ವಾಸು

ಯಾವತ್ತು ಹೈಕೋರ್ಟು ಮಲ್ಲಮ್ಮನ ಪರ ತೀರ್ಪಿತ್ತಿತೊ ಮುನಿರಾಜು ಮೋಸಕ್ಕೆ ಕಲ್ಲುಬಿದ್ದಿದೆ. ಶತಗತಾಯ ಪಹಣಿಯಲ್ಲಿ ಮಲ್ಲಮ್ಮನ ಹೆಸರು ಬರದಂತೆ ಖದೀಮ ರೆವಿನ್ಯೂ ಇನ್ಸ್‌ಪೆಕ್ಟರ್ ಸಿದ್ಧರಾಜುವನ್ನು ಛೂಬಿಟ್ಟಿದ್ದಾನೆ. ಕೋರ್ಟ್ ಆದೇಶದ ಪ್ರಕಾರ ಕಂದಾಯ ಇಲಾಖೆ ಮಲ್ಲಮ್ಮ ಹೆಸರಿಗೇ ಪಹಣಿ-ಮ್ಯುಟೇಶನ್ ಮಾಡಿಕೊಡಬೇಕು. ರೆವಿನ್ ಇನ್ಸ್‌ಪೆಕ್ಟರ್ ಸಿದ್ಧರಾಜು ತಾನೇ ಎಷ್ಟು ಅಂತ ಕಾ ನೂಕಿಯಾನು? ಮಲ್ಲಮ್ಮನಿಗೆ ಕೊಟ್ಟ ಕಿರುಕುಳದ ವಿರು ಲೋಕಾಯುಕ್ತವೇ ಸಿದ್ಧರಾಜುವನ್ನು ಹಿಡಿದು ಅಮಾನ ಮಾಡಿದ ಮೇಲೆ ಮುನಿರಾಜು ಆ ಜಾಗಕ್ಕೆ ತಂದಿದ ರಮೇಶ್‌ನನ್ನು, ಮಲ್ಲಮ್ಮನ ಆಸ್ತಿಯನ್ನು ತನ್ನ ಹೆಸರಿ ಮಾಡಿಕೊಡುವಂತೆ ಎಮ್ಮೆಲ್ಲೇ ಎಷ್ಟೇ ದಬಾಯಿಸಿದರ ರಮೇಶ್ ಒಪ್ಪದೇ ಹೋದ. ಕೊನೆಗೆ ರಮೇಶನನ್ನೇ ಎತ್ತಂಗ ಮಾಡಿದ ಮುನಿರಾಜು ತನ್ನ ಛೇಲಾ ಸುರೇಶ್ ಎಂಬಾತನ ರೆವಿನ್ಯೂ ಇನ್ಸ್‌ಪೆಕ್ಟರ್ ಗಾದಿಗೆ ತಂದ. ಆತನ ಮೂಲ ಮಲ್ಲಮ್ಮನ ಆಸ್ತಿ ಹೊಡೆಯಲೆಂದೇ ತನ್ನ ಖದೀಮ ಪಿ ವಾಸು ಎಂಬಾತನನ್ನು ನಿಯೋಜಿಸಿದ. ಈತ ಲ್ಯಾಂಡ ಗ್ರಾಬಿಂಗ್‌ನಲ್ಲಿ ಮಹಾ ನಿಸ್ಸೀಮ!

ಹಡಬಿಟ್ಟಿ ಗಂಡ ಹೊಟ್ಟೆ ತುಂಬ ಉಂಡ ಎಂಬಂ ಬಂದ ಒಂದೇ ವಾರಕ್ಕೆ ಆರ್.ಐ. ಸುರೇಶ್ ಮಲ್ಲಮ್ಮ ಆಸ್ತಿಯನ್ನು ಎಮ್ಮೆಲ್ಲೇ ಹೆಸರಿಗೆ ಪಹಣಿ ಬರೆದುಬಿಟ ಇದರ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂ ಕೊಟ್ಟಳು ಮಲ್ಲಮ್ಮ. ವಿಚಾರಣೆ ನಡೆಸಿ ವಿಶೇಷ ಜಿಲ್ಲಾಧಿಕಾರಿ ರಾಮಾಂಜನೇಯ 2009 ರ ನವೆಂಬರ್ 18 ರಂದು ಮೋಸ ಪಹಣಿಗೆ ತಡೆ ಕೊಟ್ಟುಬಿಟ್ಟರು. ಸದ್ಯ ಜಿಲ್ಲಾ ಕಾರಿ ಆದೇಶವಷ್ಟೇ ಬಾಕಿಯಿದೆ. ತಹಶೀಲ್ದಾ ರಂಗನಾಥಯ್ಯ ಮತ್ತು ವಿಶೇಷ ಜಿಲ್ಲಾಧಿಕಾ ರಾಮಾಂಜನೇಯರಿಗೆ ಎಮ್ಮೆಲ್ಲೇ ಮುನಿರಾ ವಿನ ಅಣತಿ ಮೀರಿ ಕಾನೂನನ್ನು ಎತ್ತಿ ಹಿ ಯುವ ಶಕ್ತಿಯುಂಟೆ?

ಇನ್ಸ್‌ಪೆಕ್ಟರ್ ಸುಬ್ರಮಣಿ

ಹೈಕೋರ್ಟೇ ಆದೇಶವಿತ್ತಾಗಲೂ ಮಲ್ಲಮ್ಮನ ಆ ಯನ್ನು ಆಕೆಯ ಹೆಸರಿಗೆ ಪಹಣಿ ಬರೆಯಲಾಗ ಕಂದಾಯ ಅಧಿಕಾರಿಗಳ ದುರ್ಗತಿ ಒಂದೆಡೆಯಾದ ಮತ್ತೊಂದೆಡೆ ಯಾರದೊ ಆಸ್ತಿ ದೋಚುವ ಶಾಸಕ ದುರ್ಬುದ್ಧಿಗೆ ತಾಳ ಹಾಕುವ ಕರ್ಮ ಪೊಲೀಸರದ ಸದ್ಯ ಸೋಲದೇವನಹಳ್ಳಿ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟ ಆಗಿರುವ ಸುಬ್ರಮಣಿ ಹೊಸಕೋಟೆಯ ನಂದಗುಡಿಯ ದ್ದಾಗಲೇ ಬಚ್ಚೇಗೌಡನ ಹಂತಕಪಡೆಯನ್ನು ಮ

ಕೊಳ್ಳೆಯ ಕಾಸು ಮತ್ತು ಗಾಡ್‌ಫಾದರ್ ಅಶೋಕ್


ಬೋಗಸ್ ಬಿಲ್ ದಂಧೆ ಮತ್ತು ಕಳ್ಳ ಕಾಮಗಾರಿಗಳ ಮೂಲಕ ಒಂದೇ ಸಮನೇ ದುಡ್ಡು ದೋಚುತ್ತಿರುವ ಮುನಿರಾಜುಗೆ ಸದ್ಯ ಬಡಬಗ್ಗರ ಆಸ್ತಿ ನುಂಗುವಂಥ ದಾರಿದ್ರ್ಯವಂತೂ ಖಂಡಿತಾ ಇಲ್ಲ. ದಾಸರಹಳ್ಳಿ ಕ್ಷೇತ್ರವೊಂದಕ್ಕೇ ಇನ್ನೂರು ಕೋಟಿಗೂ ದೊಡ್ಡ ಮೊತ್ತದ ಅಭಿವೃದ್ಧಿ ನಿಧಿ ಬಿಡುಗಡೆಯಾಗಿದೆ. ರಸ್ತೆಗೆ ಟಾರು, ಮೈಲುದ್ದದ ಮೋರಿ, ಪಾರ್ಕು, ಪಾಲಿಕೆ ಕಚೇರಿ ಇತ್ಯಾದಿ ಪ್ರತಿಯೊಂದಕ್ಕೂ ಯಥೇಚ್ಛವಾಗಿ ಹಣ ನೀಡಲಾಗಿದೆ.

ಸಂತೆ ಮುನ್ನ ಗಂಟುಕಳ್ಳರು ಸೇರಿದಂತೆ ಮುನಿರಾಜು ಟೆಂಡರ್ ಕೊಳ್ಳೆಗೆಂದೇ ಖತರ್‌ನಾಕ್ ಕೀರಾನಾಯಕ್‌ನಂಥ ಪಾಲಿಕೆ ಹೆಗ್ಗಣವನ್ನು ತಂದು ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಯಲ್ಲಿ ಪ್ರತಿಷ್ಠಾಪಿಸಿದ್ದಾನೆ. ಒಂದಲ್ಲ ಎರಡುಬಾರಿ ಲೋಕಾಯುಕ್ತಕ್ಕೆ ಸಿಕ್ಕಿಬಿದ್ದ, ನೂರಾರು ಕೋಟಿ ಪಾಲಿಕೆ ನಿಧಿಯನ್ನು ಮುಂಡಾಮೋಚಿದವನು ಕಿರಾತಕ ಕೀರಾನಾಯ್ಕ, ತಾನೇ ಬೇನಾಮಿಯಾಗಿ ಕಾಂಟ್ರಾಕ್ಟ್ ಬೇರೆ ಮಾಡುತ್ತಾನೆ. ಜೊತೆಗೆ ಮಲ್ಲೇಶ್ವರದ ಶಾಸಕ ಅಶ್ವತ್ಥ ನಾರಾಯಣನ ತಮ್ಮಂದಿರಾದ ವಿಜಯಕುಮಾರ್, ರವಿ ಮತ್ತು ಸುದರ್ಶನ್ ಇಲ್ಲಿ ಕೋಟಿಗಟ್ಟಲೇ ಕಾಮಗಾರಿ ಟೆಂಡರ್ ಹಿಡಿದಿದ್ದಾರೆ. ಅಬ್ಬಿಗೆರೆಯಿಂದ ಕೆ.ಜಿ. ಹಳ್ಳಿ ಅಂದರೆ ಕೆರೆಗುಡ್ಡದಹಳ್ಳಿ ತನಕ ನೂರು ಕೋಟಿ ಮೊತ್ತದ ಮೋರಿ ಕಾಮಗಾರಿಯ ಕತೆಯೊಂದೇ ಇಡೀ ಬೋಗಸ್ ದಂಧೆಗೆ ಮೂಕಸಾಕ್ಷಿಯಂತಿದೆ.



ಕೆಲವೆಡೆ ಕಟ್ಟಿದ ಮೋರಿಯೇ ಕುಸಿದು ಬಿದ್ದಿದೆ. ಅಬ್ಬಿಗೆರೆಯಿಂದ ಚಿಕ್ಕಬಾಣಾವರದವರೆಗೆ ನಿರ್ಮಿಸಿದ ಮೋರಿಯ ಸಿಮೆಂಟ್ ಹೊದಿಕೆಗಳೇ ಕಿತ್ತು ಹೋಗಿವೆ. ಮಧ್ಯೆ ದಾಸಪ್ಪನಪಾಳ್ಯದಲ್ಲಂತೂ ಮೋರಿಗೆ ಮೇಲು ಹೊದಿಕೆಯನ್ನೇ ನಿರ್ಮಿಸಿಲ್ಲ. ಟಾರು ಹಾಕಿದ ನಾಲ್ಕೇ ತಿಂಗಳಿಗೆ ಕೆ.ಜಿ. ಹಳ್ಳಿ-ಅಬ್ಬಿಗೆರೆ ರಸ್ತೆ ಹೊಂಡಬಿದ್ದ ಚರಂಡಿಯಂತಾಗಿದೆ. ಬಾಣಾವರ-ಕೆ.ಜಿ. ಹಳ್ಳಿ ಮುಖ್ಯರಸ್ತೆ ಚಿಕ್ಕಬಾಣಾವರ-ಕೆ.ಜಿ. ಹಳ್ಳಿ ರಸ್ತೆ ಅಬ್ಬಿಗೆರೆ, ಕೆ.ಜಿ. ಹಳ್ಳಿರಸ್ತೆ ಮತ್ತು ಶೆಟ್ಟಳ್ಳಿ ರಸ್ತೆಯಲ್ಲಿ ಎಲ್ಲೆಂದರಲ್ಲಿ ಹೊಂಡಬಿದ್ದಿದೆ. ಕೆಲವೆಡೆ ಮೋರಿಯೇ ಕುಸಿದು ಬಿದ್ದಿದೆ. ಹಾಗಾದರೆ ಬಿಡುಗಡೆಯಾದ ಇನ್ನೂರು ಕೋಟಿ ಏನಾಯಿತು? ತನ್ನ ಆಸ್ತಿ ಉಳಿಸಿಕೊಳ್ಳಲು ಕೆ.ಜಿ. ಹಳ್ಳಿ-ಅಬ್ಬಿಗೆರೆ ರಸ್ತೆಯ ನಕ್ಷೆಯನ್ನೇ ಬದಲಿಸಿ ಯಡವಟ್ಟು ಸೃಷ್ಟಿಸಿದ ಮುನಿರಾಜು ಕಾಮಗಾರಿ ಟೆಂಡರ್ ಮೂಲಕ ದೋಚಿದ್ದೇ ನೂರು ಕೋಟಿಗೂ ಅಧಿಕ.

ಈ ಬಗ್ಗೆ ಸಿಬಿಐ ತನಿಖೆಯಾದರೆ ಮುನಿರಾಜು ಜೈಲು ಪಾಲಾಗುವುದು ಶತಸ್ಸಿದ್ಧ. ಈ ರೀತಿ ಹೊಡೆದ ಕೊಳ್ಳೆಯಲ್ಲಿ ಗುರು ಅಶೋಕ್‌ಗೆ ಬಿಟ್ಟರೆ ಬೇರೆ ಯಾರಿಗೂ ಮುನಿರಾಜು ಪಾಲು ಕೊಟ್ಟಿಲ್ಲ. ಆ ಕಾಲದಿಂದಲೂ ಪಕ್ಷ ಕಟ್ಟಿದ ಬಗಲ ಗುಂಟೆಯ ಬಿ.ಎಂ. ಕೃಷ್ಣಪ್ಪ, ದಾಸರಹಳ್ಳಿಯ ಆರ್.ಸಿ. ದೊರೆ, ಸಿಡೇದಹಳ್ಳಿಯ ಗುಂಡಪ್ಪ ವಿದ್ಯಾನಗರದ ಮಾಜಿ ಕೌನ್ಸಿಲರ್ ಡಿ.ಎಂ. ಸುರೇಶ್, ಮಲ್ಲಸಂದ್ರದ ಜಗದೀಶ್ ಮತ್ತು ಹಿರಿಯ ಬಿಜೆಪಿ ನಾಯಕ ಮರಿಸ್ವಾಮಿ ಮುಂತಾದವರೆಲ್ಲ ಸದ್ಯ ಮುನಿರಾಜು ವಿರುದ್ಧ ತಿರುಗಿಬಿದ್ದಿದ್ದಾರೆ. ಕಳೆದ ಪಾಲಿಕೆ ಚುನಾವಣೆಯಲ್ಲಿ ಅರ್ಧಕ್ಕರ್ಧ ಕೌನ್ಸಿಲರ್ ಸ್ಥಾನಗಳು ಜೆಡಿಎಸ್-ಕಾಂಗ್ರೆಸ್ ಪಾಲಾಯಿತು. ಎರಡು ಪಂಚಾಯ್ತಿಗಳ ಪೈಕಿ ಚಿಕ್ಕಬಾಣಾವರದ ಹದಿನಾಲ್ಕು ಸ್ಥಾನಗಳಲ್ಲಿ ಬಿಜೆಪಿಗೆ ಗಿಟ್ಟಿದ್ದು ಕೇವಲ ಒಂದೇ ಸ್ಥಾನ.


ಕಬೀರ್ ಅಹ್ಮದ್

ಅದು ಜೆಡಿಎಸ್ ನಾಯಕ ಕಬೀರ್ ಅಹ್ಮದ್ ಕೈ ಚಳಕವಾಗಿತ್ತು. ಮುನಿರಾಜು ವಿರುದ್ಧ ತೊಡೆತಟ್ಟಿದ ಕಬೀರ್ ಅಹ್ಮದ್ ತನ್ನ ಸ್ವಶಕ್ತಿ ಮತ್ತು ಜನಪ್ರಿಯತೆಯಿಂದ ಜೆಡಿಎಸ್ ಪರ 12 ಸ್ಥಾನಗಳನ್ನು ಗೆಲ್ಲಿಸಿಕೊಟ್ಟದ್ದು ಮುನಿರಾಜು ಪಾಲಿಗೆ ದೊಡ್ಡ ಮುಖಭಂಗವಾಯಿತು. ಪಂಚಾಯಿ ಚುನಾವಣೆಯಲ್ಲಿ ಪ್ರಚಾರಕ್ಕೆ ಬಂದಿದ್ದ ಮುನಿರಾಜು ಎಮ್ಮೆಲ್ಲೇ ಎಂಬುದನ್ನೂ ಲೆಕ್ಕಿಸದೇ ಕಬೀರ್ ಅಹ್ಮದ್ ಬೆಂಬಲಿಗರು ಓಡಿಸಿಬಿಟ್ಟರು. ಸದ್ಯ ಮುನಿರಾಜು ಬೆನ್ನಿಗೆ ಅಶೋಕ್ ಮತ್ತು ದುಡ್ಡು ಬಿಟ್ಟರೆ ಪಾರ್ಟಿಯೂ ಇಲ್ಲ, ಜನ ಮೊದಲೇ ಇಲ್ಲ.

ವರು. ಈಗ ಮುನಿರಾಜು ಪರ ರೌಡಿಯ ಪಾತ್ರವನ್ನೂ ನಿರ್ವಹಿಸಬೇಕಂತೆ. ಪದೇಪದೇ ಕೆರೆಗುಡ್ಡದಹಳ್ಳಿಗೆ ಟ್ಟು ಮಲ್ಲಮ್ಮನ ಜಮೀನಿನಿಂದ ಆಕೆಯನ್ನು ಹೊರ ದಂತೆ ಮುನಿರಾಜು ಗದರುತ್ತಾನೆ. ವಿಧಿಯಿಲ್ಲದೇ ಮ್ಮ ಮಲ್ಲಮ್ಮ ಮತ್ತಾಕೆಯ ಮಕ್ಕಳಿಗೆ ರೋಪು ತ್ತಾರೆ.

ಕೋರ್ಟೇ ಮಲ್ಲಮ್ಮನ ಪರ ಆದೇಶವಿತ್ತಾಗಲೂ ಲ್ಲೇ ಹೇಳಿದ ಮಾತ್ರಕ್ಕೆ ಪೊಲೀಸ್ ಬಡ ವಿಧವೆ ಳನ್ನು ಆಕೆಯ ಆಸ್ತಿಯಿಂದ ಹೇಗೆ ಹೊರದಬ್ಬಲು ಇದು ಗೂಂಡಾಗಿರಿಯಲ್ಲದೇ ಮತ್ತೇನು? ಅಷ್ಟಿಷ್ಟು ಳಿಸಿಕೊಂಡಿರುವ 'ಇನ್ಸ್‌ಪೆಕ್ಟರ್ ಸುಬ್ರಮಣಿಯಂಥ ತನ್ನ ಹಗಲುದರೋಡೆಗೆ ಬಳಸುತ್ತಿರುವ ಶಾಸಕ ರಾಜುವಿಗೆ ಬುದ್ಧಿ ಹೇಳುವವರ್ಯಾರು?

ಚೋರಗುರು ಅಶೋಕ್

ನ್ನ ಭಟ್ಟಂಗಿ ಬುದ್ಧಿ ಮತ್ತು ನೆಲದೋಚುವ ಗುಣದಿಂದಾಗಿಯೇ ಎಮ್ಮೆಲ್ಲೇಯಾದವನು ಶೆಟ್ಟಿಹಳ್ಳಿ ರಾಜು. ಮೊದಲು ಮೈಸೂರು ವೈರ್ ಫ್ಯಾಕ್ಟರಿಯಲ್ಲಿ ತ್ ಕೂಲಿಯಾಗಿದ್ದ. ನಂತರ ರಾಜಾರೆಡ್ಡಿಯ ಪನಲ್ಲಿ ಅಟೆಂಡರ್ ಆದ. ಹಳೇ ಸೈಕಲ್ಲೊಂದರಲ್ಲಿ ಬ್ರೋಕರಿಕೆ ಮಾಡಿಕೊಂಡಿದ್ದ ಇದೇ ಮುನಿರಾಜು ದೋ ಸೈಟಿಗೆ ಬೋಗಸ್ ರೆಕಾರ್ಡು ಸೃಷ್ಟಿಸಿ ಗೋ ಮಾರಲು ಹೋಗಿ ಇನ್ನೇನು ಜೈಲು ಪಾಲಾ ಎನ್ನುವಷ್ಟರಲ್ಲಿ ಆಗ ಉತ್ತರ ಹಳ್ಳಿಗೆ ಶಾಸಕರಾಗಿದ್ದ ಕ್ ಕಾಲಿಗೆ ಬಿದ್ದ. ಅಲ್ಲಿಂದಾಚೆಗೆ ಮುನಿರಾಜುವಿನ ಬದಲಾಯಿತು.

ಶೋಕ್ ಕೂಡ ರಿಯಲ್ ಎಸ್ಟೇಟ್ ದಂಧೆಯಿಂದಲೇ ದವಾಗಿದ್ದರಿಂದ ಅವರಿಗೆ ನಂಬಿಕಸ್ಥ ಭಟ್ಟಂಗಿಯೊಬ್ಬನ ತ್ತು, ಅದಕ್ಕೆ ತಕ್ಕಂತೆ ಮುನಿರಾಜು ಹುಟ್ಟಿಕೊಂಡಿದ್ದ. ರಾಜರಾಜೇಶ್ವರಿ ನಗರದಲ್ಲಿ ಐಷಾರಾಮಿ ಗೆಸ್ಟ್ ಕಟ್ಟಿಸಿ ಅಶೋಕ್‌ಗೆ ಸಕಲ ಸಂಜೆಯ ಗ್ಗಗಳೆಲ್ಲವನ್ನೂ ಪೂರೈಸುತ್ತಿದ್ದ ರಾಜರಾಜೇಶ್ವರಿ ನಗರದ ಕೌನ್ಸಿಲರ್ ರಾಮಚಂದ್ರ ಮತ್ತು ಡಿಫೆನ್ಸ್ ನಿಯ ತನ್ನ ಬಂಗಲೆ ಪಕ್ಕದಲ್ಲೇ ಇನ್ನೊಂದು ಮೋಜಿನ ಟ್ಟಿಸಿ ಅಶೋಕ್ ಸಾಹೇಬರ ಖಯಾಲಿಗಳೆಲ್ಲಕ್ಕೂ ಮಾಡಲು ನಿಂತ ಮುನಿರಾಜು; ಕರಟಕ-ದಮನಕ ಮಂತ್ರಿ ಅಶೋಕ್ ಎಡಗೈ ಬಲಗೈಗಳಾದರು.

ಶೋಕ್ ಚಪಲಕ್ಕೆ ಉಪಶಮನ ಕಲ್ಪಿಸುವುದು ಮತ್ತು ನ ಕೊಳ್ಳೆಯನ್ನು ತನ್ನ ಹೆಸರಲ್ಲಿ ಜೋಪಾನ ವುದು ಬಿಟ್ಟರೆ ಮುನಿರಾಜುವಿಗೆ ಬೇರೆ ಯಾವುದೇ ತೆಯಿರಲಿಲ್ಲ. ನೆಲದೋಚುವುದು ಬಿಟ್ಟರೆ ಬೇರೆ ವಿಲ್ಲ, ಭಾಷಣಕಾರನಲ್ಲ, ಬಿಜೆಪಿಯ ತತ್ವ-ಸಿದ್ಧಾಂತ ಲ್ಲ, ಯಾರಿಗೂ ಕೈಯೆತ್ತಿ ನಯಾಪೈಸೆ ಕೊಟ್ಟವನಲ್ಲ. ನ್ಯಾಯಿತೆಂದರೆ ಕಂಠಮಟ್ಟ ಕುಡಿಯುತ್ತಾನೆ. ದೇ ಹೋದರೂ ಹುಟ್ಟು ಕುಡುಕನಂತೆ, ಪಕ್ಕಾ ಬ್ರೋಕರ್‌ನಂತೆ ಕಾಣುವ ಮುನಿರಾಜುವಿಗೆ ಯಕಶ್ಚಿತ್ ಟ್ಟು ಚುನಾವಣೆ ಗೆಲ್ಲುವ ಯೋಗ್ಯತೆಯಿಲ್ಲದಿದ್ದರೂ ಬಿಜೆಪಿ ಟಿಕೆಟ್ ಕೊಡಿಸುತ್ತಾರೆ. ದುಡ್ಡು ಸುರಿದು ಳ್ಳುತ್ತಾರೆ.

ಬಲಿಯಾದ ಬಡರೈತರು

ದ ಮುನಿರಾಜು ಈಗ ತನ್ನ ನೆಲಕೊಳ್ಳೆಯ ಸುಬನ್ನು ಲಜ್ಜೆಗೆಟ್ಟು ಪೂರೈಸುತ್ತಿದ್ದಾನೆ. ಶೆಟ್ಟಿಹಳ್ಳಿ, ಅಬ್ಬಿಗೆರೆ, ಗಾಣಿಗರಹಳ್ಳಿ, ಕೆರೆಗುಡ್ಡದಹಳ್ಳಿ ತ್ತ ಯಾರ್ಯಾರಿಗೆ ಬಾಯಿಲ್ಲವೋ ಅಂಥವರನ್ನೇ ಆಸ್ತಿಗೆ ವಕ್ಕರಿಸುತ್ತಾನೆ. ಜನ ಕೊನೆಗೆ ರೋಸತ್ತು ನ ಆಸ್ತಿಯನ್ನು ಮೂರು ಕಾಸಿಗೆ ಮಾರಬೇಕು. ಎಮ್ಮೆಲ್ಲೇ ಆಸ್ತಿ ದಾಹಕ್ಕೆ ಬಲಿಯಾದ ಬಡಕು ಳೇ ಮೂವತ್ತಕ್ಕೂ ಹೆಚ್ಚಿವೆ. ಈ ಪೈಕಿ ಬಹುತೇಕ ಕುಟುಂಬಗಳು. ಎಮ್ಮೆಲ್ಲೇ ತಮ್ಮ ರಾಮಾಂಜ ದ್ದೂ ಇದೇ ಕೆಲಸ. ಮೊನ್ನೆ ಮಲ್ಲಸಂದ್ರದ ಗೆಲ್ಲ ಮಳೆನೀರು ನುಗ್ಗಿ ಜನ ನೆರವು ಕೇಳಿ ಎಮ್ಮೆಲ್ಲೇ ಬಂದರೆ, ನಾನೇನು ಛತ್ರಿ ಹಿಡಿಬೇಕಾ ಎಂದನಂತೆ ಬಗಲಗುಂಟೆಯ ತನ್ನ ಸಾಯಿ ಕಲ್ಯಾಣ ಮಂಟಪ ಣಂತಿಯರಿಗೆಲ್ಲ ಬಿಟ್ಟೀ ಸೀಮಂತ ಮಾಡಿಸ್ತೀನಿ ಡೈಲಾಗ್ ಹೊಡೆದದ್ದನ್ನು ಕೇಳಿದ ಯಾರೋ ರ್ಭಿಣಿಯೊಬ್ಬಳು ಹೆರಿಗೆ ಆಸ್ಪತ್ರೆಗೆ ಒಂದು ಮಾತು ಂದು ಅಂಗಲಾಚಿದರೆ 'ಅಲ್ಲಮ್ಮಾ, ನನ್ನನ್ನು ಕೇಳಿ ಆದೆಯಾ?' ಎಂದು ಮುನಿರಾಜು ರೋಪು ನೆ.

ಕಂಟಕ ಮನೆಬ್ರೋಕರ್ ಒಬ್ಬನನ್ನು ಎಮ್ಮೆಲ್ಲೇ ತಪ್ಪಿಗೆ ದಾಸರಹಳ್ಳಿಯ ಜನಕ್ಕೆ ಶಿಕ್ಷೆಯಾಗದಿದ್ದರೆ

• ರಾ. ಸೋಮನಾಥ್
ra.somanath2010@gmail.com



BBMP ಆಯುಕ್ತರ ತಾಂತ್ರಿಕ ಸಲಹೆಗಾರನ ಅತಾಂತ್ರಿಕ ನೇಮಕಾತಿ!

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಂತೆಂಥಾ ಬಿಲಗಳಿವೆಯೋ, ಅದರೊಳಗೆ ಯಾವ್ಯಾವ ರೀತಿಯ ಹೆಗ್ಗಣಗಳಿವೆಯೋ ಹೇಳಲು ಬರುವುದಿಲ್ಲ. ಇದರ ಆಡಳಿತ ವೈಖರಿಯ ತುಂಬಾ ವಿಕಟ ಹಾಸ್ಯಗಳಿಗೂ ಬರವಿಲ್ಲ. ಸದ್ಯ ಆಯುಕ್ತರ ತಾಂತ್ರಿಕ ಸಲಹೆಗಾರನಾಗಿರುವ ಎಚ್. ರಾಜಸಿಂಹನೆಂಬಾತ ಮೇಲ್ಕಂಡ ಎಲ್ಲಾ ಅಧ್ವಾನಗಳ ಒಟ್ಟು ಮೊತ್ತದಂತೆ ಕುಕ್ಕರಿಸಿದ್ದಾನೆ.

ವಿಪರ್ಯಾಸ ನೋಡಿ, ಈ ರಾಜಸಿಂಹ ಪಾಲಿಕೆಯ ಕನ್ಸಲ್ಟೆಂಟ್ ಹಾಗೂ ಆಯುಕ್ತರ (ಆಡಳಿತ) ತಾಂತ್ರಿಕ ಸಲಹೆಗಾರ. ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುವ ಕಾಮಗಾರಿಗಳೆಲ್ಲದರ ಮೇಲೆ ನಿಗಾ ಇಟ್ಟು ವೃಥಾ ಹಣ ಪೋಲಾಗದಂತೆ ತಡೆಯುವುದು ಈ ಹುದ್ದೆಯ ಕರ್ತವ್ಯ. ಆದರೆ ಈ ಹುದ್ದೆಯನ್ನು ವಹಿಸಿಕೊಂಡಿರುವ ರಾಜಸಿಂಹನೇ ಪಾಲಿಕೆಯ ದುಡ್ಡು ಅರ್ಥಾತ್ ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿದ್ದಾನೆ! ಯಾಕೆಂದರೆ ಈ ಆಸಾಮಿ ತಾನಿರುವ ಹುದ್ದೆಗೆ ಅರ್ಹನಲ್ಲ. ಈತನ ಬಯೋಡಾಟಾ ಹಾಗೂ ಕಾರ್ಯವೈಖರಿಯನ್ನು ಗಮನಿಸಿದರೆ ಮೇಲ್ಕಂಡ ವಿಚಾರ ಸ್ಪಷ್ಟವಾಗುತ್ತದೆ.

ಈ ಮಹಾನುಭಾವನನ್ನು ತರಾತುರಿಯಿಂದ ಕೆಲಸಕ್ಕೆ ನಿಯೋಜಿಸಿಕೊಂಡಿದ್ದು ಹಿಂದಿನ ಆಯುಕ್ತ ಭರತ್‌ಲಾಲ್ ಮೀನಾ; 04.08.2009 ರಲ್ಲಿ, ಈ ನೇಮಕ ಪ್ರಕ್ರಿಯೆಯಲ್ಲಿ ಪಕ್ಕಾ ಅನುಮಾನಾಸ್ಪದ ನಡಾವಳಿಗಳು ಜರುಗಿ ಹೋಗಿದೆ. ಯಾಕೆಂದರೆ, ಪಾಲಿಕೆಯಲ್ಲಿ ಯಾವುದೇ ನೇಮಕಾತಿ ಕೈಗೊಳ್ಳಬೇಕೆಂದರೆ, ಅವಶ್ಯಕತೆಗನುಗುಣವಾಗಿ ಹುದ್ದೆ ಸೃಷ್ಟಿಸಬೇಕು. ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಅದಕ್ಕೆ ತಗುಲುವ ವೆಚ್ಚ ನಿಗದಿಪಡಿಸಬೇಕು. ಜೊತೆಗೆ ಹುದ್ದೆಯ ಜವಾಬ್ದಾರಿಗಳನ್ನು ನಿಗದಿಪಡಿಸಿ ಸರ್ಕಾರಕ್ಕೆ ಕಳುಹಿಸಬೇಕು. ಅನುಮತಿ ಬಂದಾದ ಬಳಿಕ ಸದರಿ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ ಅರ್ಹರನ್ನು ಆಯ್ಕೆ ಮಾಡಿಕೊಳ್ಳಬೇಕು... ನಿಯಮವೆಂಬುದು ಇಷ್ಟು ದೀರ್ಘವಾಗಿದೆ.

ಆದರೆ ಆಗಿನ ಆಯುಕ್ತ ಭರತ್‌ಲಾಲ್ ಮೀನಾ ಮೇಲ್ಕಂಡ ಅಷ್ಟೂ ನಿಯಮಾವಳಿಗಳನ್ನು ಕಡೆಗಣಿಸಿ ರಾಜಸಿಂಹನನ್ನು ತಾಂತ್ರಿಕ ಸಲಹೆಗಾರನನ್ನಾಗಿ ನೇಮಿಸಿಕೊಂಡುಬಿಟ್ಟಿದ್ದಾರೆ! ಬಹುಶಃ ಪಾಲಿಕೆಯ ಇತಿಹಾಸದಲ್ಲೇ ಇಂಥದ್ದೊಂದು ಸೋಜಿಗ ನಡೆದಿರಲಿಕ್ಕಿಲ್ಲವೇನೋ.

ಈ ನೇಮಕ ಪ್ರಕ್ರಿಯೆ ಹೇಗೆ ನಡೆಯಿತೆಂಬುದನ್ನು ವಿವರಿಸಿದರೆ ಎಲ್ಲಾ ಸ್ಪಷ್ಟವಾಗುತ್ತದೆ. ಈ ರಾಜಸಿಂಹ ದಿನಾಂಕ 4.8.2009 ರಂದು ಸುದೀರ್ಘವಾದುದೊಂದು ಬಯೋಡಾಟವಿರುವ ಅರ್ಜಿಯನ್ನು ಪಾಲಿಕೆಗೆ ಸಲ್ಲಿಸಿದ್ದಾನೆ. ಇದನ್ನು ಕೈಗೆತ್ತಿಕೊಂಡ ಆಯುಕ್ತರು ಅದೇ ತರಾತುರಿಯಿಂದ 'ಈ ದಿನವೇ' ಅಂತ ದಪ್ಪಕ್ಷರಗಳಲ್ಲಿ ತಲೆಬರಹ ಮುದ್ರಿಸಿದ ಪರಾವನ್ನು ಅಪರ ಆಯುಕ್ತ (ಆಡಳಿತ)ರಿಗೆ ಕಳುಹಿಸಿದ್ದಾರೆ. ಅಪರ ಆಯುಕ್ತರು ಆ ದಿನವೇ ಟಿಪ್ಪಣಿ ತಯಾರಿಸಿ ಆಯುಕ್ತರಿಗೆ ಕಳುಹಿಸಿ ಅನುಮೋದನೆ ಪಡೆದಿದ್ದಾರೆ. ರಾಜಸಿಂಹ ಅಂದಿನಿಂದಲೇ ಕೆಲಸಕ್ಕೆ ನೇಮಕಗೊಂಡಿದ್ದಾನೆ. ಇಷ್ಟೆಲ್ಲಾ ಕೆಲಸಗಳು ನಡೆದದ್ದು ಕೇವಲ ಒಂದೇ ಒಂದು ದಿನದಲ್ಲಿ!


ಮೀನಾ

ಆಯುಕ್ತರಿಗೆ ರಾಜಸಿಂಹನ ಮೇಲೆ ಅದೆಂಥಾ ಪ್ರೀತಿಯಿತ್ತೊ ಗೊತ್ತಿಲ್ಲ, ಹಿಂದೆ ತಾಂತ್ರಿಕ ಸಲಹೆಗಾರರಾಗಿದ್ದ ಜೈಪ್ರಸಾದ್ ಎಂಬವರಿಗೆ ಹದಿನೈದು ಸಾವಿರ ಸಂಬಳ ಕೊಡಲಾಗುತ್ತಿತ್ತೆಂಬ ವಿಚಾರವನ್ನು ಅಪರ ಆಯುಕ್ತರು ಮನವರಿಕೆ ಮಾಡಿಕೊಟ್ಟಿದ್ದರೂ, ಖುದ್ದು ರಾಜಸಿಂಹನೇ ಹದಿನೆಂಟು ಸಾವಿರ ಸಂಬಳ ಬಯಸುತ್ತಿರುವುದಾಗಿ ಅರ್ಜಿಯಲ್ಲಿ ನಮೂದಿಸಿದ್ದರೂ ಭರತ್‌ಲಾಲ್ ಮೀನಾ ಅಖಂಡ ಇಪ್ಪತ್ತು ಸಾವಿರ ಸಂಬಳ ಫಿಕ್ಸ್ ಮಾಡಿ ಆದೇಶ ಹೊರಡಿಸಿದರು!

ಇದೆಲ್ಲ ಹಾಳು ಬಿದ್ದೋಗಲಿ, ರಾಜಸಿಂಹ ಈ ಹುದ್ದೆಗೆ ಅರ್ಹನಾ, ಇದನ್ನು ನಿಭಾಯಿಸಬಲ್ಲ ಅನುಭವವಿದೆಯಾ ಅಂತ ನೋಡಹೋದರೆ ಮತ್ತಷ್ಟು ಅಧ್ವಾನಗಳು ಹೊರಬೀಳುತ್ತವೆ. ಈತನ ಬಯೋಡಾಟಾ ಗಮನಿಸಿದರೆ, ಸಾರ್ವಜನಿಕ ಸೇವೆಯಲ್ಲಿ ಹಾಗೂ ಬೃಹತ್ ಕಾಮಗಾರಿ ವಿಚಾರದಲ್ಲಿ ಈತನಿಗೆ ಅನುಭವವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈತನೇ ತನ್ನ ಬಯೋಡಾಟಾದಲ್ಲಿ ತನಗೆ ಒಳಚರಂಡಿ ನಿರ್ವಹಣೆ ಮತ್ತು ಘನತ್ಯಾಜ್ಯ ವಿಲೇವಾರಿ ವಿಚಾರದಲ್ಲಿ ಪರಿಣತಿಯಿರುವುದಾಗಿ ನಮೂದಿಸಿದ್ದಾನೆ. ಇಂಥಾ ಮನುಷ್ಯನನ್ನು ಅದು ಹೇಗೆ ಪಾಲಿಕೆಯ ಸಲಹೆಗಾರ ಹಾಗೂ ತಾಂತ್ರಿಕ ಸಲಹೆಗಾರನಾಗಿ ನೇಮಕ ಮಾಡಿದರೆಂಬುದು ಪ್ರಮುಖ ಪ್ರಶ್ನೆ.

ಇದೆಲ್ಲವನ್ನು ಗಮನಿಸಿದರೆ ಭರತ್‌ಲಾಲ್ ಮೀನಾ ತನಗೆ ಬೇಕಾದ ವ್ಯಕ್ತಿಯಿಂದ ಅರ್ಜಿ ಪಡೆದು ಕೆಲಸ ಮಂಜೂರು ಮಾಡಿರುವುದು ಸ್ಪಷ್ಟವಾಗುತ್ತದೆ. ಇಷ್ಟೆಲ್ಲಾ ಪಲ್ಟಿ ಹೊಡೆದು ಬಂದ ರಾಜಸಿಂಹ ಅದೆಂಥಾ ಘನಕಾರ್ಯ ಮಾಡಿದ್ದಾನೆ, ಆಯುಕ್ತರು ಯಾವ ರೀತಿ ಕೆಲಸ ತೆಗೆದಿದ್ದಾರೆ ಮುಂತಾದವುಗಳ ಬಗ್ಗೆ ತಲಾಷಿಗಿಳಿದರೆ ಮತ್ತಷ್ಟು ಅಧ್ವಾನಗಳು ಎದುರುಗೊಳ್ಳುತ್ತವೆ.

ಈತನದ್ದು ನಿಜಕ್ಕೂ ಪಾಲಿಕೆಯ ಆರ್ಥಿಕತೆಯ ದೃಷ್ಟಿಯಿಂದ, ಕಾಮಗಾರಿ ಗುಣಮಟ್ಟದ ದೃಷ್ಟಿಯಿಂದ ಅತೀ ಮುಖ್ಯ ಹುದ್ದೆ. ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿಗಳಿಂದ ಹಿಡಿದು ಫ್ಲೈಓವರ್‌ಗಳ ತನಕ ಕಾಮಗಾರಿ ಗುಣಮಟ್ಟ ಮತ್ತಿತರ ತಾಂತ್ರಿಕ ವಿಚಾರಗಳ ಮೇಲೆ ಈತನೇ ಕಣ್ಣಿಡಬೇಕಾಗುತ್ತದೆ. ಆದರೀತ ಅದೆಲ್ಲವನ್ನು ಕಮಿಷನ್ನಿನ ಮಾನದಂಡದ ಮೇಲೇ ನಿಭಾಯಿಸುತ್ತಾ ಬಂದಿದ್ದಾನೆ. ಈತನ ಅವಧಿಯಲ್ಲಿ ಅಂದಾಜು ಪಟ್ಟಿಗಳ ನ್ಯೂನತೆಗಳ ಬಗ್ಗೆಯಾಗಲಿ, ಕಾಮಗಾರಿ ಗುಣಮಟ್ಟ, ಟೆಂಡರ್‌ಗಳ ಪರಿಶೀಲನೆಗಳ ಬಗೆಗಾಗಲಿ ಗಮನಹರಿಸಿದ ಉದಾಹರಣೆಗಳಿಲ್ಲ. ಎಸ್‌ಡಬ್ಲ್ಯೂಡಿ ಕಾಮಗಾರಿಯಲ್ಲಿ ಉಪಯೋಗಿಸಲಾಗಿದ್ದ ಸ್ಟೀಲ್ ಮತ್ತು ಸಿಮೆಂಟ್‌ಗಳ ಬೆಲೆ ಕಡಿಮೆಯಿತ್ತು, ಆದರೆ ಪಾವತಿಸಿದ ಹಣ ಹೆಚ್ಚಿನದಿತ್ತು. ರಾಜಸಿಂಹ ಇದ್ಯಾವುದರ ಬಗೆಗೂ ಗಮನ ಹರಿಸಿಲ್ಲ.

ಇಂಥಾ ರಾಜಸಿಂಹನನ್ನು ಪಾಲಿಕೆಯಲ್ಲಿ ಜನಪ್ರತಿನಿಧಿಗಳು ಅಧಿಕಾರ ಹಿಡಿದ ಬಳಿಕವೂ ಈಗಿನ ಆಯುಕ್ತ (ಆಡಳಿತ) ಸಿದ್ಧಯ್ಯರ ತಾಂತ್ರಿಕ ಸಲಹೆಗಾರನಾಗಿ ಮುಂದುವರೆಸಲಾಗುತ್ತಿದೆ. ಆದರೀತ ಪಾಲಿಕೆಗೆ ಹಣ ಉಳಿಸುವ ಬದಲು ಬೊಕ್ಕಸಕ್ಕೆ ತನ್ನ ಕೊರೆಯುವ ಕೆಲಸವನ್ನು ಅವ್ಯಾಹತವಾಗಿ ನಡೆಸುತ್ತಿದ್ದಾನೆ. ಜನಪ್ರತಿನಿಧಿಗಳು ಬಂದ ಬಳಿಕವಂತು ಈತ ಇಂಜಿನಿಯರ್, ಕಂಟ್ರಾಕ್ಟರ್ ಹಾಗೂ ಕೌನ್ಸಿಲರ್‌ಗಳ ನಡುವಿನ ಮೀಡಿಯೇಟರ್‌ನಂತೆ ಕೆಲಸ ಮಾಡುತ್ತಿದ್ದಾನೆಂಬ ಆರೋಪ ಪಾಲಿಕೆಯೊಳಗಿಂದಲೇ ಕೇಳಿ ಬರುತ್ತಿದೆ.


ಈತ 'ವ್ಯವಹಾರ'ದಲ್ಲಿ ಎಷ್ಟು ಪಳಗಿದ್ದಾನೆಂದರೆ, ಕಾಮಗಾರಿ ಗುಣಮಟ್ಟ ಪರಿಶೀಲನೆ ಮತ್ತಿತರೆ ಕೆಲಸಗಳ ಸಂಬಂಧ ಬಂದವರೆದುರು 'ನೀರಲ್ಲಿ ಹಾಕ್ಬೇಕಾ, ಹಾಲಲ್ಲಿ ಹಾಕ್ಬೇಕಾ' ಅಂತ ಒಗಟಾಗಿ ಕೇಳುತ್ತಾನೆ. ಈ ನೀರು-ಹಾಲಿಗೆ ಇಂತಿಷ್ಟು ಅಂತ ಫಿಕ್ಸ್ ಆಗಿರುವುದು ಬೇರೆ ವಿಚಾರ!

ಇಂಥವನಿಂದ ಪಾಲಿಕೆಗೆ ಏನಾದರೂ ಉಪಯೋಗವಾಗಲು ಸಾಧ್ಯವೆ? ಈತನನ್ನು ಯಾವ ಕಾರಣಕ್ಕಾಗಿ ತಾಂತ್ರಿಕ ಸಲಹೆಗಾರನಾಗಿ ಮುಂದುವರೆಸಲಾಗುತ್ತಿದೆ? ಈತನಿಗೆ ಕೊಡುತ್ತಿರುವ ಸಂಬಳ ಸೌಕರ್ಯಗಳೆಲ್ಲ ಸಾರ್ವಜನಿಕರ ಹಣವನ್ನು ಕೊಳ್ಳೆ ಹೊಡೆದಂತಲ್ಲವೆ? ಇಷ್ಟೆಲ್ಲ ಪ್ರಶ್ನೆಗಳಿಗೆ ಸಂಬಂಧಿಸಿದವರು ಉತ್ತರ ಹೇಳಬೇಕಿದೆ.

ಜೊತೆಗೆ ಈತನನ್ನು ಈ ಹುದ್ದೆಯಿಂದ ಕಿತ್ತೊಗೆದು ಅರ್ಹರನ್ನು ನೇಮಿಸಬೇಕಿದೆ. ಇಷ್ಟಾದರೆ ಒಂದಷ್ಟು ತೆರಿಗೆ ಹಣ ಉಳಿದಂತೆಯೇ! ●


ಕುಮಟಾ:ತೊಗಲೋದ್ಯಮದ ಸುತ್ತ ಪತ್ರಕರ್ತರು-ಪೊಲೀಸರು ಮತ್ತು ಲ್ಯಾಂಡ್ ಲಫಡಾದಾರರು!

ಪತ್ರಕರ್ತನೊಬ್ಬ ಸ್ವಹಿತಾಸಕ್ತಿ-ದ್ವೇಷಾಸೂಯೆಗೆ ಪೆನ್ನು ಝಳಪಿಸಿದರೆ ಏನಾಗಬಹುದು? ಈ ಪತ್ರಕರ್ತನ ಮೇಲೆ ಲ್ಯಾಂಡ್ ಲಫಡಾದಾರರು ಮುಗಿಬಿದ್ದರೆ ಏನಾದೀತು? ಪಿಎಸ್ಸೈಯೊಬ್ಬ ಲ್ಯಾಂಡ್ ಮಾಫಿಯಾದ ಬೆನ್ನಿಗೆ ನಿಂತು ಕುಮ್ಮಕ್ಕು ಕೊಟ್ಟರೆ ಏನು ಆಗುತ್ತದೆ? ಈ ಪತ್ರಕರ್ತ ಮಾಫಿಯಾ, ಪೊಲೀಸ್ ಮಾಫಿಯಾ ಮತ್ತು ಲ್ಯಾಂಡ್ ಮಾಫಿಯಾ ತಂತಮ್ಮ 'ದಂಧೆ' ರಕ್ಷಣೆಗೆ 'ಗಾಂವಠಿ ನಿತ್ಯ ಸುಮಂಗಲಿಯರ" ಬಳಸಿಕೊಂಡರೆ ಏನಾಗುತ್ತದೆ?



ಭಯಾನಕ ಬರ್ನಾಸ್ ಭಾನ್ಗಡಿ ಆಗೋದು ಗ್ಯಾರಂಟಿ ತಾನೆ? ಅದೇ ಆಗುತ್ತಿದೆ ಕುಮಟಾದಲ್ಲೀಗ! ತರಲೆ ಪತ್ರಕರ್ತ ವಿ.ಡಿ. ಭಟ್ ಮತ್ತು ಬಲಿಷ್ಠ ಭೂ ಬನಾವಟದಾರ ಶ್ರೀಕಾಂತ ಪಟಗಾರನ ಕುಟುಂಬದ ನಡುವಿನ ಪರಂಪರಾಗತ ಖಾಸಗಿ ಕುಸ್ತಿಯೀಗ ಸಮಾಜದ ಸ್ವಾಸ್ಥ್ಯವನ್ನೇ ಕೆಡಿಸುವಷ್ಟು ಸಾರ್ವತ್ರೀಕರಣ ಆಗಿಹೋಗಿದೆ. ಯಾವಾಗ ವಿಜಯ ಕರ್ನಾಟಕದ ಸಂಪಾದಕ ವಿಶ್ವೇಶ್ವರ ಭಟ್ ಮತ್ತು ಸ್ಥಳೀಯ "ಧ್ಯೇಯ ನಿಷ್ಠ ಪತ್ರಕರ್ತ" ಎಂಬ ವಿಲಕ್ಷಣ ಹೆಸರಿನ ಟ್ಯಾಬ್ಲಾಯ್ಡ್ ಸಂಪಾದಕನೂ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷನೂ ಆಗಿರುವ ಸಚ್ಚಿದಾನಂದ ಹೆಗಡೆ ಈ ಗಲೀಜು ಗಲಾಟೆಯಲ್ಲಿ ಮೂಗು ತೂರಿಸಿ ಪುರೋಹಿತಶಾಹಿ ಆಟ ಶುರು ಹಚ್ಚಿಕೊಂಡರೋ ಆಗಿದಕ್ಕೆ ಬ್ರಾಹ್ಮಣ-ಅಬ್ರಾಹ್ಮಣ ಸಂಘರ್ಷದ ಖದರೂ ಬಂದುಬಿಟ್ಟಿದೆ.

ದೊಡ್ಡ ದುರಂತವೆಂದರೆ ಸದ್ರಿ ಪತ್ರಕರ್ತ-ಪೊಲೀಸ್-ಭೂ ಬಕಾಸುರ ಮಾಫಿಯಾ ಬಣಗಳ ಬಡಿದಾಟದಲ್ಲಿ ಮಹಿಳೆಯೊಬ್ಬಳ ಮಾನ ಹರಾಜಾಗುತ್ತಿದೆ. ಅವಳೆಂಥವಳೇ ಆಗಿರಲಿ; ಈ ಸೋಗಲಾಡಿ ಸುಸಂಸ್ಕೃತರು ಹೆಣ್ಣೊಬ್ಬಳ ಶೀಲವನ್ನೇ ಪಣವಾಗಿಟ್ಟು ಪರಾಕ್ರಮ ಪ್ರದರ್ಶಿಸುತ್ತಿರುವುದು ಅಕ್ಷಮ್ಯವೇ ಸರಿ. ಆಕೆ ದೊಡ್ಡವರ-ದುಡ್ಡಿರುವವರ ಮಾನ ಉಳಿಸಲು ಹೋಗಿ ತಾನು "ವೇಶ್ಯೆ" ಎಂಬ ಬಿರುದು ಪಡೆದು ಅವಮಾನಿತಳಾಗಬೇಕಾಗಿ ಬಂದಿರುವುದು ವಿಪರ್ಯಾಸ!!



ವಿ.ಡಿ.ಭಟ್ಟನ ವಿರುದ್ಧ ಮನವಿ

ಹಣ್ಣೇಮಠದ ಫ್ಲ್ಯಾಶ್‌ಬ್ಯಾಕ್

ಸರಿ ಸುಮಾರು 15 ವರ್ಷದ ಹಿಂದಿನ ಕತೆಯಿದು. ಆಗ ವಿ.ಡಿ. ಭಟ್ಟನಿನ್ನೂ ಪತ್ರಕರ್ತನ ವೇಷ ಹಾಕಿರಲಿಲ್ಲ; ಆತನ ಕಡುವೈರಿ ಶ್ರೀಕಾಂತ ಪಟಗಾರನೂ ಗೋಲ್‌ಮಾಲ್ ಭೂವ್ಯವಹಾರಸ್ಥನಾಗಿರಲಿಲ್ಲ. ಅಂಥದೊಂದು ಸಮಯದಲ್ಲಿ ಈ ಇಬ್ಬರ ಮನೆಯವರ ಮಧ್ಯೆ ದಾರಿಗಾಗಿ ಜಗಳವೊಂದು ಹುಟ್ಟಿಕೊಂಡಿತ್ತು. ಭಟ್ಟನ ಮನೆಯಿಂದಾಚೆಯ ಒಂದೆರಡು ಹಿತ್ತಿಲು ದಾಟಿದರೆ ಪಟಗಾರನ ಮನೆ ಸಿಗುತ್ತದೆ. ಭಟ್ಟನ ಮನೆಯವರು ಈ ಪಟಗಾರನ ಹಿತ್ತಲಂಚಿನ ದಾರಿಯಲ್ಲೇ ಓಡಾಡಬೇಕು. ಆ ರಸ್ತೆಗೆ ತಮ್ಮ ಸ್ವಲ್ಪ ಜಾಗ ಕೊಡುವುದಾಗಿ ಪಟಗಾರರು ಹೇಳಿದ್ದರು. ಪಂಚಾಯ್ತಿಯವರು ರಸ್ತೆ ಮಾಡುವ ತಯಾರಿಯೂ ನಡೆಸಿದ್ದರು.

ಅದ್ಯಾಕೋ ಇದ್ದಕ್ಕಿದ್ದಂತೆ ಹೊಲನಗದ್ದೆ ಗ್ರಾಪಂ ಏರಿಯಾದ ಈ ಬರಸಗುಣಿ ರಸ್ತೆ ನಿರ್ಮಾಣ ಮಾರಾಮಾರಿ ಪ್ರಕರಣವಾಗಿ ಹೋಯ್ತು. ಹಣ್ಣೆಮಠದಲ್ಲಿ ದೊಡ್ಡದೊಂದು ಕಾಳಗವೂ ಆಗಿಹೋಯ್ತು. ಜಾಗ ಕೊಡಲು ರೆಡಿಯಾಗಿದ್ದ ಪಟಗಾರರು ಭಟ್ಟರ ಪುರೋಹಿತಶಾಹಿ ಪೊಗರಿಗೆ ಕೆರಳಿ ಉಲ್ಟಾ ಹೊಡೆದುಬಿಟ್ಟರು. ಆದರೆ ಈ ರಸ್ತೆ ಮಾಡೇತೀರಬೇಕೆಂಬ ಹಠದಲ್ಲಿದ್ದ ಭಟ್ಟರ ಕಡೆಯವರು ಪಟಗಾರರ ಹಿತ್ತಲಲ್ಲೇ ದಾರಿಬೇಕೆಂದು ಪಂಚಾಯ್ತಿಗೆ ಒತ್ತಡ ಹೇರತೊಡಗಿದ್ದರು. ಆರೇಳು ಅಣ್ಣ-ತಮ್ಮಂದಿರ ಈ ಪಟಗಾರ ಫ್ಯಾಮಿಲಿ ಹೊಲನಗದ್ದೆಯಲ್ಲಿ ಮಸಲ್ ಪವರ್‌ಗೆ ಫೇಮಸ್ ಆಗಿತ್ತು. ಹೀಗಾಗಿ ಭಟ್ಟರು ಅದೆಷ್ಟೇ ಕುತಂತ್ರ ನಡೆಸಿದರೂ ಅಷ್ಟು ಸುಲಭಕ್ಕೆ ಪಟಗಾರರ ಜಾಗ ಕಬಳಿಸಿ ರಸ್ತೆ ಮಾಡಿಸುವುದು ಸಾಧ್ಯವಾಗಲಿಲ್ಲ.

ಯಾವಾಗ ಬೀರ ಪಟಗಾರನೆಂಬ ಶ್ರೀಕಾಂತ ಪಟಗಾರನ ಕುಟುಂಬದ ವಿರೋಧಿ ಗ್ರಾಪಂ ಅಧ್ಯಕ್ಷನಾಗಿ ಅವತರಿಸಿದನೋ ಆಗ ಭಟ್ಟರ ಪಡೆಯ ಕಿತಾಪತಿ ಬಿರುಸಾಯ್ತು. ಒಂದು ದಿನ ಗ್ರಾಪಂ ಅಧ್ಯಕ್ಷ ಬೀರ ಪಟಗಾರ, ಗ್ರಾಪಂ ಸೆಕ್ರೆಟರಿ, ಜವಾನ, ಉಪಾಧ್ಯಕ್ಷ, ಆ ಭಾಗದ ಸದಸ್ಯರೆಲ್ಲ ಸೇರಿ ಆ ರಸ್ತೆ ತಪಾಸಣೆಗೆಂದು ಹೋಗುತ್ತಾರೆ. ಆಗ ಪಟಗಾರ ಕಡೆಯವರಿಗೂ ಅಧ್ಯಕ್ಷ-ಭಟ್ಟರ ಗ್ಯಾಂಗಿಗೂ ಜಗಳ-ಮಾರಾಮಾರಿಯಾಗುತ್ತದೆ. ಅದು ಪೊಲೀಸ್ ಠಾಣೆ, ಕೋರ್ಟ್ ಎಂದೆಲ್ಲ ಬೆಳೆದು ಶ್ರೀಕಾಂತ ಪಟಗಾರ ಮತ್ತವನ ಸೋದರಿಗೆ ಶಿಕ್ಷೆ-ದಂಡವನ್ನು ನ್ಯಾಯಾಲಯ ವಿಧಿಸುತ್ತದೆ. ಅಧ್ಯಕ್ಷ ಬೀರ ಪಟಗಾರ ದೂರುಕಾರನಾದರೂ ಹಿನ್ನಲೆಯಲ್ಲಿ ಭಟ್ಟರಿದ್ದರು.

ಪತ್ರಕರ್ತ V/s ರಿಯಲ್ ಎಸ್ಟೇಟ್ ಕಿಂಗ್

ಕೊನೆಗೂ ಬರಸಗುಣಿ ರಸ್ತೆ ಆಗುವುದೇ ಇಲ್ಲ! ಭಟ್ಟರ-ಪಟಗಾರರ ಮನೆಯವರ ಮಧ್ಯೆ ವೈಷಮ್ಯದ ಬೆಂಕಿಯೂ ಈ ಹದಿನೈದು ವರ್ಷದಲ್ಲಿ ಆರಿಲ್ಲ. ಈಗ ವಿ.ಡಿ. ಭಟ್ ಮತ್ತು ಶ್ರೀಕಾಂತ್ ಪಟಗಾರ ತಂತಮ್ಮ ಕುಟುಂಬದ ಹಿರೇಮಣಿಗಳಾಗಿ ಅವತರಿಸಿದ್ದಾರೆ. ಭಟ್ಟ ಎಂ.ಎ. ಮುಗಿಸಿ ಸ್ಥಳೀಯ ಬಾಳಿಗಾರ ಕಾಲೇಜಿನಲ್ಲಿ ಇಕಾನಾಮಿಕ್ಸ್ ವಿಷಯ ಬೋಧಿಸುವ ಅರೆಕಾಲಿಕ ಉಪನ್ಯಾಸಕ, ಬ್ರಾಹ್ಮಣಿಕೆ ಧ್ಯೇಯದ "ಪತ್ರಕರ್ತ" ಎಂಬ ಪತ್ರಿಕೆಯ ವರದಿಗಾರನಾಗಿದ್ದಾನೆ. ಇತ್ತ ಎಲ್ಲೆಲ್ಲೋ ಭಜನೆ ಹಾಡಿಕೊಂಡಿದ್ದ ಶ್ರೀಕಾಂತ ಪಟಗಾರ ಕಣ್ಣು ಕುಕ್ಕುವಂಥ ಲ್ಯಾಂಡ್ ಲಿಂಕ್ ವ್ಯವಹಾರದ ಧಣಿಯಾಗಿದ್ದಾನೆ.

ಭೂವ್ಯವಹಾರ ಅಂದರೆ ಕೇಳಬೇಕೆ? ಅವ್ಯವಹಾರ ಅಕ್ರಮ-ಗೋಲ್‌ಮಾಲ್ ಇದ್ದೇ ಇರುತ್ತವೆ ಅಲ್ಲವೆ? ಪಟಗಾರನ ದಂಧೆಯಲ್ಲೂ ದಗಲುಬಾಜಿ ಇತ್ತು; ಆತನ ದರ್ಬಾರು ದೌಲತ್ತು-ಧಗಾ ಅನುಮಾನ ಪಡುವಂತೆಯೂ ಇತ್ತು. ಅರಣ್ಯ ಭೂಮಿ ಅತಿಕ್ರಮಿಸುವುದು, ಮಾರುವುದು, ಲಕ್ಷಾಂತರ ರೂಪಾಯಿಗಳ ಕಟ್ಟಡಗಳನ್ನು ಅತಿಕ್ರಮಣ ಜಾಗದಲ್ಲಿ ಯಾವ ಕಾನೂನಿಗೂ ಕೇರ್ ಮಾಡದೆ ಕಟ್ಟುವುದು, ನಕಲಿ ಪಟ್ಟಾ ತಯಾರಿಸುವುದು, ತಹಶೀಲ್ದಾರ್ ಅಶೋಕ ನಾಯ್ಕ್, ಸಬ್ ರಿಜಿಸ್ಟ್ರಾರ್‌ಗಳನ್ನು ನೋಟರಿಯೊಬ್ಬರನ್ನು ಅಕ್ರಮ ದಂಧೆಗೆ ಉಪಯೋಗಿಸಿಕೊಳ್ಳುವುದೆಲ್ಲ ಶ್ರೀಕಾಂತ ಪಟಗಾರನಿಗೆ ಕರತಲಾಮಲಕವಾಗಿ ಹೋಯ್ತು! ಪ್ರಾಚ್ಯವಸ್ತು ಇಲಾಖೆಗೆ ಸೇರಿದ ಅಘನಾಶಿನಿ ಕೋಟೆ ಗುಡ್ಡದ 60-80 ಎಕರೆ ಜಾಗ ಈತನ ಬ್ರೋಕರಿಕೆಯ ಜಾದೂಗಾರಿಕೆಯಿಂದ ಮಾರಲ್ಪಟ್ಟಿದೆ ಎಂಬ ಗುಲ್ಲೂ ಹಬ್ಬಿದೆ.

ಪುರಾತನ ಶತ್ರು ಪಟಗಾರನ ಮೇಲೊಂದು ಕಣ್ಣು ಇಟ್ಟುಕೊಂಡೇ ಇದ್ದ ಪತ್ರಕರ್ತ ಪರಾಕ್ರಮಿ ವಿ.ಡಿ. ಭಟ್ಟ! ಪಟಗಾರನ ಲ್ಯಾಂಡ್ ಲಫಡಾಗಳು ಭಟ್ಟನ ಲೋಕಲ್ ಪತ್ರಿಕೆ 'ಧ್ಯೇಯ ನಿಷ್ಠದ ವರದಿಗೆ ಒಂದಿಷ್ಟು ಸರಕಾಗಿಹೋಯ್ತು. ಸರಣಿ ವರದಿಗಳು ಧ್ಯೇಯನಿಷ್ಠದಲ್ಲಿ ಬಂದರೂ ಹಣ ಬಂದ ಪಟಗಾರ ತಲೆಕೆಡಿಸಿ ಕೊಂಡಿರಲಿಲ್ಲ. ಅರಣ್ಯ-ಕಂದಾಯ-ಪೊಲೀಸ್ ಅಧಿಕಾರಿಗಳನ್ನೆಲ್ಲ ದುಡ್ಡು ತೋರಿಯೇ ಪಳಗಿಸುತ್ತಿದ್ದ ಪಟಗಾರನಿಗೆ ಚೆಡ್ಡಿ ಪತ್ರಿಕೆ-"ಧ್ಯೇಯ ನಿಷ್ಠ"ದ ವರದಿಯಿಂದ ಅಂಥ ತೊಂದರೆಯೂ ಆಗಲಿಲ್ಲ. ಶಿರಸಿ ಗಡಿಯಾಚೆ ಪರಿಣಾಮ ಬೀರದ ಈ ಪತ್ರಿಕೆಯಿಂದ ಪಟಗಾರನ ಕುಮಟೆಯ ವ್ಯವಹಾರಕ್ಕೆ ತೊಂದರೆಯೇನೂ ಆಗಲಿಲ್ಲ.

ಆದರೆ ಪಟಗಾರ ಕೆರಳಿದ್ದು ಈಗೆರಡು ವರ್ಷದ ಈಚೆಗೆ. ವಿ.ಡಿ. ಭಟ್ಟ ಈ ಅವಧಿಯಲ್ಲಿ 'ವಿಜಯ ಕರ್ನಾಟಕ'ದ ಕುಮಟೆಯ ಬಿಡಿವರದಿಗಾರನಾಗಿ ಪಟಗಾರನ ಪವಾಡಗಳನ್ನೆಲ್ಲ ಜಾಲಾಡತೊಡಗಿದ್ದ. ಪಟಗಾರ ತುಂಬ ಹಿಂದೆಯೇ ಮಾಸೂರು ಕ್ರಾಸ್ ಬಳಿಯ ಜನತಾ ಕಾಲೋನಿಯ ಒಂದು 30x40 ಸೈಟ್ ಕಬಳಿಸಿಕೊಂಡಿದ್ದ. ಈ ಸೈಟ್ ಕಾರವಾರ ಮೂಲದ ಹುಲುಸ್ವಾರ್ ಎಂಬಾತನದೆಂದು ಹಳಬರು ಹೇಳುತ್ತಾರೆ. ಅದನ್ನು ದಾದಾಗಿರಿಯಿಂದ ದಕ್ಕಿಸಿಕೊಂಡನೋ ಅಥವಾ ಒಂದಿಷ್ಟು ಹಣ ಆ ಬಡಪಾಯಿಗೆ ಕೊಟ್ಟು ಓಡಿಸಿದನೋ ಗೊತ್ತಿಲ್ಲ. ಆದರೆ ಸರ್ವೆ ನಂಬರ್ 356ನಲ್ಲಿರುವ ಸದ್ರಿ ಸೈಟ್ ತನ್ನದೇ ಎಂದು ಪಟಗಾರ ಪಟ್ಟಾದ ಝೆರಾಕ್ಸ್ ಪ್ರತಿ ತೋರಿಸುತ್ತಾನೆ. ಇದು ನಕಲಿ ಪಟ್ಟಾ ಎಂಬುದು ಭಟ್ಟನ ವಾದ. ಇದು ನಕಲಿಯೋ ಅಸಲಿಯೋ ಒಂದಂತೂ ಖರೆ. ಜಮೀನುದಾರನೂ ಸಾಕಷ್ಟು ಸ್ಥಿತಿವಂತ ಕುಟುಂಬದವನೂ ಆಗಿರುವ ಶ್ರೀಕಾಂತ ಪಟಗಾರನಿಗೆ ನಿರ್ಗತಿಕರಿಗೆ ಸರ್ಕಾರ ಕೊಡುವ ಸೈಟ್ ಸಿಕ್ಕಿದ್ದಾದರೂ ಹೇಗೆ? ಕಂದಾಯ ಇಲಾಖೆಯ ದಾಖಲೆಯ ಕಾಲಂ ನಂಬರ್ 11 ರಲ್ಲೂ ಪಟಗಾರನ ಹೆಸರಿಲ್ಲ! ಎಲ್‌ಬಿಪಿಎಸ್‌ಆರ್ ದಾಖಲೆಯೂ ಇಲ್ಲ.



ಅಪಹೃತ ಭಟ್ಟನನ್ನು ಮೂರೂರಿನ ಮನೆಯಲ್ಲಿ ಕೂರಿಸಿರುವುದು...


ಇಷ್ಟಕ್ಕೆ ಪಟಗಾರನ 'ಮಾಸೂರ್ ಕ್ರಾಸ್ ಮಹಿಮೆ' ಮುಗಿಯುವುದಿಲ್ಲ. ಆ ಅಕ್ರಮ ಸೈಟಿನ ಸುತ್ತಲಿನ ಸುಮಾರು ಎಂಟು ಗುಂಟೆಯಷ್ಟು ಅರಣ್ಯ ಭೂಮಿ ಈತ ಅತಿಕ್ರಮಿಸಿದ್ದಾನೆ. ಅಲ್ಲೊಂದು ಭರ್ಜರಿ 15-16 ಲಕ್ಷದ ಮನೆಯನ್ನೂ ಕಟ್ಟಿಕೊಂಡಿದ್ದಾನೆ. ಹಾಗೆಯೇ ಗಾಂಧಿವನ ಎಂಬಲ್ಲಿ 2 ಗುಂಟೆಯಷ್ಟು ಅರಣ್ಯ ಭೂಮಿ ನುಂಗಿ ಅಂಗಡಿ ಕಟ್ಟಿದ್ದಾನೆ (ಸ.ನಂ: 385). ಇದೆಲ್ಲವನ್ನೂ ಭಟ್ಟ 'ವಿಕ'ದಲ್ಲಿ ವರದಿ ಮಾಡಿದ್ದ. ಇದರಲ್ಲಿ ಒಂದಿಷ್ಟು ಅಧಿಕಾರಿಗಳೂ ಶಾಮೀಲಾಗಿದ್ದಾರೆಂದು ಬರೆದಿದ್ದ. ಇದರಿಂದ ಪಟಗಾರನಿಗೆ ಕಿರಿಕಿರಿ ಆಯ್ತು. ಆಗಾತ ಈ ಭಟ್ಟನಿಗೆ ಬುದ್ಧಿ ಕಲಿಸದಿದ್ದರೆ ತಾನು ಬದುಕುವುದೇ ಕಷ್ಟವೆಂಬ ತೀರ್ಮಾನಕ್ಕೆ ಬಂದುಬಿಟ್ಟ!



ಪತ್ರಕರ್ತರ ಪ್ರತಿಭಟನೆ...

ಪೊಲೀಸ್ ಪ್ರವೇಶ

ಸುಮಾರು ಎರಡು ತಿಂಗಳ ಹಿಂದೆ ಶ್ರೀಕಾಂತ ಪಟಗಾರ ಭಟ್ಟನ ಬಾಲ ಕಟ್ ಮಾಡಲು ಒಂದು ಸ್ಕೆಚ್ ಹಾಕಿಕೊಂಡು ಕಾರ್ಯಾಚರಣೆಗೆ ಇಳಿದಿದ್ದ. ಆ ಹೊತ್ತಲ್ಲಿ ಈತನ ಲ್ಯಾಂಡ್ ಮಾಫಿಯಾ ಬಳಗ ಪಿಎಸ್‌ಐ ಮಂಜುನಾಥ ನಾಯಕ್-ಎಂಬುವನನ್ನು ಬುಕ್ ಮಾಡಿಕೊಂಡಿತ್ತು. ಮಾಸೂರು ಕ್ರಾಸ್‌ನ ಜನತಾ ಕಾಲೋನಿಯ 50-60 ಸೈಟ್‌ದಾರರ ತಲೆಯಲ್ಲೊಂದು ಹುಳವನ್ನು ಪಟಗಾರ ಬಿಟ್ಟ. "ವಿ.ಡಿ. ಭಟ್ಟ ನಿಮ್ಮ ಅತಿಕ್ರಮಣ ತೆರವುಗೊಳಿಸಿ ಬೀದಿ ಪಾಲಾಗಿಸಲು ಪ್ರಯತ್ನಿಸುತ್ತಿದ್ದಾನೆ... ಅರಣ್ಯ ಅಧಿಕಾರಿಗಳ ಮೇಲೆ ವರದಿಗಾರನೆಂಬ ನೆಲೆಯಲ್ಲಿ ಪ್ರೆಷರ್ ಹಾಕುತ್ತಿದ್ದಾನೆ.... ಬೆಂಗಳೂರಲ್ಲೂ ಭಟ್ಟನಿಗೆ ಕೈಯಿದೆ.... ಈತನ ವಿರುದ್ಧ ನಾವೇ ಒಂದು ಪ್ರತಿಭಟನೆ ಮಾಡೋಣ...." ಎಂದು ಹುರಿದುಂಬಿಸಿಬಿಟ್ಟ.



ಪಿಎಸ್‌ಐ ಮಂಜುನಾಥ್‌ನಾಯಕ್

ತಹಶೀಲ್ದಾರ್ ಕಚೇರಿ ಎದುರು ನೂರಾರು ಅತಿಕ್ರಮಣದಾರರು, ಜನತಾ ಪ್ಲಾಟ್ ಮನೆಯವರನ್ನೆಲ್ಲ ಸೇರಿಸಿ ಭಟ್ಟನಿಗೆ ಧಿಕ್ಕಾರ ಕೂಗಿಸಿದ ಲ್ಯಾಂಡ್ ದಂಧೆ ದೊರೆ ಪಟಗಾರ್. ಅಷ್ಟೇ ಅಲ್ಲ "ವಿ.ಡಿ. ಭಟ್ಟ ನಮಗೆಲ್ಲ ಕಿರಿಕಿರಿ ಮಾಡುತ್ತಿದ್ದಾನೆ... ತಲಾ ಹತ್ತು ಸಾವಿರ ರೂಪಾಯಿ ಕೊಡಿ..., ಇಲ್ಲದಿದ್ರೆ ಅತಿಕ್ರಮ ಖುಲ್ಲಾ ಮಾಡಿಸ್ತೇನೆ...." ಎಂದು ಧಮಕಿ ಕೊಡುತ್ತಿದ್ದಾನೆ ... ಪೊಲೀಸ್ ಕಂಪ್ಲೇಂಟೂ ಕೊಡಿಸಿದ. ಈ ದೂ... ಹಿಡಿದುಕೊಂಡು ಪಿಎಸ್‌ಐ ಮಂಜುನಾಥ ನಾಯ... ಭಟ್ಟನಿಗೆ ಬೈದು ಬೆದರಿಸಿದ್ದಾನೆ. ನಿನ್ನ ಅರೆಸ್ಟ್ ಮಾಡುತ್ತ... ಎಂದಿದ್ದಾನೆ. ಇದು ಪಟಗಾರನ ವಿರುದ್ಧ ಮತ್ತೆ-ವ... ಭಟ್ಟ ವರದಿ ಮಾಡದಂತೆ ಪಳಗಿಸುವ ತಂತ್ರವಾಗಿತ್ತ... ಹಾಗೆ ಮಾಡಲೆಂದೇ ಪಟಗಾರ್ ಐವತ್ತು ಸಾವಿರ ಮೊ... ಎಸ್‌ಐಗೆ ಕಾಣಿಕೆಯೊಂದನ್ನು ಕೊಟ್ಟಿದ್ದಾನೆಂಬುದು ಇವತ್ತ... ಕುಮಟೆಯಲ್ಲಿ ಹಾರಾಡುತ್ತಿರುವ ಸುದ್ದಿ. ಲ್ಯಾಂ... ಮಾಫಿಯಾ-ಪೊಲೀಸ್ ಮಾಫಿಯಾ ಕೈ-ಕೈ ಮಿಲಾಯಿ... ದ್ದಂತೂ ಖರೆ.

ಭಟ್ಟನ ಕೆಟ್ಟ ವರದಿ

ಈ ಲ್ಯಾಂಡ್ ಮಾಫಿಯಾ ಪ್ರತಿಭಟನೆ ಮತ್ತು ಪೊಲಿ... ಬೆದರಿಕೆಯಿಂದ ಭಟ್ಟನೂ ಕೆರಳಿಬಿಟ್ಟ. ವಿಕದ ವಿಶ್ವೇ... ಭಟ್, ಧ್ಯೇಯನಿಷ್ಠದ ಸಚ್ಚಿದಾನಂದ ಹೆಗಡೆಗಳ... ಬೆನ್ನಿಗಿಟ್ಟುಕೊಂಡು ಪಟಗಾರ್-ಪಿಎಸ್‌ಐ ನಾಯಕ್ ವಿರು... ಪುಂಖಾನುಪುಂಖವಾಗಿ ಏಕಮುಖ ವರದಿಗಳನ್ನು ಎರ... ಪತ್ರಿಕೆಗಳಲ್ಲಿ ಹೊಸೆಯತೊಡಗಿದ. ವಿಕದಲ್ಲಂತೂ ಭಟ್ಟನ... ಬಚಾಯಿಸುವ ಎಸ್‌ಐ-ಪಟಗಾರನನ್ನು ಬಲಿ ಪ... ವರದಿಗಳು ಬರತೊಡಗಿದವು. ಬ್ರಾಹ್ಮಣ ಲಾಬಿ ಜಾ... ವಾಯಿತು. ವಿಕದ ಭಟ್ಟರ ಬೇರುಗಳು ಕುಮಟೆಯಲ್ಲಿರ... ದರಿಂದ (ಈತ ಕುಮಟಾ ಮೂಲದವರು) ಹೈಗರ ಗ್ಯಾ... ಹಾರಾಟವೂ ಜೋರಾಯ್ತು.

ಪ್ರಚಂಡ ವಿಭಟ್ಟರು, ಗೂಟದ ಕಾರಿನ ಸಚ್ಚಿಯ... ದೊಡ್ಡ-ದೊಡ್ಡ ಪತ್ರಕರ್ತ ಪರಾಕ್ರಮಿಗಳ ಬಂ-ಬೆಂ... ಇರುವುದರಿಂದ ತನಗೆ ಈ ಎಸ್‌ಐ-ಲ್ಯಾಂಡ್ ದಂಧೆ... ಪಟಗಾರ ಯಾವ ಲೆಕ್ಕವೂ ಅಲ್ಲವೆಂಬ ಅಮಲು ಭ... ತಲೆಗೇರಿಬಿಟ್ಟಿತು. ಪಟಗಾರ-ಪಿಎಸ್‌ಐ ಮಾನ ಹರಾ... ಸೇಡು ತೀರಿಸಿಕೊಳ್ಳಲು ಸಿದ್ಧನಾದ. ಎರಡು ವಾ... ಹಿಂದೆ "ಧ್ಯೇಯನಿಷ್ಠ"ದಲ್ಲಿ ಪಿಎಸ್‌ಐ ಭ್ರಷ್ಟ-ದುಷ್ಟ, ... ಕಸುಬು ನಡೆಸುವ ಹೆಂಗಸರ ಸಂರಕ್ಷಕನೆಂದು ಬ... ಅಷ್ಟೇ ಅಲ್ಲ, ಪಿಎಸ್‌ಐನ ಹಣಿಯುವ ಭರದಲ್ಲಿ ... ಮೂರ್ಖ ಭಟ್ಟ "ಮೂರೂರು" ಎಂಬಲ್ಲಿ ಇಬ... ಘರ್‌ವಾಲಿಗಳು ದೊಡ್ಡಮಟ್ಟದ ದಂಧೆ ನಡೆಸುತ್ತಾರೆ... ಅವರ ಮನೆಗಳ ಫೋಟೋ ಅಚ್ಚಿಸಿದ್ದ. ಆ ಹೆಂ... ಹೆಸರನ್ನೂ ಬರೆದಿದ್ದ. ಈ ಜಾಳು-ಜಾಳು ವರದಿಗೆ ಯ... ಹಾಳು ಆಧಾರವೂ ಇರಲಿಲ್ಲ.

ಕಿಡ್‌ನ್ಯಾಪಾ? ರೇಪಾ?

ತಲೆತಿರುಕ ಪಿಎಸ್‌ಐ ಮಂಜುನಾಥ ನಾಯಕ... ಇಷ್ಟೇ ಸಾಕಾಯ್ತು ಪಿತ್ಥ ಕೆರಳಲು! ಒಂದು ಕಾಲ... ಗೂಂಡಾಗರ್ದಿಯ ಪುಂಡನಾಗಿದ್ದ ಶ್ರೀಕಾಂತ ಪಟಗಾ... ಕರೆದು ಆತನಿಗೆ ಮತ್ತೆ ದಾದಾಗಿರಿಯ ದೀಕ್ಷೆಯನ್ನು ಎ... ಸಾಹೇಬರು ನೀಡಿಬಿಟ್ಟರು. ಹಲವು ಕ್ರಿಮಿನಲ್ ಕೇ... ಕಿಂಗ್ ಆಗಿದ್ದ ಪಟಗಾರ ಈಗ ಬದಲಾಗಿ ತನ್ನ ಲ್ಯಾ... ಬಿಸಿನೆಸ್‌ನಲ್ಲಿ ಬಿಜಿಯಾಗಿದ್ದ. ಇಂಥವನೊಳಗಿನ ಗೂಂಡಾ... ಪಿಎಸ್‌ಐ ನಾಯಕ್ ಜಾಗೃತಗೊಳಿಸಿ ಭಟ್ಟನ ಕಿಡ್‌ನ... ಮಾಡಿ ಬಡಿಯಲು ಪ್ರೇರೇಪಿಸಿಬಿಟ್ಟ. ಭಟ್ಟ ದಿ...

ಯ ಹೊತ್ತಲ್ಲಿ ಕುಮಟೆಯಿಂದ ಹೆಂಡತಿ ಇರುವ ಹೊನ್ನಾವರ ತಾಲ್ಲೂಕಿನ ಂಗಡಿಗೆ ಹೋಗುತ್ತಾನೆ. ಇದು ಕಾಡಿನ ದುರ್ಗಮ ದಾರಿ.

ಟ್ಟ ಸಂಜೆ ಹೊತ್ತಲ್ಲಿ ಅರೆಅಂಗಡಿಗೆ ಹೋಗುವಾಗ ಅಪಹರಿಸಿ ಆತ ಯಿಂದು ಜರೆದು ಬರೆದಿದ್ದ ಹೆಂಗಸಿನ ಮೂರೂರು ಮನೆಗೊಯ್ದು ೋಳಿಸಿ-ಹೊಡೆದು-ಬಡಿದು ಮೆರವಣಿಗೆ ಮಾಡಿಸಿ ಆ ಹೆಂಗಸಿನಿಂದ ಕೇಸ್ ಹಾಕಿಸುವ ಸ್ಕೆಚ್ ಅನ್ನು ಪಿಎಸ್‌ಐ ಮಂಜುನಾಥ ನಾಯಕ್ ದ್ದ! ಕಳೆದ 7.9.2010 ರಂದು ಭಟ್ಟನನ್ನು ಸಿಲ್ವರ್ ಕಲರ್ ಕಾರಲ್ಲಿ ಲಿಸಿದ ಲ್ಯಾಂಡ್ ಮಾಫಿಯಾ ಗ್ಯಾಂಗ್ ಕೆಕ್ಕಾರು ಎಂಬಲ್ಲಿ ಆತನ ಯನ್ನು ಅಡ್ಡಹಾಕಿದ್ದಾರೆ. ಅದು ಮುಸ್ಸಂಜೆಯ 6.30 ರ ಸಮಯ. ನ್ನು ಅನಾಮತ್ತು ಎತ್ತಿ ಓಮ್ನಿಗೆ ಎತ್ತಾಕಿಕೊಂಡ ಮೂರ್ನಾಲ್ಕು ಟೋಣಪರು ಕಣ್ಣಿಗೆ ಬಟ್ಟೆ ಬಿಗಿದಿದ್ದಾರೆ. ಕೈ-ಕಾಲು ಕಟ್ಟಿ ಸೀಟನಡಿ ಹಾಕಿದ್ದಾರೆ. ದಾಗಿ ಟೇಪ್ ರೆಕಾರ್ಡರ್ ಹಚ್ಚಿದ್ದಾರೆ.

ಲ್ಲೆಲ್ಲೋ ಸುತ್ತಾಡಿಸಿ 8.30 ರ ಹೊತ್ತಿಗೆ ಭಟ್ಟನಿಂದ 'ಫರ್‌ವಾಲಿ' ಎಂದು ಮ ಪಡೆದಿದ್ದ ಮೂರೂರಿನ ಹೆಂಗಸೊಬ್ಬಳ ಮನೆಗೆ ತಂದಿದ್ದಾರೆ. ಅಲ್ಲಿ -ಮುಗ್ಗಾ ಥಳಿಸಿದ್ದಾರೆ. ತಲೆ ಬೋಳಿಸಲು ಪ್ರಯತ್ನಿಸಿದ್ದಾರೆ. ಅಷ್ಟರಲ್ಲಾಗಲೇ ರ್ತ ಭಟ್ಟರ ಅಪಹರಣ" ಎಂಬ ಸುದ್ದಿ ಟಿವಿಗಳಲ್ಲಿ ಫ್ಲ್ಯಾಷ್ ಆಗತೊಡಗಿತ್ತು. ತಮ್ಮ ಹೊನ್ನಾವರ ಠಾಣೆಯಲ್ಲಿ ಕಿಡ್‌ನ್ಯಾಪ್ ಕೇಸು ದಾಖಲಿಸಿದ್ದ. ದ ಗಡಿಬಿಡಿಗೆ ಬಿದ್ದ ಪಿಎಸ್‌ಐ ಮಂಜುನಾಥ ನಾಯಕ್ ತಲೆಬೋಳಿಸುವ 'ಆಕೆ'ಯಿಂದ "ಇಲ್ಲೊಬ್ಬ ರೇಪಿಸ್ಟ್ ಬಂದಿದ್ದಾನೆ... ಬೇಗ ಬನ್ನಿ ಸಾರ್..." ತನ್ನ ಮೊಬೈಲಿಗೆ ಫೋನು ಬರುವಂತೆ ಮಾಡಿದ್ದಾರೆ. ಒಂದಿಬ್ಬರು ವಿರೋಧಿ ಪತ್ರಕರ್ತರನ್ನು ಕಟ್ಟಿಕೊಂಡು ಎಸ್‌ಐ ಸಾಹೇಬರ ಸವಾರಿ ೂರಿನ "ಆ ಮನೆ"ಗೆ ಹೋಗಿದೆ.

ಲ್ಲಿ ಎರಡೆರಡು ನೈಟಿ ಹಾಕಿಕೊಂಡಿದ್ದ "ಆಕೆ" ಭಟ್ಟನ ಪಕ್ಕವೇ ನಿಂತು ನ ನೈಟಿ ರೇಪ್ ಪ್ರಯತ್ನದಲ್ಲಿ ಹರಿದಿದೆ ಎಂದು ತೋರಿಸುವಾಗ ೋ ಹೊಡೆದು ಪತ್ರಿಕೆಯವರಿಗೆ ಹಂಚಿದ್ದಾರೆ. ಅನಂತರ ಭಟ್ಟನನ್ನು ತಂದು 'ಆಕೆ'ಯಿಂದ ಅತ್ಯಾಚಾರದ ದೂರನ್ನು ಎಸ್‌ಐ ಪಡೆದುಕೊಂಡಿದ್ದಾನೆ. ನುಷ ಹಲ್ಲೆಯಿಂದ ಹೈರಾಣಾಗಿದ್ದ ಭಟ್ಟನನ್ನು ನಡುರಾತ್ರಿ ತನಕ ುಲ್ಲಿಟ್ಟುಕೊಂಡು ಸತಾಯಿಸಿಬಿಟ್ಟಿದ್ದಾರೆ. ಆದರೆ ಭಟ್ಟನ ಮೇಲೆ ಯಾವ ್ನೂ ಈ ಪೊಲೀಸ್ ಮಾಫಿಯಾ ದಾಖಲಿಸಿಕೊಂಡಿಲ್ಲ.

ಮಾನ-ಮಾಫಿಯಾ

ಪೊಲೀಸ್ ಮಾಫಿಯಾದ ನಿರ್ದೇಶನದಂತೆ ಲ್ಯಾಂಡ್ ಮಾಫಿಯಾ ಸೋಕಾಲ್ಡ್ ನ್ನು ಅಪಹರಿಸಿ ಹಣ್ಣುಗಾಯಿ-ನೀರುಗಾಯಿ ಮಾಡಿದ ನಂತರದ ಘಟನೆಗಳು ್ಲೊಂದು ಅನಾಹುತಕಾರಿ ಆಯಾಮ ಪಡೆಯುತ್ತಿದೆ. ಪತ್ರಕರ್ತರಲ್ಲೇ ಎರಡು ಗಿದೆ. ವಿ.ಕ.ದಲ್ಲಿ ತನ್ನ ವರದಿಗಾರನ ಮೇಲಾಗಿರುವ ಹಲ್ಲೆ ಬಗ್ಗೆ ಸತತ ಗಳು ಬಂದವು. ಮತ್ತೊಂದೆಡೆ ಕೆಲವರು ಪೊಲೀಸಪ್ಪ-ಲ್ಯಾಂಡ್ ದಾರರನ್ನು ಬಚಾಯಿಸಲು ಮೂರೂರಿನ ಅಮಾಯಕ ಹೆಂಗಸನ್ನು ಾಸ್ ಮಾಡಲಾಗುತ್ತಿದೆ. ಮತ್ತೊಂದೆಡೆ ಇಡೀ ಕೊಳಕು ಪ್ರಕರಣಕ್ಕೆ ಣ್ಣ ಬರತೊಡಗಿದೆ.

ಟ್ಟನ ಪರವಾಗಿ ಬ್ರಾಹ್ಮಣಶಾಹಿ ಸಂಘಟನೆಗಳು, ಪಕ್ಕಾ ವೈದಿಕವಾದಿ ನಂದ ಹೆಗಡೆ, ವಿಭಟ್ಟರು ಟೊಂಕ ಕಟ್ಟಿ ನಿಂತಿದ್ದಾರೆ. ಅತ್ತ ಹಿಂದುಳಿದ ಪಿಎಸ್‌ಐ, ಲ್ಯಾಂಡ್ ದಂಧೆದಾರರು ಮತ್ತು ಮೂರೂರಿನ ಹೆಂಗಸಿನ ಬೇಕಂತಲೇ ಮೇಲುವರ್ಗದವರು ದಾಳಿ ಮಾಡುತ್ತಿದ್ದಾರೆಂಬಂತೆ ಾಗುತ್ತಿದೆ. ಭಟ್ಟನ ಬೆನ್ನಿಗೆ ರಾಜ್ಯ ಸರ್ಕಾರ ನಿಯಂತ್ರಿಸುವ ದಿಗಳಿರುವುದರಿಂದ ಕಂಗಾಲಾಗಿರುವ ಪಿಎಸ್‌ಐ ಮತ್ತು ಶ್ರೀಕಾಂತ ನ ಪಟಾಲಂ ಅತ್ಯಾಚಾರ ಪ್ರಯತ್ನದಿಂದ ಘಾಸಿಗೊಂಡಿದ್ದೇನೆನ್ನುತ್ತಿರುವ ನ್ನು ಬೀದಿಗೆ ತಂದು ನಿಲ್ಲಿಸಿ ಆಕೆಯ ಹೆಗಲ ಮೇಲೆ ಗನ್ ಇಟ್ಟು ಡುತ್ತಿದ್ದಾರೆ. ಆಕೆ "ವಿಕ ವರದಿಗಾರ ನನ್ನ ರೇಪ್‌ಗೆ ಪ್ರಯತ್ನಿಸಿದರೂ ್ಲ ಬಂಧಿಸಿಲ್ಲ... ತಕ್ಷಣ ಬಂಧಿಸದಿದ್ದರೆ ವಿಷ ಕುಡಿದು ಆತ್ಮಹತ್ಯೆ ೂಳ್ಳುತ್ತೇನೆ" ಎಂದು ತಹಶೀಲ್ದಾರರಿಗೆ ಪಟಗಾರ-ಮತ್ತಿತರ ಹಿಂದುಳಿದ ರೊಂದಿಗೆ ಬಂದು ಮನವಿ ಕೊಟ್ಟಿದ್ದಾಳೆ. ಭಟ್ಟನ ಪರವಿರುವ ಬೃಹಸ್ಪತಿಗಳೂ ವೇಶ್ಯೆ.... ಈಕೆಯಿಂದ ಮೂರೂರಿನ ಮಾನ ಹಾಳಾಗುತ್ತಿದೆ...." ಎಂದು ಯುತ್ತಿದ್ದಾರೆ; ಅಮಾಯಕ ಕಾಲೇಜು ವಿದ್ಯಾರ್ಥಿಗಳನ್ನು ಪ್ರತಿಭಟನೆಗಿಳಿಸಿ ಗೆಲ್ಲಲು ಹವಣಿಸುತ್ತಿದ್ದಾರೆ.

ಟ್ಟನಲ್ಲಿ ಈಕೆ ಲ್ಯಾಂಡ್-ಪೊಲೀಸ್ ಮತ್ತು ಬ್ರಾಹ್ಮಣಶಾಹಿ ಮಾಫಿಯಾದ ಸಿಕ್ಕು ಅವಮಾನಿತಳಾಗುತ್ತಿದ್ದಾಳೆ. ಭಟ್ಟ ಯಾರನ್ನು ವೇಶ್ಯೆ ಎಂದು ಬರೆದಿದ್ದನೋ ಅದೇ ಅಸಹಾಯಕ ಹೆಂಗಸಿಗೆ ಯಾವ್ಯಾವುದೋ ಒತ್ತಡ ಮಿಷ ತೋರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಕೆಳವರ್ಗದ ಬಲಾಢ್ಯರೂ ಸಿದ್ದಾರೆ. ಇಲ್ಲಿ ತತ್ವ-ಬದ್ಧತೆ ಬ್ಯಾಕ್‌ವರ್ಡ್ ಪ್ರಜ್ಞೆ-ಹೆಣ್ಣಿನ ಮೇಲಿನ ಪಾವಿತ್ರ್ಯಕ್ಕಿಂತ ಎರಡೂ ಕಡೆಯವರಿಗೆ ಅವರವರ ಒಣ ಪ್ರತಿಷ್ಠೆಯೇ ಾಗಿದೆ. ಎರಡೂ ಕಡೆಯವರು ಅಮಾಯಕ ಹೆಣ್ಣಿನ ಮಾನವನ್ನೇ ಅಸ್ತ್ರ ೊಂಡು ಕಾದಾಡುತ್ತಿರುವುದು ಹೇಯ-ಬರ್ಬರ-ಅಮಾನುಷ!

ಗಾಗಿ ಸಚ್ಚಿದಾನಂದ ಹೆಗಡೆಯಂಥವರೂ ಸರ್ಕಾರಿ ಗೂಟದ ಕಾರಿನಲ್ಲಿ ಗೆ ಬಂದು ಸ್ವಜಾತಿಬಂಧುವಿನ ಪರವಾಗಿ ಪ್ರತಿಭಟನೆ ನಡೆಸುತ್ತಾರೆ. ು ಬೆಂಗಳೂರಲ್ಲಿ ಕುಳಿತೇ ಕರಾಮತ್ತು ಮಾಡುತ್ತಾರೆ. ಚೆಡ್ಡಿ ಪರಿವಾರದ ನೆಗಳು ಹಾರಾಡುತ್ತಿವೆ. ಶೂದ್ರರು ಮೇಲ್ವರ್ಗದವರ ಸಂಚು ಅರ್ಥವಾಗದೇ ತಾವೇ 'ಎಕ್ಸ್‌ಪೋಸ್' ಮಾಡಿಕೊಳ್ಳುತ್ತಿದ್ದಾರೆ. ಇಷ್ಟಾದರೂ ಜಿಲ್ಲಾ ರಿ ಮಂತ್ರಿ ಕಾಗೇರಿ ಎಂಬ ಹೇತ್ಲಾಂಡಿಯಾಗಲಿ, ಆತನ ಎಸ್ಪಿ ರಮಣಗುಪ್ತಾ ರಾಗಲಿ ತುಟಿಪಿಟಿಕ್ ಎಂದಿಲ್ಲ! ನಾಲಾಯಕ್ ಜಿಲ್ಲಾ ಮಂತ್ರಿ ಕಾಗೇರಿ ಕಾರಿಗಳನ್ನೂ ಸಮರ್ಥಿಸುತ್ತಿಲ್ಲ; ಅತ್ತ ವಿವಾದ ಮುಗಿಸಲೂ ಪ್ರಯತ್ನಿಸುತ್ತಿಲ್ಲ. ಪೊಲೀಸರಿಗೆ ಅಂಕುಶವಿಡುವ ತಾಕತ್ತು ಕಳಪೆ ಕಾಗೇರಿಗೆಲ್ಲಿದೆ? ಗಾಗಿಯೇ ಕಾಗೇರಿಯ ಇಂಥ ನಾಲಾಯಕ್ ಕಾರ್ಯಶೈಲಿ ಸ-ನೊಂದವರು ಆತನನ್ನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಅನ್ನುತ್ತಿದ್ದಾರೆ. ಕೈಲಿ ಜಿಲ್ಲೆ ಬರ್ಬಾದ್ ಆಗುತ್ತಿದೆ. ಒಂಥರಾ ಅರಾಜಕತೆ ಾಡುತ್ತಿದೆ. ಇನ್ನಾದರೂ ಕಾಗೇರಿ ಕುಮಟಾದ ಕೊಳಕು ಪ್ರಹಸನಕ್ಕೆ ಳೆಯುವರೆ, ಅವ್ಯವಹಾರಿಗಳ ಹಣವಂತರ-ಅಧಿಕಾರವಂತರ ಕೆವಲಿನ ಾತಿ ಕಲಹವಾಗುವ ಮುಂಚೆ ಎಚ್ಚೆತ್ತುಕೊಳ್ಳುವರೇ? ಗಂತ ಜಿಲ್ಲೆಯ ಪ್ರಜ್ಞಾವಂತರು ಕೇಳುತ್ತಿದ್ದಾರೆ.


• ನಹುಶ

ಹುಬ್ಬಳ್ಳಿ: ಇನ್‌ಕಮ್ ಟ್ಯಾಕ್ಸ್ ಬಲೆಗೆ

ವಿಎಚ್‌ಪಿ ವಂಚಕ ಭಾಪಣಾ

ಬಡವರ ಪಾಲಿನ ಪಡಿತರ ಧಾನ್ಯಗಳನ್ನೇ ಲಪಟಾಯಿಸಿ, ಕಳ್ಳಸಂತೆಯಲ್ಲಿ ಮಾರಿಕೊಂಡು ಕೊಬ್ಬಿರುವ ಹುಬ್ಬಳ್ಳಿಯ ಕುಳವೊಂದು ಆದಾಯ ತೆರಿಗೆ ಇಲಾಖೆಯ ಬಲೆಗೆ ಬಿದ್ದಿದೆ.


ಈ ಕುಳ ಮಾತೆತ್ತಿದರೆ ಭಾರತಮಾತಾ, ಗೋಮಾತಾ, ಅಯೋಧ್ಯೆ ರಾಮಾ ಎಂದೆಲ್ಲ ಬಾಯಿ ಕಿಸಿಯುತ್ತ ದೇಶಭಕ್ತನಂತೆ ಪೋಸು ಕೊಡುತ್ತಿತ್ತು. ಈ ಕುಳದ ಹೆಸರು ರಮೇಶ್ ಭಾಪಣಾ. ಈತ ಹುಬ್ಬಳ್ಳಿ ವಿಶ್ವ ಹಿಂದೂ ಪರಿಷತ್‌ನ ಪ್ರಾಂತೀಯ ಸಂಚಾಲಕ. ಚೆಡ್ಡಿಗಳು ದೊಂಬಿ ಎಬ್ಬಿಸಲು ಮೆರವಣಿಗೆ, ಸಮಾವೇಶ ಏನೇ ನಡೆಸಲಿ ಊಟ, ವಸತಿ ಇತ್ಯಾದಿ ವ್ಯವಸ್ಥೆಯನ್ನು ನಿಭಾಯಿಸುವುದು ಈ ಅಕ್ಕಿಗಳ್ಳನೇ. ಗ್ರಾಮೀಣ ಪಂಚಾಯತ್ ಸಚಿವ ಜಗದೀಶ ಶೆಟ್ಟರನ ಸಹೋದರ ಪ್ರದೀಪ್ ಶೆಟ್ಟರನ ರಿಯಲ್ ಎಸ್ಟೇಟ್ (ಅ)ವ್ಯವಹಾರದಲ್ಲೂ ಈ ಖದೀಮ ಪಾಲುದಾರನಾಗಿರುವು ದರಿಂದಲೇ ಇಲ್ಲಿವರೆಗೆ ಯಾವ ಅಧಿಕಾರಿಯೂ ಈತನ ತಂಟೆಗೆ ಹೋಗುತ್ತಿರಲಿಲ್ಲ.



ರಮೇಶ್ ಭಾಪಣಾ

ಆದರೆ ಸೆಪ್ಟೆಂಬರ್ 9 ರಂದು ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಗೋವಾ ಮತ್ತು ಬೆಂಗಳೂರಿನ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಎರಡು ಪ್ರತ್ಯೇಕ ತಂಡಗಳಲ್ಲಿ ಕಾರ್ಯಾಚರಣೆ ನಡೆಸಿ, ರಮೇಶ ಭಾಪಣಾನ ಮನೆ, ಆಫೀಸ್‌ಗಳ ಮೇಲೆ ದಾಳಿ ನಡೆಸಿ, ನಕಲಿ ದೇಶಭಕ್ತನಿಗೆ ಮರ್ಮಾಘಾತವುಂಟುಮಾಡಿದ್ದಾರೆ. ಭಾಪಣಾನ ಫ್ರೆಂಡ್ಸ್‌ಗಳಂತಾಗಿರುವ ಹುಬ್ಬಳ್ಳಿಯ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಸುಳಿವನ್ನೇ ನೀಡದೇ ಈ ದಾಳಿ ನಡೆಸಿದ್ದರಿಂದ ಭಾಪಣಾ ಬಲೆಗೆ ಬಿದ್ದಿದ್ದಾನೆ. ಪಡಿತರ ಧಾನ್ಯಗಳನ್ನು ಕಡಿಮೆ ಬೆಲೆಗೆ ಖರೀದಿಸಿ ಮತ್ತು ರೈತರಿಂದ ತೊಗರಿಬೇಳೆ, ಗೋಧಿಯನ್ನು ಕನಿಷ್ಠ ಬೆಲೆಗೆ ಖರೀದಿಸಿ, ಗೋವಾದ ಕಾಳಸಂತೆಯಲ್ಲಿ ಭಾಪಣಾ ಮಾರುತ್ತಿದ್ದುದೇ ಈ ದಾಳಿ ನಡೆಯಲು ಸದ್ಯದ ಕಾರಣವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ರೇಷನ್ ಪಡಿತರ ಧಾನ್ಯಗಳ ಮಾರಾಟದಿಂದ ಕಬಳಿಸಿದ ದುಡ್ಡಲ್ಲಿ ರಿಯಲ್ ಎಸ್ಟೇಟ್ ದಂಧೆಗೂ ಇಳಿದಿದ್ದ ರಮೇಶ್ ಭಾಪಣಾ ಹುಬ್ಬಳ್ಳಿ-ಧಾರವಾಡದಲ್ಲಿನ ವಿವಾದಿತ ಆಸ್ತಿ ಹಾಗೂ ಖುಲ್ಲಾ ನಿರ್ಮಿಸಿಕೊಂಡಿದ್ದಾನೆ. ಪಡಿತರ ಇಲಾಖೆಯ ಆಹಾರಧಾನ್ಯಗಳು ಇಲ್ಲಿ ಪಾಲಿಶ್ ಆಗಿ, ರಾಜ್ಯದ ಪ್ರಮುಖ ಪಟ್ಟಣಗಳು ಸೇರಿದಂತೆ, ಆಂಧ್ರ, ತಮಿಳುನಾಡು, ರಾಜಸ್ತಾನಗಳ ಕಳ್ಳಸಂತೆಗೆ ಸಾಗಿಸಲ್ಪಡುತ್ತವೆ. ಇಂತಹ ಹಗಲುದರೋಡೆಗೆ ಈ ಮೊದಲು ಸಾಥ್ ನೀಡಿದ್ದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಅಧಿಕಾರಿಯಾಗಿದ್ದ ಅನ್ನಪೂರ್ಣಮ್ಮ ಎಂಬುವವರು. ಅನ್ನಪೂರ್ಣಮ್ಮಳ ಈ ಕಳ್ಳಾಟದ ಕುರಿತೂ 'ಲಂಕೇಶ್' ಬರೆದಿತ್ತು. ಆಗ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ನೈವೇದ್ಯ ಅರ್ಪಿಸಿದ ಅನ್ನಪೂರ್ಣಮ್ಮ ತನ್ನೊಂದಿಗೆ ಭಾಪಣಾನನ್ನು ಬಚಾವು ಮಾಡಿದ್ದರು. ಬದ್ಮಾಶ್ ಭಾಪಣಾನನ್ನು ಬೆಳೆಸಿದ ಅನ್ನಪೂರ್ಣಮ್ಮ ಉಡಿ ತುಂಬ ರೊಕ್ಕ ತುಂಬಿಕೊಂಡು ಚಿಕ್ಕಮಗಳೂರಿಗೆ ವರ್ಗಾ ಆದರು. ಅಷ್ಟೊತ್ತಿಗಾಗಲೇ ಭಾಪಣಾ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಮೇಲೆ ಹಿಡಿತ ಸಾಧಿಸಿದ್ದರಿಂದ, ಆತನ ರೇಷನ್‌ಗಳ್ಳತನ ಯಾವುದೇ ಅಡೆತಡೆ ಇಲ್ಲದೇ ಸಾಗಿಬಂತು. ಅನ್ನಪೂರ್ಣಮ್ಮಳಷ್ಟೇ ಅಲ್ಲದೇ ಬನವಾಸಿ ಎಂಬ ಸೀನಿಯರ್ ಫುಡ್ ಇನ್ಸ್‌ಪೆಕ್ಟರನೂ ಭಾಪಣಾಗೆ ಸಕಲ ವಿದ್ಯೆ ಕಲಿಸಿ, ಬಡರೈತರ ತಟ್ಟೆಗೆ ಕಲ್ಲುಹಾಕಿ ಧಾರವಾಡಕ್ಕೆ ಜಿಗಿದಿದ್ದ ಈಗ ಮತ್ತೆ ಹುಬ್ಬಳ್ಳಿಗೆ ವಕ್ಕರಿಸಿರುವ ಬನವಾಸಿ ಭಾಪಣಾಗೆ ಇಲಾಖೆಯನ್ನೇ ಅಡಾ ಇಟ್ಟುಬಿಟ್ಟಿದ್ದಾನೆ. ಬನವಾಸಿಯಂತಹ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಹೆಗ್ಗಣಗಳನ್ನು ಬಳಸಿಕೊಂಡ ರಮೇಶ ಭಾಪಣಾ ಹುಬ್ಬಳ್ಳಿಯ ಪ್ರತಿ ಪಡಿತರ ಕೇಂದ್ರದಲ್ಲಿ ನೂರುನೂರು ಬೋಗಸ್ ಪಡಿತರ ಚೀಟಿಗಳನ್ನು ಬೇನಾಮಿ ಹೆಸರಲ್ಲಿ ಸೃಷ್ಟಿಸಿದ್ದಾನೆ. ಕಾರ್ಪೊರೇಟರುಗಳನ್ನು ಬಳಸಿಕೊಂಡ ಭಾಪಣಾ ಸರ್ಕಾರಿ ನೌಕರರ ಹೆಸರಲ್ಲೂ ಬಿಪಿಎಲ್ ಕಾರ್ಡ್‌ಗಳನ್ನು ಸೃಷ್ಟಿಸಿದ್ದಾನೆ. ಇದಕ್ಕೆ ಸಾಕ್ಷಿ ಎಂಬಂತೆ, ಮೊನ್ನೆ ಪೊಲೀಸರು ನಡೆಸಿದ ರೇಡಿನಲ್ಲಿ ಕಾರ್ಪೊರೇಟರ್ ಸುವರ್ಣಾಳ ಮನೆಯಲ್ಲಿ 60 ಬೇನಾಮಿ ಹೆಸರಿನ ಬಿಪಿಎಲ್ ಕಾರ್ಡ್‌ಗಳು ದೊರೆತಿವೆ. ಹೀಗೆ ಸಾವಿರಾರು ನಕಲಿ ಪಡಿತರ ಚೀಟಿಗಳಲ್ಲಿ ದಾಖಲೆ ತೋರಿಸಿ ಸಾವಿರಾರು ಕ್ವಿಂಟಲ್ ಧಾನ್ಯಗಳನ್ನು ಕಡಿಮೆ ಬೆಲೆಗೆ (ಬಿಪಿಎಲ್ ಬೆಲೆ) ಖರೀದಿಸುವ ಭಾಪಣಾ, ಈ ಧಾನ್ಯಗಳಿಗೆ ಪಾಲಿಶ್ ಮಾಡಿ ಹೆಚ್ಚಿನ ರೇಟಿಗೆ ಮಾರಿಕೊಳ್ಳುತ್ತಿದ್ದಾನೆ.



ಭಾಪಣಾ ಕಚೇರಿ



ಭಾಪಣಾ ಮನೆ

ಜಾಗೆಗಳನ್ನು ಕಡಿಮೆ ಬೆಲೆಗೆ ಖರೀದಿಸುತ್ತ ಬಂದಿದ್ದ. ಇದೆಲ್ಲ ತೆರಿಗೆ ವಂಚನೆ ಮಾಡಿದ ಕಪ್ಪುಹಣದಿಂದ ಖರೀದಿಸಿದ್ದು ಎಂಬುದಕ್ಕೆ ದಾಖಲೆಗಳು ಸಿಕ್ಕಿವೆ ತೆರಿಗೆ ಅಧಿಕಾರಿಗಳಿಗೆ. ರಮೇಶ ಭಾಪಣಾನ ಸಹೋದರರಾದ ಗೌತಮಚಂದ, ಉಕಚಂದ ಹೆಸರಲ್ಲಿರುವ ಬೇನಾಮಿ ಆಸ್ತಿಗಳ ದಾಖಲೆಗಳನ್ನು ತೆರಿಗೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಜಗದೀಶ್ ಶೆಟ್ಟರ್ ಈಗ ತಲೆತೂರಿಸದೇ ಹೋದರೆ, ವಿಎಚ್‌ಪಿಯ ನಕಲಿ ದೇಶಭಕ್ತ ಜೈಲು ಪಾಲಾಗುವುದು ಶತಸಿದ್ಧ.

ಬದ್ಮಾಶ್ ಭಾಪಣಾನ ಪುರಾಣ

ಈ ಹಿಂದೆ ಭಾಪಣಾನ ಅಕ್ಕಿ ಕಳ್ಳತನದ ಬಗ್ಗೆ 'ಲಂಕೇಶ್' ಹಲವಾರು ಸಲ ಬರೆದಿತ್ತು. ಆದರೆ ಭಾಪಣಾನ ಎಂಜಲು ತಿಂದಿದ್ದ ಕೆಲ ಬಿಜೆಪಿ, ವಿಎಚ್‌ಪಿ ನಾಯಕರು ಭಾಪಣಾನನ್ನು ರಕ್ಷಿಸುತ್ತಲೇ ಬಂದಿದ್ದರು.

ರಾಜಸ್ತಾನ ಮೂಲದ ಭಾಪಣಾ ಕುಟುಂಬ ಹುಬ್ಬಳ್ಳಿಗೆ ವಕ್ಕರಿಸಿದ್ದು 40 ವರ್ಷಗಳ ಹಿಂದಷ್ಟೇ. ಈ ಕುಟುಂಬದ ಕುಡಿ ರಮೇಶ ಭಾಪಣಾ ದೋನಂಬರ್ ದಂಧೆಗಳಲ್ಲಿ ಪಳಗುತ್ತ ಬಂದ. ಕಳೆದ 10-12 ವರ್ಷಗಳ ಹಿಂದಿನಿಂದ ಈತ ತನ್ನೆಲ್ಲ ಕಂತ್ರಿ ದಂಧೆಗಳಿಗೆ ರಕ್ಷಾಕವಚ ತೊಡಿಸಲು ಬಿಜೆಪಿಯ ಬಾಲಬಡುಕನಾದ. ಕದ್ದ ರೊಕ್ಕ ಕೊಟ್ಟುಕೊಟ್ಟೇ ವಿಎಚ್‌ಪಿಯ ನಾಯಕನಾಗಿ ಬೆಳೆದ. ಪುಂಡ ಭಜರಂಗಿಗಳ ಭಂಡ ಗಲಭೆಗಳಿಗೆ ಆರ್ಥಿಕ ಪೋಷಕನಾಗಿ ಬೆಳೆದ.

ಹುಬ್ಬಳ್ಳಿ ಮತ್ತು ಸುತ್ತಮುತ್ತಲಿನ ಸಾವಿರಾರು ಸರ್ಕಾರಿ ಪಡಿತರ ಕೇಂದ್ರಗಳಿಂದ ಕಡಿಮೆ ಬೆಲೆಗೆ ಅಕ್ಕಿ, ಗೋಧಿ ಖರೀದಿಸಿ, ಪಾಲಿಶ್ ಮಾಡಿ, ಓಪನ್ ಮಾರ್ಕೆಟ್ಟಿನಲ್ಲಿ ಮತ್ತು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಿಕೊಳ್ಳುವುದೇ ಭಾಪಣಾನ ಮೂಲದಂಧೆ. ಇದಕ್ಕಾಗಿ ಆತ ಹುಬ್ಬಳ್ಳಿಯ ಹೊರಭಾಗದ ಬಂಕಾಪುರ ಚೌಕ್‌ನಲ್ಲಿ ಒಮ್ಮೆಲೇ ನಾಲ್ಕು ಟ್ರಕ್‌ಗಳು ನಿಲ್ಲಬಹುದಾದ ಆವರಣ ಹೊಂದಿರುವ ದೊಡ್ಡ ಗೋಡೌನ್ ಒಂದನ್ನು

ಉದಾಸಿ ಕಾಪಾಡಿದ್ದ!

ಕಳೆದ ವರ್ಷ ಆಗಸ್ಟ್ 12 ರಂದು ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಕೆಲ ಪ್ರಾಮಾಣಿಕ ಅಧಿಕಾರಿಗಳು ಮತ್ತು ಆಗಿನ ಉಪವಿಭಾಗಾಧಿಕಾರಿ ಮಹಾಂತೇಶ್ ಬೀಳಗಿ ಸೇರಿ ಭಾಪಣಾನ ಗೋಡೌನ್ ಮೇಲೆ ದಾಳಿ ನಡೆಸಿ, ಅಕ್ರಮ ಅಕ್ಕಿ ಸಂಗ್ರಹಣೆಯನ್ನು ಪತ್ತೆಹಚ್ಚಿದ್ದರು. ಆಗ ರಮೇಶ ಭಾಪಣಾನ ಸಹೋದರ ಹಿತೇಶನ ಮೇಲೆ ಪ್ರಕರಣ ದಾಖಲಾಗಿತ್ತು. ಇನ್ನೊಂದು ಗೋಡೌನ್ ಮೇಲೆ ದಾಳಿ ನಡೆಸಿದಾಗ ರಮೇಶ ಭಾಪಣಾನೇ ಸಿಕ್ಕಿಬಿದ್ದಿದ್ದ. ಆದರೆ ಈ ಕಳ್ಳ ವ್ಯವಹಾರದಲ್ಲಿ ಭಾಪಣಾಗೆ ಪಾಲುದಾರನಾಗಿದ್ದ ತಿಳವಳ್ಳಿ ಎಂಬ ಕಳ್ಳ ಸಚಿವ ಸಿ.ಎಂ. ಉದಾಸಿಯ ಸಂಬಂಧಿಕನಾಗಿದ್ದರಿಂದ ಭಾಪಣಾ ಯಾವುದೇ ಶಿಕ್ಷೆ ಇಲ್ಲದೇ ಸೇಫಾಗಿಬಿಟ್ಟ.


ಬಡಜನರ ಪಾಲಿನ ಆಹಾರಧಾನ್ಯಗಳನ್ನು ಕದಿಯುವುದಲ್ಲದೇ, ಅಸಹಾಯಕ ರೈತರಿಗೆ ಸಾಲ ಕೊಟ್ಟು, ಅವರಿಂದ ಕಡಿಮೆ ಬೆಲೆಗೆ ಆಹಾರಧಾನ್ಯ ಖರೀದಿಸಿ, ಸಂಗ್ರಹಿಸಿ ಮುಂದೆ ಹೆಚ್ಚಿನ ಬೆಲೆಗೆ ಮಾರಿಕೊಳ್ಳುವುದು ಭಾಪಣಾನ ಇನ್ನೊಂದು ಕಳ್ಳ ದಂಧೆ. ಪಡಿತರ ವಿತರಣೆಗೆಂದು ಬಂದ ಸೀಮೆಎಣ್ಣೆಯ ಬ್ಯಾರಲ್ಲುಗಳನ್ನು ಲೋಡುಗಟ್ಟಲೇ ಕಬಳಿಸುವ ಭಾಪಣಾ ಗ್ಯಾಂಗ್ ಬಡವರ ಮನೆಯ ಒಲೆಗಳಿಗೂ ತಣ್ಣೀರು ಚೆಲ್ಲುತ್ತಿದೆ.

ತನ್ನೆಲ್ಲ ಕರಾಳ ಕೆಲಸಗಳನ್ನು ಮುಚ್ಚಿಕೊಳ್ಳಲು ವಿಎಚ್‌ಪಿ ಎಂಬ ದುಷ್ಕರ ಕೂಟ ಸೇರಿರುವ ಭಾಪಣಾ, ಪಿಂಜರಾಪೋಳದಲ್ಲಿರುವ ಗೋಶಾಲೆಗೂ ಟ್ರಸ್ಟಿ ಆಗಿದ್ದಾನೆ. ಈ ಗೋಶಾಲೆಯಲ್ಲಿ ಆಹಾರವಿಲ್ಲದೇ ನೂರಾರು ದನಗಳು ಸತ್ತಾಗ ಅವುಗಳ ಚರ್ಮವನ್ನು ಮಾರಿಕೊಂಡ ಭೂಪ ಇವನು.

ಅಂತೂ ಕೊನೆಗೂ ವಿಎಚ್‌ಪಿಯ ವಂಚಕ ತೆರಿಗೆ ಅಧಿಕಾರಿಗಳ ಬಲೆಗೆ ಬಿದ್ದಿದ್ದಾನೆ. ಈತ ಜೈಲು ಪಾಲಾಗುವಂತೆ ನೋಡಿಕೊಳ್ಳುವುದು ಪ್ರಗತಿಪರ ಸಂಘಟನೆಗಳ ಜವಾಬ್ದಾರಿಯಾಗಿದೆ.

• ಹುಬ್ಬಳ್ಳಿಯಾಂವ

ಮೆಡಿಕಲ್ ಕಾಲೇಜು ಹಗರಣ
ಕೈ ನೆಕ್ಕಿಕೊಂಡ ರಾಚಂಗೌ ಔಟ್ ಪೂರಾ ಉಂಡ ವಿ.ಎಸ್.ಆಚಾರ್ಯ ಸೇಫ್




2008ರ ಮೇ 30ರಂದು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದಾಗ ಜೊತೆಯಲ್ಲಿ 28 ಮಂತ್ರಿಗಳು ಇದ್ದರೂ, ಸಿಎಂಗೆ ಪರಮನಿಷ್ಠರಾಗಿದ್ದವರು ಇಬ್ಬರೇ. ಒಬ್ಬರು ಡಾ.ವಿ.ಎಸ್.ಆಚಾರ್ಯ, ಇನ್ನೊಬ್ಬರು ರಾಮಚಂದ್ರಗೌಡ. ಆಚಾರ್ಯ ಬಲಗೈ ಆದರೆ, ರಾಚಂಗೌಡ ಎಡಗೈ. ಇಬ್ಬರೂ ಯಾವುದಕ್ಕೂ ಪ್ರಯೋಜನಕ್ಕೆ ಬಾರದ, ಸದಾ ಯಡ್ಡಿಯ ಮರ್ಜಿಯಲ್ಲೇ ಇರಬೇಕಾಗಿದ್ದ ಎಂಎಲ್‌ಸಿಗಳಾಗಿದ್ದರು. ಹಾಗಾಗಿ ಅವರನ್ನು ಸಿಎಂ ಸದಾ ತನ್ನ ಜೊತೆಯಲ್ಲೇ ಇಟ್ಟುಕೊಂಡಿರುತ್ತಿದ್ದರು. ರೆಡ್ಡಿ ಗ್ಯಾಂಗ್ ನಡೆಸಿದ ಕ್ಷಿಪ್ರಕ್ರಾಂತಿ, ಆಗಾಗ ಅನಂತಕುಮಾರ್ ನಡೆಸಿದ ಒಳಸಂಚುಗಳು, ಯಡ್ಡಿ ಶೋಭಕ್ಕನನ್ನು ಸಂಪುಟದಿಂದ ಬಿಡಲೇಬೇಕಾಗಿ ಬಂದ ದುಃಖದ ಘಳಿಗೆ ಈ ಎಲ್ಲಾ ಸಂದರ್ಭಗಳಲ್ಲೂ ಜೊತೆಯಲ್ಲಿದ್ದವರು ಇವರಿಬ್ಬರೇ. ಅಷ್ಟೇಕೆ, ಯಡ್ಡಿ ತನ್ನ 'ಆಪ್ತ'ರನ್ನು ಮಾತ್ರ ಕರೆದುಕೊಂಡು ನಡೆಸಿದ ಕೆಲವು ದೆಹಲಿ ಯಾತ್ರೆ ಮತ್ತು ಮಲೇಷಿಯಾ ಯಾತ್ರೆಯಲ್ಲೂ ಜೊತೆಗಾರರಾಗಿದ್ದವರು ಇವರಿಬ್ಬರೇ. ಆದರೆ ಎಷ್ಟೆಂದರೂ ಎಡಗೈಗೆ ಹತ್ತಿರ. ಹಾಗಾಗಿ ಇವತ್ತು ರಾಚಂಗೌ ಸಂಪುಟದಿಂದ ಹೊರದೂಡಲ್ಪಟ್ಟಿದ್ದಾರೆ. ಬಲಗೈ ಆಚಾರ್ಯ ರಾಜ್ಯ ಗೃಹಸಚಿವರಾಗಿ ವಿರಾಜಮಾನರಾಗಿದ್ದಾರೆ.

ಸ್ವಾರಸ್ಯಕರ ಸಂಗತಿ ಏನೆಂದರೆ, ಯಾವ ಮೆಡಿಕಲ್ ಕಾಲೇಜು ಹಗರಣದ ಕಾರಣಕ್ಕೆ ರಾಮಚಂದ್ರಗೌಡ ರಾಜೀನಾಮೆ ಕೊಡಬೇಕಾಗಿ ಬಂದಿದೆಯೋ, ಅದೇ ಹಗರಣದ ಮೂಲಪುರುಷ ಸಾಕ್ಷಾತ್ ವಿ.ಎಸ್.ಆಚಾರ್ಯ. 2006ರ ಫೆಬ್ರವರಿಯಿಂದ 2007ರ ನವೆಂಬರ್‌ವರೆಗೆ ಅಧಿಕಾರ ನಡೆಸಿದ ಕುಮಾರಸ್ವಾಮಿಯವರ ಸಮ್ಮಿಶ್ರ ಸರ್ಕಾರದಲ್ಲಿ ಆಚಾರ್ಯರಿಗೆ ನೀಡಲಾಗಿದ್ದದ್ದು ಇದೇ ವೈದ್ಯಕೀಯ ಶಿಕ್ಷಣ ಖಾತೆ. ಅದಕ್ಕೆ ಮುಂಚೆ ಇದ್ದ ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲೇ ಆರು ಹೊಸ ಸರ್ಕಾರೀ ಮೆಡಿಕಲ್ ಕಾಲೇಜು ಸ್ಥಾಪನೆಗೆ ಗ್ರೀನ್‌ಸಿಗ್ನಲ್ ನೀಡಲಾಗಿತ್ತು. ಅದಕ್ಕಾಗಿ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಿ, ಹೊಸ ಕಾಲೇಜಿಗಾಗಿ ಸಿಬ್ಬಂದಿ ನೇಮಕಾತಿ, ಉಪಕರಣ ಖರೀದಿ, ಕಟ್ಟಡ ನಿರ್ಮಾಣ ಕಾಮಗಾರಿ ಪ್ರಕ್ರಿಯೆ ಆರಂಭವಾಗಿದ್ದರೂ, ಎಲ್ಲವೂ ಒಂದು ರೂಪ ಪಡೆದುಕೊಂಡಿದ್ದು ಮಾತ್ರ ಕುಮಾರಸ್ವಾಮಿ ಸಿಎಂ ಆಗಿದ್ದಾಗ. ಆಗ ನಡೆದ ಅಕ್ರಮಗಳಿಗೆ ಕೊನೆ ಮೊದಲಿಲ್ಲ. ಹೇಳಿಕೇಳಿ ವೈದ್ಯನೇ ಆಗಿದ್ದ ಆಚಾರ್ಯರು ಸಾಧ್ಯವಿರುವ ಜಾಗಗಳಲ್ಲೆಲ್ಲಾ ಚೆನ್ನಾಗಿ ಮೇಯ್ದಿದ್ದರಿಂದಲೇ ಇಂದು ಒಂದೊಂದಾಗಿ ಬಿಚ್ಚಿಕೊಳ್ಳುತ್ತಿರುವ ಹಗರಣಗಳೆಲ್ಲಾ ಸಂಭವಿಸಿದ್ದು.



ಡಾ.ಪುಷ್ಪಾ ಸರ್ಕಾರ್
ಡಾ.ಪ್ರಕಾಶ್
ಡಾ. ಎಚ್.ಸಿ.ಸವಿತಾ
ಡಾ.ನಂದೀಶ್

ಮಂಡ್ಯ ಮತ್ತು ಬೆಳಗಾಂನಲ್ಲಿ ಹೊರಬಂದಿರುವ ಉಪಕರಣ ಖರೀದಿ ಹಗರಣಗಳು ಆಚಾರ್ಯಪುರುಷರ ಕಾಲದಲ್ಲೇ ನಡೆದದ್ದು. ಅದೇ ರೀತಿ ಶಿವಮೊಗ್ಗ ಮತ್ತು ಮಂಡ್ಯಗಳಲ್ಲಿ ನಡೆದಿರುವ ದೊಡ್ಡ ಪ್ರಮಾಣದ ಬೋಧಕ ಸಿಬ್ಬಂದಿ ನೇಮಕ ಹಗರಣಗಳಲ್ಲೂ ಆಚಾರ್ಯರ ನೇರ ಮಾರ್ಗದರ್ಶನ ಮತ್ತು ಸಕ್ರಿಯ ಪಾತ್ರವಿತ್ತು. ವೈದ್ಯರಾಗಿದ್ದ ಆಚಾರ್ಯರಿಗೆ ಮೆಡಿಕಲ್ ಕಾಲೇಜುಗಳಲ್ಲಿ ಮೇಯಲು ಯಾವ ಜಾಗಗಳು ಸೂಕ್ತ ಎಂಬುದರ ಪರಿಣಿತ ಜ್ಞಾನವಿತ್ತು. ಮೇಲಾಗಿ ಮೆಡಿಕಲ್ ಕಾಲೇಜಿಗೆ ಮಾನ್ಯತೆ ಸಿಗಬೇಕೆಂದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದಿಂದ ಅನುಮತಿ ಬೇಕು ಎಂಬ ನೆಪವನ್ನು ಇಟ್ಟುಕೊಂಡು, ತಮಗೆ ಬೇಕಾದ ರೀತಿಯಲ್ಲಿ ನೇಮಕಾತಿಗಳನ್ನು ಮಾಡಿಕೊಂಡರು. ಅರ್ಹತೆ, ಪ್ರಾಮಾಣಿಕತೆ ಎರಡೂ ಇಲ್ಲದವರನ್ನು ನಿರ್ದೇಶಕರ ಸ್ಥಾನದಲ್ಲಿ ಕೂರಿಸಿದರು. ಅಂತಹ ಅಕ್ರಮಗಳೇ ಇಂದು ಮೊಟ್ಟೆ ಮರಿ ಇಟ್ಟು, ಮೆಡಿಕಲ್ ಕಾಲೇಜುಗಳ ಘನತೆ, ಗುಣಮಟ್ಟ ಎಲ್ಲವನ್ನೂ ಬೀದಿಗೆ ಎಳೆದು ತಂದಿವೆ. ಜೂನ್ 2008ರಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಸ್ಥಾನಕ್ಕೆ ಬಂದು ಕೂತ ರಾಮಚಂದ್ರಗೌಡರು ಆ ಪರಂಪರೆಯನ್ನು ಮುಂದುವರೆಸಿ ತಾವೂ ಮೇಯಲು ಶುರು ಮಾಡಿದರು.



ಅಂತಿಮವಾಗಿ ಅದು ಸಚಿವ ಪದವಿಯನ್ನು ಕಳೆದು, ಗಂಟೆ ಅಲ್ಲಾಡಿಸಿ, ಮಂಗಳಾರತಿ ಮಾಡುವಷ್ಟಕ್ಕೆ ಸೀಮಿತಗೊಳಿಸುವಲ್ಲಿಗೆ ಎಳೆದುತಂದಿದೆ. ಆದರೆ ಉಡುಪಿ ಆಚಾರ್ಯರು ಮಾತ್ರ ಯಾವ ಸಮಸ್ಯೆಯೂ ಇಲ್ಲದೇ ಗಂಟೂ ಮಾಡಿಕೊಂಡು ಸೇಫಾಗಿದ್ದಾರೆ.

ಉದಾಹರಣೆಗೆ ಮಂಡ್ಯ ಮೆಡಿಕಲ್ ಕಾಲೇಜನ್ನೇ ನೋಡಿ. ಆಚಾರ್ಯರ ಕೈಗೆ ವೈದ್ಯಕೀಯ ಶಿಕ್ಷಣ ಬರುವ ಹೊತ್ತಿಗಾಗಲೇ ಅಲ್ಲಿ ಡಾ.ಚಿದಾನಂದನೆಂಬ ಪರಮಭ್ರಷ್ಟ ನಿರ್ದೇಶಕನಾಗಿಯಾಗಿತ್ತು. ಅದಕ್ಕೆ ಹಿಂದೆ ಉಪಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರ ಕುಲಬಾಂಧವನೆಂಬ ಸರ್ಟಿಫಿಕೇಟು ಹಿಡಿದು ಕುರ್ಚಿ ಹಿಡಿದುಕೊಂಡಿದ್ದ ಚಿದಾನಂದನ ಎಡವಟ್ಟುಗಳು ಮಂಡ್ಯದ ಮನೆ ಮಾತಾಗಿದ್ದವು. ಸತ್ಯ, ನ್ಯಾಯ, ನಿಷ್ಠೆಗಳೇ ತಮ್ಮ ಕುಲದೈವವೆಂಬ ಮಾತನ್ನಾಡುವ ಸಂಘಪರಿವಾರದ ನಿಷ್ಠಾವಂತ ಚೆಡ್ಡಿ ತಾನೆಂದು ಸಾರಿಕೊಳ್ಳುವ ರಥಬೀದಿಯ ಆಚಾರ್ಯರು ಆತನನ್ನು ಬದಲಾಯಿಸುವ ಗೋಜಿಗೆ ಹೋಗಲೇ ಇಲ್ಲ. ಬದಲಿಗೆ ಚಿದಾನಂದನನ್ನು ಕರೆದು ಸರಿಯಾಗಿ 40 ಲಕ್ಷ ತಂದು ಮಡಗಿ ಕೆಲಸ ಮುಂದುವರೆಸಿಕೊಂಡು ಹೋಗು ಎಂದರು. ಇದು ಸ್ವತಃ ಚಿದಾನಂದ ಮಂಡ್ಯ ಮೆಡಿಕಲ್ ಕಾಲೇಜಿನ (ಮಿಮ್ಸ್) ತನ್ನ ಗೆಣೆಕಾರರ ಹತ್ತಿರ ಬಹಿರಂಗವಾಗಿ ಹೇಳಿಕೊಂಡಿದ್ದು. ಅಷ್ಟು ಹೊತ್ತಿಗೆ ಮಿಮ್ಸ್‌ನಲ್ಲಿನ ಅವ್ಯವಹಾರಗಳ ಕುರಿತು ಪ್ರೊ.ಎಚ್ಚೆಲ್ಲೆ, ರೈತಸಂಘದ ಸುನಂದಾ ಜಯರಾಂ ಮತ್ತು ಕೆ.ಬೋರಯ್ಯನವರು ಝಾಡಿಸಲು ಶುರುಮಾಡಿದ್ದರು. ಲೋಕಾಯುಕ್ತರಿಗೂ ದೂರು ಕೊಟ್ಟರು. ಸಂತೋಷ್ ಹೆಗಡೆಯವರು ತನಿಖಾಧಿಕಾರಿಯಾಗಿ ಡಾ.ಬಾಲಸುಬ್ರಮಣ್ಯಂ ಅವರನ್ನು ನೇಮಿಸಿದರು. ವಿವರವಾದ ತನಿಖೆ ನಡೆಸಿದ ಡಾ.ಬಾಲಸುಬ್ರಮಣ್ಯಂ ಚಿದಾನಂದ ನಡೆಸಿದ ಭಾನಗಡಿಗಳನ್ನು ಸ್ಪಷ್ಟವಾಗಿ ಗುರುತಿಸಿ ವರದಿ ನೀಡಿದರು. ಈ ವರದಿಯ ಆಧಾರದ ಮೇಲೆ ಚಿದಾನಂದ ಜೈಲಿಗೆ ಹೋಗುತ್ತಾನೆಂದು ಎಲ್ಲರೂ ಕಾದಿದ್ದರು.


ಆದರೆ ವಿ.ಎಸ್.ಆಚಾರ್ಯರು, ಚಿದಾನಂದ ಗೌರವಯುತವಾಗಿ ಮಿಮ್ಸ್‌ನಿಂದ ನಿವೃತ್ತಿ ಹೊಂದಲು ಅವಕಾಶ ಕಲ್ಪಿಸಿಕೊಟ್ಟಿದ್ದು ಮಾತ್ರವಲ್ಲ ಆತನ ಸೇವಾ ಅವಧಿಯನ್ನು ವಿಸ್ತರಿಸಿ ಶಿವಮೊಗ್ಗ ಮೆಡಿಕಲ್ ಕಾಲೇಜಿಗೆ ನಿರ್ದೇಶಕನಾಗಿ ನೇಮಿಸಿದರು! ತಮ್ಮ ನೆಚ್ಚಿನ ನಾಯಕ ಯಡಿಯೂರಪ್ಪನವರ ಜಿಲ್ಲೆಗೆ ಅಷ್ಟು ಮಾತ್ರದ ಕೊಡುಗೆ ಕೊಡದಿದ್ದರೆ ಹೇಗೆ ಎಂಬುದು ಆವರ ಲೆಕ್ಕಾಚಾರವಿರಬೇಕು. ಇಂದು ಶಿವಮೊಗ್ಗ ಮೆಡಿಕಲ್ ಕಾಲೇಜು (ಸಿಮ್ಸ್)ನಲ್ಲಿ ಹೊರಬಂದಿರುವ ಅಕ್ರಮ ನೇಮಕಾತಿ ಅದೇ ಕಾಲದ್ದು. ಆದರೆ ಚಿದಾನಂದನ ದುರದೃಷ್ಟ, ಆಚಾರ್ಯರಿಗೆ ಸಂದಾಯವಾದ ಹಣವನ್ನು ರಿಕವರಿ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆ ಆವರಣದ ಸಿಮ್ಸ್‌ನಿಂದ ಆತ ನೇರವಾಗಿ ಜೈಲು ಸೇರುವಂತಹ ವಾತಾವರಣ ಸೃಷ್ಟಿಯಾಯಿತು.

ಇದೇ ಹೊತ್ತಿನಲ್ಲಿ ಮಂಡ್ಯ ಮೆಡಿಕಲ್ ಕಾಲೇಜಿನ ಅನಾಹುತಗಳನ್ನು ಬಯಲಿಗೆಳೆದು, ಅಲ್ಲೊಂದು ಆರೋಗ್ಯಕರ ವಾತಾವರಣ ನಿರ್ಮಾಣವಾಗಲಿ ಎಂದು ಆಶಿಸುತ್ತಿದ್ದ ಮಂಡ್ಯದ ಪ್ರಗತಿಪರರು ಆಚಾರ್ಯರನ್ನು ಭೇಟಿ ಮಾಡಲು ಹೋದರು. ವೈದ್ಯ ಮಹಾಶಯರಾದ ಆಚಾರ್ಯರು ವೈದ್ಯಕೀಯ ನೀತಿಸಂಹಿತೆಯನ್ನು ಓದಿ ಬಲ್ಲರು, ಉಡುಪಿ ಭಾಗದ ಸಾಧು ಸಂತರಲ್ಲಿ ಇವರೇ ಪ್ರಮುಖರು ಎಂಬ ಭರವಸೆಯಿಂದ ಮಿಮ್ಸ್‌ನ ಕುರಿತು ದೂರನ್ನು ಅಲ್ಲಿಗೆ ಒಯ್ದರು. ಆದರೆ ಇವರಿಗೆ ಗೊತ್ತಿಲ್ಲದ ಸಂಗತಿ ಒಂದಿತ್ತು. ಉಡುಪಿಯಿಂದ ನೇರವಾಗಿ ವಿಧಾನಸೌಧಕ್ಕೆ ಬಂದಿದ್ದ ಆಚಾರ್ಯರು, ಮಲ್ಪೆಗೆ ಹೋಗುವ ದಾರಿಯಲ್ಲಿನ ಕಲ್ಮಾಡಿಯಲ್ಲಿನ ತಮ್ಮ 'ಗೀತಾ ಕ್ಲಿನಿಕ್'ನ್ನು ನೋಡಿಕೊಳ್ಳಲು ಯಾವ ವೈದ್ಯಕೀಯ ಪದವಿಯೂ ಇರದ ಕಾಂಪೌಂಡರ್ ಶಿವಾನಂದನನ್ನು ಬಿಟ್ಟು ಬಂದಿದ್ದರು.



ಸ್ವಂತ ಮಗ ಡಾ.ಕಿರಣ್ ಆಚಾರ್ಯನನ್ನು ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜನ್ನು ಉದ್ಧಾರ ಮಾಡಲು ಬಿಟ್ಟುಕೊಟ್ಟಿದ್ದರಿಂದ ಸ್ವಂತ ಕ್ಲಿನಿಕ್‌ಗೆ ವೈದ್ಯರು ಸಿಗದೆ ಶಿವಾನಂದರೇ ಸುಮಾರು ವರ್ಷಗಳ ಕಾಲ ಔಷಧಿ ಕೊಡುವುದು, ಇಂಜೆಕ್ಷನ್ ಚುಚ್ಚುವುದನ್ನು ಮಾಡುತ್ತಿದ್ದರು. ಕಿರಣ್ ಆಚಾರ್ಯ ಮೂಳೆ ಆಪರೇಷನ್ ಮಾಡಿದ್ದಕ್ಕಿಂತ, ಅಲ್ಲಿ ಫೋಟೋ ತೆಗೆಯಲು ಬಂದಿದ್ದ ಜರ್ನಲಿಸ್ಟರ ಮೂಳೆ ಮುರಿಯಲು ಹೋಗಿ ಸುದ್ದಿ ಮಾಡಿದ್ದರಿಂದಲೇ ಉಡುಪಿಯಲ್ಲಿ ಹೆಚ್ಚು ಪರಿಚಿತನಾಗಿದ್ದ.

ಹೀಗೆ ತಮ್ಮ ಕ್ಲಿನಿಕ್‌ಅನ್ನು ಸರ್ಟಿಫಿಕೇಟೇ ಇಲ್ಲದ ವ್ಯಕ್ತಿಯ ಕೈಗೆ ಕೊಟ್ಟು ಬಂದಿದ್ದ ಆಚಾರ್ಯರು, ಮೆಡಿಕಲ್ ಕಾಲೇಜಿನಲ್ಲಿ ಪಾಠ ಮಾಡಲು ಸುಳ್ಳು ಸರ್ಟಿಫಿಕೇಟ್ ಇದ್ದರೆ ಸಾಕೆಂದು ಬಗೆದಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಪರಿಣಾಮವಾಗಿ ಮಂಡ್ಯ, ಶಿವಮೊಗ್ಗ, ಹಾಸನ ಇತ್ಯಾದಿಗಳೆಡೆಯಲ್ಲಿ ಸುಳ್ಳು ಸರ್ಟಿಫಿಕೇಟ್ ತಂದಿದ್ದವರನ್ನು ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್, ವಿಭಾಗ ಮುಖ್ಯಸ್ಥರನ್ನಾಗಿ ಪ್ರತಿಷ್ಠಾಪಿಸಿದರು (ಇದರ ಬಗ್ಗೆ ಪ್ರತ್ಯೇಕ ಬಾಕ್ಸ್ ಇದೆ). ಪಾಪ ಹಳೇ ಮುತ್ತೈದೆಯಂತಿದ್ದ ರಾಮಚಂದ್ರಗೌಡರು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸುಳ್ಳು ಸರ್ಟಿಫಿಕೇಟ್ ತಂದಿದ್ದ ಡಾ.ಗಂಗಾಧರ್ ಎಂಬಾತನನ್ನು ಹಾಸನ ಮೆಡಿಕಲ್ ಕಾಲೇಜಿನ ನಿರ್ದೇಶಕನಾಗಿ ಮಾಡಿಬಿಟ್ಟರು. ಎಂಸಿಐ ಸಹಾ ಒಪ್ಪದ, ಅರ್ಹತೆಯಿಲ್ಲದ ಡಾ.ಪುಷ್ಪಾ ಸರ್ಕಾರ್‌ರನ್ನು ಇಂದಿಗೂ ಮಿಮ್ಸ್‌ನ ನಿರ್ದೇಶಕಿಯನ್ನಾಗಿಯೇ ಮುಂದುವರೆಸಿರುವುದೂ ರಾಚಂಗೌಡರ ಕೃಪಾಕಟಾಕ್ಷದಿಂದಲೇ.



ಹಾಸನ, ಮಂಡ್ಯ, ಶಿವಮೊಗ್ಗ, ರಾಯಚೂರು, ಬೆಳಗಾಂ, ಬೀದರ್ ಈ ಆರೂ ಮೆಡಿಕಲ್ ಕಾಲೇಜುಗಳ ಆಡಳಿತ ಮಂಡಳಿಗೆ ವೈದ್ಯಕೀಯ ಶಿಕ್ಷಣ ಸಚಿವರೇ ಅಧ್ಯಕ್ಷರು. ಸರಿಯಾಗಿ 22 ತಿಂಗಳುಗಳ ಕಾಲ ಈ ಆಡಳಿತವನ್ನು ನಿರಾತಂಕವಾಗಿ ನಡೆಸಿದ ಡಾ.ವಿ.ಎಸ್.ಆಚಾರ್ಯ ಎಲ್ಲಾ ಮೆಡಿಕಲ್ ಕಾಲೇಜುಗಳ ಅಧ್ವಾನಕ್ಕೆ ಕಾರಣರಾಗಿದ್ದಾರೆ. ಅವರು ಈ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವಂತಿಲ್ಲ.

ರಾಚಂಗೌ ಮೇಲೆ ಆರೋಪ ಬಂದಾಗ, ಯಡಿಯೂರಪ್ಪನವರು ಅದರ ಬಗ್ಗೆ ಗಮನ ಹರಿಸುವಂತೆ ಡಾ.ವಿ.ಎಸ್.ಆಚಾರ್ಯರಿಗೇ ಸೂಚಿಸಿದರು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅದು ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ನುಡಿದಂತೆ ಇದೆ. ಭೂಅಕ್ರಮಗಳ ಪರಿಶೀಲನೆಗೆ ಕಟ್ಟಾ ನಾಯ್ಡು, ಆರ್.ಅಶೋಕ್, ಗಣಿ ಅಕ್ರಮದ ತನಿಖೆಗೆ ರೆಡ್ಡಿಗಳು, ಲೈಂಗಿಕ ಅಕ್ರಮಗಳ ತನಿಖೆಗೆ ರೇಣುಕಾಚಾರ್ಯ, ಹಾಲಪ್ಪ ಇವರುಗಳನ್ನು ನೇಮಿಸಿದರೆ ಹೇಗೋ ಹಾಗೆ. ಯಡಿಯೂರಪ್ಪನವರು ಇಂತಹ 30 ಚಿಲ್ಲರೆ ರತ್ನಗಳನ್ನು ಇಟ್ಟುಕೊಂಡೇ ಆಡಳಿತ ನಡೆಸುತ್ತಿರುವುದು ಈ ರಾಜ್ಯದ ದುರಂತಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ರಾಮಚಂದ್ರಗೌಡರೆಂಬ ಹಾಯಲೂ, ಒದೆಯಲೂ ಶಕ್ತಿಯಿಲ್ಲದ ಮುದಿ ಮುತ್ತೈದೆಯನ್ನು ಮನೆಗೆ ಕಳಿಸಿದ ಯಡಿಯೂರಪ್ಪ ಆಚಾರ್ಯರ ಬಗ್ಗೆ ಮಾತ್ರ ಏಕೆ ಸಾಫ್ಟಾಗಿದ್ದಾರೆ ಎಂಬುದಕ್ಕೆ ಉತ್ತರ ನೀಡುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಅವರೂ ಅದರಿಂದ ತಪ್ಪಿಸಿಕೊಳ್ಳಲಾಗದು.

ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯ ಅಕ್ರಮಗಳನ್ನು ಪತ್ತೆ ಹಚ್ಚಲು ಇನ್ನಾದರೂ ನಿಷ್ಪಕ್ಷಪಾತ ತನಿಖೆಗೆ ಮುಂದಾಗಬೇಕಿದೆ. ಬಿಜೆಪಿ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗಾದರೂ ಮೂಗುದಾರ ಹಾಕುತ್ತಿರುವ ರಾಜ್ಯಪಾಲರು, ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಐ.ಎಂ.ವಿಠಲಮೂರ್ತಿಯವರಿಗೆ ಈ ನಿಟ್ಟಿನಲ್ಲಿ ನಿರ್ದೇಶನ ನೀಡಬೇಕು. ಒಂದೊಂದು ಕಾಲೇಜಿನ ಒಂದೊಂದು ಹಗರಣ ಹೊರಬೀಳುತ್ತಿದ್ದಂತೆ ಅದಕ್ಕೆ ತೇಪೆ ಕೆಲಸ ಮಾಡುವುದು, ಹೈಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಳ್ಳುವುದು ಇಷ್ಟಕ್ಕೆ ಸೀಮಿತವಾಗದೇ, ಈ ಎಲ್ಲಾ ಅಕ್ರಮಗಳ ಕುರಿತು ಸಿಬಿಐ ತನಿಖೆಯಾಗಬೇಕು. ಅದು ಮಾತ್ರ ಯಡಿಯೂರಪ್ಪನವರ ಸರ್ಕಾರದ ಪಾರದರ್ಶಕತೆಯನ್ನು ಒರೆಗೆ ಹಚ್ಚಬಲ್ಲದು.

ಮೂಲ ಕಾರ್ಖಾನೆ ಆದಿಚುಂಚನಗಿರಿ ಮಠ

ಹೊಸದಾಗಿ ಶುರುವಾದ ಮೆಡಿಕಲ್ ಕಾಲೇಜುಗಳಿಗೆ ಪಾಠ ಮಾಡಲು ಕರ್ನಾಟಕದಲ್ಲಿ ಬೋಧಕ ಅನುಭವವಿದ್ದ ವೈದ್ಯರುಗಳ ಕೊರತೆಯೇನೂ ಇರಲಿಲ್ಲ. ಹೇಳಿ ಕೇಳಿ ಇಡೀ ದೇಶದಲ್ಲಿ ಬಹಳ ಹಿಂದೆಯೇ ಸಾಕಷ್ಟು ಕ್ಯಾಪಿಟೇಷನ್ ಮೆಡಿಕಲ್ ಕಾಲೇಜುಗಳಿಗೆ ಅನುಮತಿ ನೀಡಿದ ಹೆಗ್ಗಳಿಕೆ ಈ ರಾಜ್ಯದ್ದು. ಆದರೆ ಪ್ರತೀ ಊರಿನಲ್ಲಿದ್ದ ಪ್ರಭಾವೀ ಪ್ರಾಕ್ಟೀಷನರ್‌ಗಳೇ ಆಯಾ ಮೆಡಿಕಲ್ ಕಾಲೇಜುಗಳಲ್ಲಿ ಎಲ್ಲಾ ಆಯಕಟ್ಟಿನ ಸ್ಥಾನಗಳನ್ನು ಅಲಂಕರಿಸುವಂತೆ ಆಚಾರ್ಯರ ದರ್ಬಾರು ನೋಡಿಕೊಂಡಿತು. ಅಂತಹವರಿಗೆ ವಿಭಾಗ ಮುಖ್ಯಸ್ಥ, ಸಹ ಪ್ರಾಧ್ಯಾಪಕ, ಪ್ರಾಧ್ಯಾಪಕ ಹುದ್ದೆಗಳು ಲಭಿಸಬೇಕೆಂದರೆ ಇಂತಿಷ್ಟು ವರ್ಷಗಳ ಬೋಧಕ ಅನುಭವ ಕಡ್ಡಾಯ ಎಂದು ಮೆಡಿಕಲ್ ಕೌನ್ಸಿಲ್ ನಿಯಮ ಹೇಳುತ್ತಿತ್ತು. ಅದಕ್ಕೆ ಈ

▶▶ 15

ಷ್ಣು ಇಲ್ಲದ ಹುಟ್ಟುಹಬ್ಬ ಾರತಿ ಬೇಸರಗಳು



ಬರ್ 18 ಬಂದಿದೆ.

ವರ್ಷ ಕನ್ನಡ ಚಿತ್ರರಸಿಕರ ಪಾಲಿಗೆ ಅದು ಬ್ಬ, ಆದರೆ ಈ ಬಾರಿ ಆ ಹಬ್ಬ ಬಣ್ಣ ಕಳೆದು ಯಾಕೆಂದರೆ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳ ರ್ತ್‌ಡೇ ಬಾಯ್ ಶಾಶ್ವತ ರಜೆ ಪಡೆದು ವದ ಲೋಕಕ್ಕೆ ತೆರಳಿಬಿಟ್ಟದ್ದಾರೆ.

ಗಿ ಕಳೆದ ಮೂವತ್ತೈದು ವರ್ಷಗಳಿಂದ ತಮ್ಮ ದ ನಟನ ಬರ್ತ್‌ಡೇ ಆಚರಿಸಿಕೊಂಡು, ತ್ತಾ ಬಂದವರ ಪಾಲಿಗೆ ಇದು ಬೇಸರದ ಉಳಿಯುವುದು ಸತ್ಯ...

ಇಲ್ಲದ ಭರ್ತಿ ಒಂಭತ್ತು ತಿಂಗಳು ಹೇಗೆ ದವೋ ಗೊತ್ತಿಲ್ಲ. ಈವರೆಗೂ ವಿಷ್ಣು ದ್ದಾರೆ ಅನ್ನೋ ಭಾವನೆಯಂತೂ ಯಾರಲ್ಲೂ ದಿಲ್ಲ, ಸಾಹಸಸಿಂಹ ಇಲ್ಲೇ ನಮ್ಮೊಂದಿಗೇ ರಬೇಕು ಎಂದೇ ಎಲ್ಲರೂ ಭಾವಿಸಿದ್ದಾರೆ.



ವರ್ಧನ್ ತೀರಿಹೋದ ಮೇಲೆ ಯಾರೂ ಜಯನಗರದ ಅವರ ಕಾಲಿಟ್ಟಿಲ್ಲವಂತೆ. ಬಹಳಷ್ಟು ರು ವಿಷ್ಣು ಅವರಿಗೆ ಕೊಡಬೇಕಿದ್ದ ೋಖಾ ಕೊಟ್ಟಿದ್ದಾರಂತೆ...' ಹೀಗೆ ತ್ತು ಅವರ ಕುಟುಂಬದ ಸುತ್ತ ಕಟ್ಟುಕತೆಗಳು, ಗಾಳಿಸುದ್ದಿಗಳು ವದಲ್ಲಿ ಹರಡಿವೆ. ಆದರೆ ವಿಷ್ಣು ನಿರುದ್ಧರ ಪ್ರಕಾರ ಅಂತ ಯಾವ ೂ ನಡೆದಿಲ್ಲವಂತೆ. ಸದಾ ವಿಷ್ಣು ಬಗೆ ಇರುತ್ತಿದ್ದ ಕೊಬ್ಬರಿ ಮಂಜು, ಕುಮಾರ್‌ರಂಥ ನಿರ್ಮಾಪಕರೂ ಈಗಲೂ ಬಾರಿ ವಿಷ್ಣು ಮನೆಗೆ ಭೇಟಿ ನೀಡಿ ಭಾರತಿ ಮ ವಿಚಾರಿಸಿಕೊಂಡು ಬರುತ್ತಿದ್ದಾ ಮಾನಿಗಳೂ ಕೂಡಾ 'ಸಿಂಹ'ವಿಲ್ಲದ ರುವುದನ್ನು ನಿಲ್ಲಿಸಿಲ್ಲವಂತೆ.



ನಟರಿಗೆ ನಿರ್ಮಾಪಕರು ದುಡ್ಡಿನ ಏನೇ ಮೋಸ ಮಾಡಿರಬಹುದು. ಷ್ಣು ವಿಚಾರದಲ್ಲಿ ಹಾಗಾಗಲು ಇರಲಿಲ್ಲ, ಯಾಕೆಂದರೆ ಪೈಸಾ ಾಗುವ ತನಕ ವಿಷ್ಣು ಡಬ್ಬಿಂಗ್, ಳಿಗೆ ಹಾಜರಾಗುತ್ತಲೇ ಇರಲಿಲ್ಲ. ಷ್ಣು ತಾವು ನಟಿಸಬೇಕಿದ್ದ ಏಳೆಂಟು ನಿರ್ಮಾಪಕರಿಂದ ಅಡ್ವಾನ್ಸ್ . ಆದರೆ ವಿಷ್ಣು ನಿಧನರಾದ ತಿಂಗಳ ಒಳಗಾಗಿ ೇಡಂ ಅಡ್ವಾನ್ಸ್ ನೀಡಿದ್ದ ನಿರ್ಮಾಪಕರನ್ನೆಲ್ಲಾ ವರ ದುಡ್ಡನ್ನು ಹಿಂತಿರುಗಿಸಿಬಿಟ್ಟಿದ್ದರು. ಹೀಗಾ ಸಿನ ವಿಚಾರದಲ್ಲಿ ವಿಷ್ಣು ಫ್ಯಾಮಿಲಿಗೂ ಇಂಡಸ್ಟ್ರಿ ದು-ಕೊಳ್ಳುವ ವ್ಯವಹಾರವೆಲ್ಲ ಮುಗಿದಿದೆ.

ದುವೆ ವಿಷ್ಣು ಹೆಸರನ್ನು ಚಿರಸ್ಥಾಯಿಯಾಗಿಸಲು ಕುಟುಂಬದ ಸದಸ್ಯರು ಹಲವಾರು ಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. 'ವಿಭಾ ರತಿ) ಚಾರಿಟಬಲ್ ಟ್ರಸ್ಟ್' ಮುಖಾಂತರ ಸಕೆಗಳನ್ನು ಈಡೇರಿಸುವ ಪ್ರಯತ್ನದಲ್ಲಿದ್ದಾರೆ.

18ರಂದು ಅಭಿಮಾನ್ ಸ್ಟುಡಿಯೋದಲ್ಲಿರುವ ಮಾಧಿಯ ಬಳಿ ರಕ್ತದಾನ, ನೇತ್ರದಾನ, ಅನ್ನ ಗಳು ನಡೆಯಲಿವೆಯಂತೆ. ನೂರಾರು ಬಡ ಗಳಿಗೆ ಭಾರತಿ ಸ್ವತಃ ತಮ್ಮ ಕೈಯಿಂದಲೇ ಟ್ಟೆಗಳನ್ನು ನೀಡುತ್ತಾರಂತೆ. ಈ ಎಲ್ಲದಕ್ಕೂ ಪೂರ್ವಕ ದಾನಿಗಳು ಸಹಾಯ ಮಾಡುತ್ತಿದ್ದಾರೆ.

ದಿನ ಬೆಂಗಳೂರಿನ ಐನಾಕ್ಸ್, ಗರುಡಾಮಾಲ್, ಸಣ್ಣ ಚಿತ್ರಮಂದಿರಗಳಲ್ಲಿ ಚಿತ್ರೋತ್ಸವವನ್ನು ವಿಷ್ಣು ನಟಿಸಿದ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದಾರೆ.

ಸಿದ್ಧಗೊಳ್ಳದ ಸಮಾಧಿ

ಸರ್ಕಾರಗಳು ಎಂಥ ಮಹಾನ್ ನಟರಾದರೂ ವಂತ ಇರುವ ತನಕ ಮಾತ್ರ ಬೆಲೆ ಕೊಡುತ್ತವೆ ಸತತ ಎರಡನೇ ಬಾರಿಯೂ ಸಾಬೀತಾಗಿದೆ. ಕುಮಾರ್ ಸಮಾಧಿ ಸಂಬಂಧ ಎರಡೆರಡು ು ನಿರ್ಲಕ್ಷ್ಯ ಭಾವನೆ ತೋರಿದಂತೇ ವಿಷ್ಣು ವಿಚಾರದಲ್ಲೂ ವಿಳಂಬ ನಡೆಯುತ್ತಿದೆ. ಡಾ.

• ಅರುಣ್ ಕುಮಾರ್.ಜಿ
arunodayagc@gmail.com

ರಾಜ್‌ಕುಮಾರ್ ಸಮಾಧಿಯ ಜಾಗವಂತೂ ಕಂಠೀರವ ಟ್ರಸ್ಟ್‌ಗೆ ಸೇರಿತ್ತಾದ್ದರಿಂದ ಅದನ್ನು ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಳ್ಳುವುದಕ್ಕೆ ಸಮಯ ಬೇಕಾಯಿತು. ಆದರೆ ವಿಷ್ಣು ಸಮಾಧಿಯಿರುವ ಸ್ಥಳ ದಿವಂಗತ ನಟ ಬಾಲಣ್ಣನವರ ಮಗನ ಹೆಸರಿನಲ್ಲಿದೆ. ಸರ್ಕಾರ ಆ ಸ್ಥಳವನ್ನು ಪಡೆದು ಈ ಹೊತ್ತಿಗಾಗಲೇ ವಿಷ್ಣು ಸ್ಮಾರಕ ನಿರ್ಮಿಸ ಬೇಕಿತ್ತು. ಈ ಸಂಬಂಧ ವಿಷ್ಣು ಕುಟುಂಬದವರು ಮೇಲಿಂದ ಮೇಲೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಲೇ ಬಂದಿದ್ದಾರೆ. ಆದರೂ ಇನ್ನೂ ಸಮಾಧಿ ನಿರ್ಮಾಣ ಪ್ರಕ್ರಿಯೆಗೆ ಚಾಲನೆ ದೊರಕಿಲ್ಲ.

ರಕ್ಷಕನ ವಿರುದ್ಧ ಮುನಿಸು!

ಅದೇನೋ ಗೊತ್ತಿಲ್ಲ 'ಆಪ್ತರಕ್ಷಕ' ಬಿಡುಗಡೆಯಾದ ದಿನದಿಂದಲೂ ಆ ಚಿತ್ರದ ನಿರ್ಮಾಪಕ ಮತ್ತು ಭಾರತಿ ವಿಷ್ಣುವರ್ಧನ್ ನಡುವೆ ಶೀತಲ ಸಮರ ನಡೆಯುತ್ತಲೇ ಇದೆ. 'ಸಿನಿಮಾ ಬಿಡುಗಡೆ ಸಮಯದಲ್ಲಿ ನಮಗೆ ಸರಿಯಾಗಿ ತಿಳಿಸಲಿಲ್ಲ, ನಮ್ಮ ಕುಟುಂಬದವರಿಗಾಗಿ ಪ್ರದರ್ಶನವನ್ನೂ ಏರ್ಪಡಿಸಲಿಲ್ಲ' ಎಂದು ನಿರ್ಮಾಪಕ ಕೃಷ್ಣಕುಮಾರ್ ವಿರುದ್ಧ ಭಾರತಿ ಮೇಡಂ ಅಸಹನೆ ವ್ಯಕ್ತಪಡಿಸಿದ್ದರು. ಈಗ 'ಆಪ್ತರಕ್ಷಕ' ಚಿತ್ರದ ಸಿಲ್ವರ್ ಜ್ಯೂಬಿಲಿ ಸಮಾರಂಭದಲ್ಲೂ ಮತ್ತೆ ಅಸಮಾಧಾನ ಭುಗಿಲೆದ್ದಿದೆ.



ಈ ತಿಂಗಳ 10 ಮತ್ತು 18 ರಂದು ಮಾತ್ರ ಕಂಠೀರವ ಸ್ಟೇಡಿಯಂನಲ್ಲಿ ಸಮಾರಂಭ ನಡೆಸಲು ನಿರ್ಮಾಪಕ ಕೆ.ಕೆ.ಗೆ ಅನುಮತಿ ದೊರೆತಿತ್ತಂತೆ. ಸೆಪ್ಟೆಂಬರ್ 10ರಂದು ಚಿತ್ರದ ನಿರ್ದೇಶಕ ಗುರುಕಿರಣ್ ಸೇರಿದಂತೆ ಒಂದಷ್ಟು ಜನ ಕಲಾವಿದರು ಅಮೆರಿಕಾದ ಅಕ್ಕ ಸಮ್ಮೇಳನಕ್ಕೆ ತೆರಳಿದ್ದರಿಂದ ಸಮಾರಂಭವನ್ನು 18ನೇ ತಾರೀಖಿಗೆ ಮುಂದೂಡಿದರಂತೆ. ಈ ವಿಚಾರವನ್ನು ಭಾರತಿಯವರಿಗೆ ತಿಳಿಸಿದಾಗ 'ಡಿಸೆಂಬರ್ 31ರಂದು ಸಮಾರಂಭ ಮಾಡಿದರೆ ನಾನು ಬರ್ತೀನಿ. ಇಲ್ಲದಿದ್ದರೆ ಬರೋದಿಲ್ಲ. ನಾನು 18ರಂದು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇನೆ' ಎಂದು ಕೃಷ್ಣಕುಮಾರ್‌ಗೆ ಹೇಳಿದರಂತೆ. ಅದಕ್ಕೆ ಕೆ.ಕೆ. 'ನೀವು ನಿಮ್ಮ ಕಾರ್ಯಕ್ರಮಗಳನ್ನು ಬೇಕಿದ್ದರೆ ಡಿಸೆಂಬರ್ 31ಕ್ಕೆ ಮುಂದೂಡಿಕೊಳ್ಳಿ. ಅದು ಹೊಂದಿಕೆಯೂ ಆಗುತ್ತದೆ. ಆದರೆ ಸಿನಿಮಾದ 250ನೇ ದಿನವನ್ನು ನಾನು ಡಿಸೆಂಬರ್ 31ರ ತನಕ ಮುಂದೂಡಿದರೆ ಅದು ಸರಿಯಾಗುವುದಿಲ್ಲ. ನಿಮ್ಮೊಬ್ಬರ ಕಾರಣಕ್ಕೆ ಸಮಾರಂಭವನ್ನು ಪೋಸ್ಟ್‌ಪೋನ್ ಅಥವಾ ಪ್ರೀ ಪೋನ್ ಮಾಡಲು ಸಾಧ್ಯವೇ ಇಲ್ಲ' ಎಂದರಂತೆ. ಹೀಗಾಗಿ ಇವರಿಬ್ಬರ ನಡುವಿನ ಮುನಿಸು ಇನ್ನೂ ಹಲವಾರು ತಿರುವು ಪಡೆದು ವಿಷ್ಣು ಅವರ ಆಪ್ತರೆಲ್ಲಾ '250ನೇ ದಿನದ ಸಮಾರಂಭಕ್ಕೆ ಹೋಗಬಾರದು' ಎಂದು ಸಾಮೂಹಿಕವಾಗಿ ತೀರ್ಮಾನ ಕೈಗೊಂಡಿದ್ದಾರೆ.

'ಆಪ್ತರಕ್ಷಕ ಚಿತ್ರವನ್ನು ಥಿಯೇಟರ್‌ನಿಂದ ತೆಗೆದು ಆಗಲೇ ಎರಡು ತಿಂಗಳು ಕಳೆದಿವೆ. ನಾನು ಈ ಸಮಾರಂಭವನ್ನು ಮಾಡುವ ಅಗತ್ಯವೇ ಇಲ್ಲ. ಆದರೂ ವಿಷ್ಣು ಅವರ ಮೇಲಿನ ಅಭಿಮಾನ ಮತ್ತು ನಮ್ಮ ಚಿತ್ರ ಸೂಪರ್ ಹಿಟ್ ಆದ ಸಂತೋಷಕ್ಕೆ ನಾನು ಈ ಸಮಾರಂಭವನ್ನು ಮಾಡುತ್ತಿದ್ದೇನೆ. ಇದಕ್ಕಾಗಿ ಮೂವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇನೆ. ಇದರಿಂದ ಮೂವತ್ತು ಸಾವಿರ ರೂಪಾಯಿ ಕೂಡಾ ನನಗೆ ವಾಪಾಸು ಬರುವುದಿಲ್ಲ. ವಿಷ್ಣು ಇದ್ದಿದ್ದರೆ ಈ ಕಾರ್ಯಕ್ರಮದ ಚಾನಲ್ ರೈಟ್ಸ್, ಸ್ಪಾನ್ಸರ್‌ಶಿಪ್‌ಗಳು ಹೇರಳವಾಗಿ ದೊರಕುತ್ತಿದ್ದವು. ಆದರೆ ಈಗ ವಿಷ್ಣು ಅವರ ಅನುಪಸ್ಥಿತಿಯಲ್ಲಿ ಯಾವ ಚಾನೆಲ್‌ಗಳೂ, ಪ್ರಾಯೋಜಕರೂ ಸಿಕ್ಕಿಲ್ಲ. ಇದನ್ನೆಲ್ಲಾ ಭಾರತಿಯವರು ಅರ್ಥ ಮಾಡಿಕೊಳ್ಳಬೇಕು. ಕಾರಣವಿಲ್ಲದೇ ನನ್ನ ವಿರುದ್ಧ ಮುನಿಸಿಕೊಳ್ಳುವುದು ತರವಲ್ಲ' ಎಂದು ಕೃಷ್ಣಕುಮಾರ್ ಗುಟುರು ಹಾಕುತ್ತಿದ್ದಾರೆ.





ಮಾಯಿ ಮನಸ್ಥಿತಿಗೆ ಯಾರೂ ಒಗ್ಗುತ್ತಿಲ್ಲ...!

ಯಾವುದೇ ಒಂದು ವಿಚಾರ ತೀರ್ಮಾನ ಮಾಡಲು ವಿಷ್ಣು ಭಾರತಿಯವರ ಬಳಿ 'ಮಾಯಿ ಏನು ಮಾಡುವುದು' ಎಂದು ಕೇಳಿಯೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು.




ಆದರೆ ವಿಷ್ಣು ಇದ್ದಾಗ ಜನ ಭಾರತಿಯವರೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿಗೂ ಈಗಿನದ್ದಕ್ಕೂ ಒಂದಷ್ಟು ವ್ಯತ್ಯಾಸವಾಗಿರುವುದು ನಿಜ. ವಿಷ್ಣು ಹೇಳಿದ ಎಲ್ಲದಕ್ಕೂ 'ಜೀ-ಹುಜೂರ್' ಎಂದುಕೊಂಡಿದ್ದ ನಿರ್ಮಾಪಕ ಕೃಷ್ಣಕುಮಾರ್ ಈಗ ಭಾರತಿಯವರ ತೀರ್ಮಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ವಿಷ್ಣು ಅವರ ಸಿನಿಮಾ ಬದುಕಿನ ಉದ್ದಕ್ಕೂ ಸರಸ-ವಿರಸದಲ್ಲೇ ಕಾಲ ಕಳೆದ ಕುಳ್ಳ ದ್ವಾರಕೀಶ್ 'ವಿಷ್ಣುವರ್ಧನ್' ಹೆಸರನ್ನು ವ್ಯಾಪಾರಕ್ಕಿಡುವ ಉದ್ದೇಶದಿಂದ ಅದನ್ನೇ ತಮ್ಮ ಚಿತ್ರದ ಹೆಸರನ್ನಾಗಿಸುವ ಪ್ರಯತ್ನಕ್ಕೆ ಮುಂದಾದರು. ಈ ಸಂದರ್ಭದಲ್ಲಿ 'ನನ್ನ ಗಂಡ ಬದುಕಿದ್ದಾಗ ಹೆಜ್ಜೆಹೆಜ್ಜೆಗೂ ಅವರನ್ನು ಅವಮಾನ ಮಾಡಿದ, ಅವರ ಬಗ್ಗೆ ವ್ಯವಸ್ಥಿತವಾಗಿ ಅಪಪ್ರಚಾರ ಮಾಡಿದ ಈ ದ್ವಾರಕೀಶ್‌ಗೆ ನಾನ್ಯಾಕೆ ಚಿತ್ರ ಮಾಡಲು ಅನುಮತಿ ನೀಡಬೇಕು?' ಭಾರತಿ ಅವರು ವ್ಯಗ್ರವಾಗಿ ಮಾತಾಡಿದ್ದರು. ಈ ಎಲ್ಲಾ ಘಟನೆಗಳು ಭಾರತಿಯವರನ್ನು ಮಾನಸಿಕವಾಗಿ ಕೆರಳಿಸಿದ್ದರೆ ಸಂಶಯವಿಲ್ಲ.

ಹೀಗೆ ವಿಷ್ಣು ಹೋದ ಬಳಿಕ ತಮ್ಮ ಸುತ್ತ ಇದ್ದವರ ನಡವಳಿಕೆಗಳು ಬದಲಾಗಿರುವುದರಿಂದಲೋ ಅಥವಾ ತನ್ನ ಯಜಮಾನ ಇದ್ದಕ್ಕಿದ್ದ ಹಾಗೆ ಮರೆಯಾಗಿದ್ದರಿಂದಲೋ ಭಾರತಿಯವರು ಸಿಕ್ಕಾಪಟ್ಟೆ ಬೇಸರಗೊಂಡಿದ್ದಾರೆ; ಅದು ಸಹಜವೂ ಹೌದು.

ಈ ಎಲ್ಲ ಸಿಟ್ಟು ಸೆಡವುಗಳಿಂದ ಭಾರತಿಯವರು ಆದಷ್ಟು ಬೇಗ ಹೊರಬರಲಿ. ಖಾಲಿ ಮುನಿಸುಗಳಿಂದ ಏನೂ ಸಾಧಿಸಲಾಗುವುದಿಲ್ಲ ಮತ್ತು ಸತ್ತವರ ಆತ್ಮಕ್ಕೆ ಶಾಂತಿಯೂ ದೊರಕುವುದಿಲ್ಲ, ಅಲ್ಲವೆ?

ನರ್ಸ್ ರೇಣುಕನಿಗೆ ಗಂಟುಬಿದ್ದ 'ಅಕ್ಕ'



ಅಮೆರಿಕಾದಲ್ಲಿರುವ 'ಅಕ್ಕ' ಸಂಘಟನೆಯವರ ತಲೆಗೆ ಏಟು ಬಿದ್ದಿರಬಹುದಾ?

ಇಂಥದ್ದೊಂದು ಡೌಟು ಯಾಕೆ ಬರುತ್ತದೆಯೆಂದರೆ ಕಳೆದ ವಾರ ನ್ಯೂಜೆರ್ಸಿಯಲ್ಲಿ ನಡೆದ 6ನೇ ವಿಶ್ವ ಕನ್ನಡಿಗರ 'ಅಕ್ಕ' ಸಮ್ಮೇಳನದಲ್ಲಿ ಕರ್ನಾಟಕದ ಕುಪ್ರಸಿದ್ಧ ರಾಜಕಾರಣಿ ರೇಣುಕಾಚಾರ್ಯ ಅಲಿಯಾಸ್ ನರ್ಸ್ ರೇಣುಕನೇ ಚೀಫ್ ಗೆಸ್ಟು!

ಇದಕ್ಕೆ ಪ್ರತ್ಯುಪಕಾರವೆಂಬಂತೆ ನರ್ಸ್ ರೇಣುಕ ಹತ್ತಿರತ್ತಿರ ನಲವತ್ತು ಲಕ್ಷ ರೂಪಾಯಿಗಳಷ್ಟು ಜನರ ದುಡ್ಡನ್ನು 'ಅಕ್ಕ' ಗುಂಪಿಗೆ ಕೊಡಿಸಿ ಪುಣ್ಯ ಕಟ್ಟಿಕೊಂಡಿದ್ದಾನೆ.

ಈ ಹಣ ಯಾವುದು ಗೊತ್ತೇ?

ಹಟ್ಟಿ ಚಿನ್ನದ ಗಣಿ ನಿಗಮದ್ದು 16 ಲಕ್ಷ!

ಕರ್ನಾಟಕ ಪಾನೀಯ ನಿಗಮದಿಂದ 20 ಲಕ್ಷ!!

ಈ ಹಣ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿರುವ 40 ಲಕ್ಷ ರೂ. ಕೈಗಾರಿಕಾ ನಿಗಮದಿಂದ ನೀಡಲಾದ 10 ಲಕ್ಷ ರೂ.ಗಳಿಗೆ ಹೊರತಾದ ಮೊತ್ತ. ಅಸಲಿಗೆ ಇಲ್ಲಿ ಕೇಳಬೇಕಾದ ಪ್ರಶ್ನೆ ಏನೆಂದರೆ ಹಟ್ಟಿ ನಿಗಮಕ್ಕೂ, ಪಾನೀಯ ನಿಗಮಕ್ಕೂ, ಅಮೆರಿಕಾದ 'ಅಕ್ಕ'ದವರಿಗೂ ಯಾವ ಬಾದರಾಯಣ ಸಂಬಂಧ?

ಅದಕ್ಕಿಂತ ಮುಖ್ಯ ಪ್ರಶ್ನೆ ಏನೆಂದರೆ ಕರ್ನಾಟಕ ಪರಂಪರೆ, ಕನ್ನಡ ಸಂಸ್ಕೃತಿಗೂ ಮತ್ತು ರೇಣುಕನಿಗೂ ಎಲ್ಲಿದೆ ಸಂಬಂಧ?

ಇದ್ಯಾವುಗಳಿಗೂ ಒಂದಕ್ಕೊಂದು ಸಂಬಂಧವಿಲ್ಲ ಎಂಬುದೇನೋ ಖರೆ, ಆದರೆ 'ಅಕ್ಕ' ಗ್ಯಾಂಗಿಗೂ ನರ್ಸ್ ರೇಣುಕನಿಗೂ ಏನೋ ಸಂಬಂಧವಿರುವುದಂತೂ ಗ್ಯಾರಂಟಿ. ಇಲ್ಲದಿದ್ದರೆ ಈ ರೇಣುಕನೇಕೆ ಅವರಿಗೆ ಹಣ ಕೊಡಿಸುತ್ತಿದ್ದ? 'ಅಕ್ಕ'ಗಳೇಕೆ ರೇಣುಕನನ್ನು ಕರೆಸಿ ಸನ್ಮಾನ ಮಾಡಬೇಕಿತ್ತು ಹೇಳಿ?

ಈ ರೇಣುಕನ ಕತೆ ಒಂದಾದರೆ ಇಲ್ಲಿಂದ ನ್ಯೂಜೆರ್ಸಿತನಕ ಹೋಗಿದ್ದ ನಾಡಿನ ಕಲಾವಿದರಿಗೆ, ಸಾಹಿತಿ ಹಾಗೂ ಕೆಲ ಉನ್ನತಾಧಿಕಾರಿಗಳಿಗೆ 'ಅಕ್ಕ'ಗಳು ತಿನ್ನಲು ಊಟ ಕೊಡದೆ, ಉಳಿಯಲು ಸ್ಥಳವನ್ನು ತೋರಿಸದೆ 'ಭವತಿ ಭಿಕ್ಷಾಂದೇಹಿ' ಸ್ಥಿತಿಗೆ ದೂಡಿದ್ದು ಇನ್ನೊಂದು ಕತೆಯಾಗಿ ಹೋಗಿದೆ. ಇವರೆಲ್ಲಾ ಕರ್ನಾಟಕ ಸರ್ಕಾರದ ಅಧಿಕೃತ ನಿಯೋಗದಲ್ಲಿದ್ದವರೆ, ಜೊತೆಗೆ ಇವರೆಲ್ಲರ ಪ್ರಯಾಣ ವೆಚ್ಚ-ಊಟ-ವಸತಿಗೆಂದು ಹಾಗೂ ಸಮ್ಮೇಳನಕ್ಕೆ ಧನಸಹಾಯವೆಂದು ಸರ್ಕಾರವೇ ಒಂದು ಕೋಟಿ ರೂಪಾಯಿ ನೀಡಿತ್ತು, ಆದರೇನು 'ಕೊಟ್ಟೋನು ಕೋಡಂಗಿ, ಈಸ್ಕೊಂಡೋನು ಈರಭದ್ರ' ಎನ್ನುವಂತೆ 'ಅಕ್ಕ'ಗಳು ಕೈಕೊಟ್ಟುಬಿಟ್ಟರು.

ಈಗ್ಗೆ ಹನ್ನೆರಡು ವರ್ಷಗಳ ಹಿಂದೆ ಅರಿಜೋನಾ ರಾಜ್ಯದ ಫೀನಿಕ್ಸ್ ಪಟ್ಟಣದಲ್ಲಿ 'ಅಕ್ಕ' ಜನ್ಮತಾಳಿತ್ತು

ಅಮೆರಿಕಾದ ಉದ್ದಗಲಕ್ಕೂ, ಅಂದಾಜು 60 ಸಾವಿರದಷ್ಟು ಕರ್ನಾಟಕದವರಿದ್ದಾರೆ. ಇವರೆಲ್ಲಾ ತಮ್ಮ ತಮ್ಮ ಊರು-ಕೇರಿಗಳಲ್ಲಿ ತರಹೇವಾರಿ ಹೆಸರಿನ ಕನ್ನಡ ಕೂಟಗಳನ್ನು ಕಟ್ಟಿಕೊಂಡಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮ, ಸೋಶಿಯಲ್ ಗ್ಯಾದರಿಂಗ್ ತರದ ಈ ಸಂಘಟನೆಗಳು ದೂರದೇಶದಲ್ಲಿರುವ ಕನ್ನಡಿಗರಲ್ಲಿ ತವರುನೆಲದ ನೆನಪಿನ ಹಂಬಲವನ್ನು ಒಂದಷ್ಟು ತಣಿಸುತ್ತಿದ್ದುದು ನಿಜ. ನಂತರ ಈ ಕೂಟಗಳೆಲ್ಲ ಸೇರಿ ಒಂದು ಅಂಬ್ರೆಲಾ ಆರ್ಗನೈಜೇಷನ್ ರೀತಿ 'ಅಕ್ಕ' (ಅಮೆರಿಕಾ ಕನ್ನಡ ಕೂಟಗಳ ಆಗರ) ಆಯಿತು. ಅಲ್ಲಿಂದಾಚೆಗೆ ಎರಡು ವರ್ಷಕ್ಕೊಮ್ಮೆ ಎಂಬಂತೆ 'ಅಕ್ಕ' ಸಮಾವೇಶಗಳು ನಡೆಯಲಾರಂಭಿಸಿವೆ. ಇತ್ತೀಚಿನ ವರ್ಷಗಳಲ್ಲಂತೂ ಕರ್ನಾಟಕದಿಂದ 'ಅಕ್ಕ' ಸಮ್ಮೇಳನಕ್ಕೆ ಹೋಗಿಬರುವುದೇ ಒಂದು ಪ್ರತಿಷ್ಠೆಯ ವಿಷಯವಾಗಿಬಿಟ್ಟಿದೆ. ಆದರೆ ಮೊದಮೊದಲು ಇಲ್ಲಿಂದ ಅಮೆರಿಕಾಕ್ಕೆ ಹೋದ ಗಣ್ಯರು, ಸಾಹಿತಿ, ಕಲಾವಿದರ ವಸತಿ ಮತ್ತು ಖರ್ಚುಗಳನ್ನೆಲ್ಲ ಅಮೆರಿಕಾ ಕನ್ನಡಿಗರೇ ಭರಿಸುತ್ತಿದ್ದರು. ಆದರೆ ಈಗ ರೇಣುಕಾಚಾರಿ ತರಹದವರಿಗೆ ಆಹ್ವಾನ ಬರುತ್ತಿದೆ. ಇಲ್ಲಿನ ಸರ್ಕಾರದಿಂದ ಹಣ ಕೀಳುವ ಉಪಾಯವೂ ಅಕ್ಕಾಗೆ ಸಿದ್ಧಿಸಿದೆ. ಮೊನ್ನೆಯ ಸಮಾವೇಶಕ್ಕೆ 'ಅಕ್ಕ'ಗಳು ಖರ್ಚು ಮಾಡಿರುವುದು ಒಟ್ಟು 8 ಕೋಟಿ ರೂಪಾಯಿಗಳು. ಡಾಲರ್ ಲೆಕ್ಕದಲ್ಲಿ ಇದು 16 ಲಕ್ಷ ಡಾಲರ್‌ಗಳಾಗುತ್ತದೆ. ಇವರು ಕರ್ನಾಟಕ ಸರ್ಕಾರದಿಂದ 2 ಕೋಟಿ ರೂಪಾಯಿ ಕೇಳಿದ್ದರಂತೆ!

ಜಾತಿ ಜಗಳ ಇತ್ಯಾದಿ


ಅಮೆರಿಕಾ ಕನ್ನಡಿಗರೆಲ್ಲಾ ವಿವಿಧ ಕನ್ನಡ ಸಂಘಗಳನ್ನು ಕಟ್ಟಿಕೊಂಡಿದ್ದರೂ ಅದಕ್ಕೆ ಪರ್ಯಾಯವಾಗಿ ತಂತಮ್ಮ ಜಾತಿ ಸಂಘಗಳನ್ನೂ ಕಟ್ಟಿಕೊಳ್ಳುತ್ತಿದ್ದಾರೆ. ಒಕ್ಕಲಿಗ ಸಮಾಜ ಆಫ್ ಅಮೆರಿಕಾ, ವೀರಶೈವ ಮಹಾಸಭಾ ಆಫ್ ಅಮೆರಿಕಾ.. ಮುಂತಾದ ಜಾತಿ ಗುಂಪುಗಳು ಈಗಾಗಲೇ ತಲೆಯೆತ್ತಿವೆ. ಈ ಜಾತಿರೋಗಕ್ಕೆ ಮದ್ದಿಲ್ಲ ಬಿಡಿ. ಆದರೆ ಇದುವರೆಗೂ ಒಗ್ಗಟ್ಟಾಗಿದ್ದ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿದ್ದಾಗಲೂ ಜೊತೆಗಿರುತ್ತಿದ್ದ 'ಅಕ್ಕ' ಈಗ ಜನತಾ ದಳವಾಗಿದೆ.



ಅಂದರೆ ಒಡೆದು ಹೋಳಾಗಿದೆ.

ಒಂದು 'ಅಕ್ಕ'ನಾಗೇ ಉಳಿದರೆ ಒಡೆದ ಗುಂಪು 'ನಾವಿಕ' ಎನಿಸಿಕೊಂಡಿದೆ. ಅಮೆರಿಕನ್ನಡಿಗರ ಪ್ರಕಾರ 'ಅಕ್ಕ' ಒಕ್ಕಲಿಗರ ಹತೋಟಿಯಲ್ಲಿರುವ ಸಂಘವಾದರೆ 'ನಾವಿಕ' ಲಿಂಗಾಯತ ಹಾಗೂ ಬ್ರಾಹ್ಮಣರ ಗುಂಪಂತೆ. ಈ 'ನಾವಿಕ'ದ ಅಂಬಿಗರಾಗಲು ಈಗ ಡಾ. ಶ್ರೀ ಅಯ್ಯಂಗಾರ್, ವಲ್ಲೀಶ ಶಾಸ್ತ್ರಿ ಡಾ.ಕೇಶವ ರಾವ್ ಮುಂತಾದವರು ಹೊರಟು ನಿಂತಿದ್ದಾರೆ. ಮತ್ತೊಂದೆಡೆ 'ಅಕ್ಕ'ನನ್ನ ಡಾ. ಅಮರನಾಥ್ ಗೌಡ ಮುನ್ನಡೆಸುತ್ತಿದ್ದಾರೆ. ಇವರೆಲ್ಲರಿಗೂ ಇರುವ ಇನ್ನೊಂದು ಕಾಯಿಲೆಯೆಂದರೆ ಮೇಲ್ಜಾತಿ ಅಹಂ. ಈ ಬಾರಿಯ 'ಅಕ್ಕ' ಸಮಾವೇಶ ಅದಕ್ಕೆ ಸಾಕ್ಷಿಯಾಯಿತು.

6ನೇ 'ಅಕ್ಕ' ಸಮ್ಮೇಳನವನ್ನು ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥರ ಕೈಲಿ ಉದ್ಘಾಟನೆ ಮಾಡಿಸಲಾಗಿದೆ. ಜೊತೆಗೆ ವೇದ ಮಂತ್ರಗಳ ಉದ್ಘೋಷ... ಪೂಜೆ ಎಲ್ಲಾ ಇದ್ದವು. ವೇದಗಳು ಬ್ರಾಹ್ಮಣರಿಗೆ ಬಿಟ್ಟರೆ ಉಳಿದವರಿಗೆ ಪವಿತ್ರವೇನಲ್ಲ, ಹಾಗಿದ್ದ ಮೇಲೆ ಬ್ರಾಹ್ಮಣೇತರ ಕನ್ನಡಿಗರ ಮೇಲೇಕೆ ವೇದವನ್ನು ಹೇರಬೇಕು ಎಂದು 'ಅಕ್ಕ'ದೊಳಗೆ ವಿವಾದಗಳಾಗಿವೆ. ತಮಾಷೆಯ ಸಂಗತಿ ಏನೆಂದರೆ ಸಮಾವೇಶ ಉದ್ಘಾಟಿಸಿದ ಪುತ್ತಿಗೆ ಶ್ರೀಗಳು 'ಸಾಗರೋಲ್ಲಂಘನೆ ಮಾಡಿದ ವಿಶ್ವದ ಮೊದಲ ವ್ಯಕ್ತಿ ಒಬ್ಬ ಕನ್ನಡಿಗ' ಎಂದಿದ್ದು.



ಆತ ವಾಯುಪುತ್ರ ಹನುಮಂತನಂತೆ!

ಶ್ರೀಗಳ ಈ ಅಮೋಘ ಸಂಶೋಧನೆಯನ್ನು ಕೇಳಿ 'ಅಕ್ಕ'ಗಳೆಲ್ಲಾ ಥ್ರಿಲ್ ಆದರಂತೆ. ದೊಡ್ಡ ದೊಡ್ಡ ಡಿಗ್ರಿಗಳನ್ನು ಪಡೆದು ಅಮೆರಿಕದಲ್ಲಿರುವ ಇವರ ಐಕ್ಯೂ ಲೆವೆಲ್ ಅನ್ನು ಇದು ತೋರಿಸುತ್ತಿರಬಹುದಲ್ಲವೇ?

ಲೆಕ್ಕಾ-ಬುಕ್ಕು ಏನಾದರು ಇದೆಯಾ?

'ಅಕ್ಕ'ಗಳು ಈ ಹಿಂದೆಯೂ ಕರ್ನಾಟಕ ಸರ್ಕಾರದಿಂದ ಧನಸಹಾಯ ಪಡೆದಿದ್ದಾರೆ. ಆದರೆ ಪಡೆದ ಹಣ, ಖರ್ಚಾದ ಹಣದ ಲೆಕ್ಕ ಕೊಟ್ಟ ಬಗ್ಗೆ ದಾಖಲೆಗಳಿದ್ದಾವ ಅಂತ ನೋಡಿದರೆ ಯಾರಿಗೂ ಮಾಹಿತಿಯಿಲ್ಲ, ಈ ಬಾರಿಯೂ ಅದೇ ಕತೆ ಪುನರಾವರ್ತನೆಯಾದರೆ ಆಶ್ಚರ್ಯವಿಲ್ಲ, ಒಟ್ಟು 8 ಕೋಟಿ ರೂಪಾಯಿ ಬಜೆಟ್‌ನ ಈ ಸಮಾವೇಶದ ಪ್ರತಿನಿಧಿ ಶುಲ್ಕದ ವಸೂಲಿಯಂತೂ ಯಾವುದೇ **consumer fair**ನ ವಹಿವಾಟನಂತೆ ಭಾಸವಾಗುತ್ತದೆ. ಸೆಪ್ಟೆಂಬರ್ ಮೊದಲ ವಾರದಲ್ಲಿ ನಡೆದ ಸಮ್ಮೇಳನಕ್ಕೆ ಜೂನ್‌ನಲ್ಲೇ ಬುಕ್ಕಿಂಗ್ ಮಾಡಿಸಿದವರಿಗೆ 125 ಡಾಲರ್, ಜುಲೈ ಅಂತ್ಯವಾದರೆ 175, ಸೆಪ್ಟೆಂಬರ್‌ನಲ್ಲಾದರೆ 225 ಡಾಲರ್ ರೇಟ್ ಇತ್ತು. ಜೊತೆಗೆ ಬ್ಯುಸಿನೆಸ್ ಫೋರಂಗೆ, ಸೌಂದರ್ಯ ಸ್ಪರ್ಧೆಗೆ ಸಪರೇಟು ಶುಲ್ಕಗಳು! ಭಾಗವಹಿಸಿದ್ದವರು ನಾಲ್ಕು ಸಾವಿರ ಜನ ಅಂತ ಲೆಕ್ಕ ಹಾಕಿದರೆ ಸರ್ಕಾರದ ನೆರವು, ಪ್ರತಿನಿಧಿ ಶುಲ್ಕ ಇತ್ಯಾದಿಗಳಿಂದ ಸಂಗ್ರಹವಾದ ಹಣ 5 ಕೋಟಿ ದಾಟುವುದಿಲ್ಲ, ಅಂದರೆ ಬರೋಬ್ಬರಿ 3 ಕೋಟಿ ರೂ.ಗಳಷ್ಟು ನಷ್ಟದ ಸಮ್ಮೇಳನ ಇದು. ಆದರೆ ಇವರೇಕೆ ಕೋಟಿಗಟ್ಟಲೆ ಹಣ ನಷ್ಟ ಮಾಡಿಕೊಂಡು ಸಮ್ಮೇಳನ ನಡೆಸುತ್ತಿದ್ದಾರೆ? ಅಥವಾ ಅಂದಾಜು ವೆಚ್ಚ 8 ಕೋಟಿ ರೂ. ಅಂತ ಹೇಳುತ್ತಿರುವುದೇ ಉತ್ಪ್ರೇಕ್ಷೆಯಿರಬಹುದಾ?

ತಾಯಿ ಭುವನೇಶ್ವರಿಯೇ ಹೇಳಬೇಕು.

ಈ ಸಮ್ಮೇಳನದ ಪ್ರತಿನಿಧಿಯೊಬ್ಬ "ನಮ್ಮ ಮಕ್ಕಳು ಸಾಲಿಗ್ರಾಮ ಅಂದರೇನು? ಗಾಯಿತ್ರಿ ಮಂತ್ರ ಅಂದರೇನು? ಅಂತ ಕೇಳುತ್ತಿರುತ್ತಾರೆ. ಈ ತರದ ಸಮಾವೇಶಗಳಿಂದ ಮಕ್ಕಳಿಗೂ ನಮ್ಮ ಸಂಸ್ಕೃತಿಯ ಬಗ್ಗೆ ಅರಿವಾಗುತ್ತದೆ" ಎಂದಿದ್ದಾರೆ.

ಇದಲ್ಲವಾ ತಮಾಷೆ!

ಇದಲ್ಲದೆ ಆರೆಸ್ಸೆಸ್ ಹೈದ ರವಿಶಂಕರನ ಆರ್ಟ್ ಆಫ್ ಲೀವಿಂಗ್‌ನ ಸೂರ್ಯಪಾದ ಅಲ್ಲಿಗೆ ಆಹ್ವಾನಿತರಾಗಿದ್ದರು. ಇನ್ನೊಬ್ಬ ಆರೆಸ್ಸೆಸ್ ಎಸ್.ಎಲ್.ಭೈರಪ್ಪನವರ ಕವಲು ಕಾದಂಬರಿಯ ಬಗ್ಗೆ ಒಂದು ವಿಶೇಷ ವಿಮರ್ಶಾ... ಯನ್ನೇ ನಡೆಸಲಾಗಿದೆ. 'ಅಕ್ಕ' ಕೇಸರಿ ಬಣ್ಣಕ್ಕೆ ತಿರು... ವುದರ ಸೂಚನೆಗಳಿವು.

ಅಮೆರಿಕಾದ ಕನ್ನಡ ಮಕ್ಕಳಿಗಾಗಿ ಹೊರತ... 'ಗುಬ್ಬಿ ಗೂಡು' ಸಂಚಿಕೆ, ಕವಿಗೋಷ್ಠಿ, ಎಂ.ಎಂ... ಯವರ ಮೂಡ್ನಾಕೂಡು ಚಿನ್ನಸ್ವಾಮಿಯಂತವರ ... ಭಾಷಣಗಳಷ್ಟೇ ಅಲ್ಲಿ ಸಹನೀಯವಾಗಿದ್ದವುಗಳು... ಸಂಘಟಕರು ಇವರುಗಳಿಗೆ ಮಾತನಾಡಲೇ... 'ಟೈಮಾಯ್ತು ಟೈಮಾಯ್ತು.. ನಿಲ್ಲಿಸಿ' ಎನ್ನುತ್ತಾ... ಮಾಡಿ ಅವಾಂತರ ಎಬ್ಬಿಸಿಬಿಟ್ಟರು.

ಕಾಮನ್‌ಸೆನ್ಸ್ ಕೈಕೊಟ್ಟಾಗ

ಸ್ವಂತದ ನಾಡು ಬಿಟ್ಟು ದೂರದೇ... ನೆಲೆಸಿರುವವರಿಗೆ ತಮ್ಮ ಮನೆ, ಭಾಷೆ ಸಂಸ್ಕೃತಿಗ... ತುಸು ಹೆಚ್ಚೇ ಇರುತ್ತದೆ. ಹಾಗಾಗಿಯೇ ... ಗುಂಪುಗಳೂ ಹುಟ್ಟುತ್ತವೆ. ಅಮೆರಿಕಾ ದೇ... ಬಲಿಷ್ಠ ಜಾಗಗಳಲ್ಲಿರುವ 'ಅಕ್ಕ'ದಂತಹ ... ಸಹಜವಾಗಿಯೇ ಪ್ರಭಾವಶಾಲಿ ಗುಂಪುಗಳಾಗಿ ಬೆ... ಆದರೆ ಅದನ್ನವರು ಯಾವುದೋ ಒಂದು ಕು... ಜಾತಿಯ ಹಿತಾಸಕ್ತಿ ರಕ್ಷಿಸುವ ... ಮುಖವಾಣಿಯಾಗುವ ರೀತಿ ಮುನ್ನಡೆಸ... ಅದೇರೀತಿ ಇಲ್ಲಿನ ಜನರ ತೆರಿಗೆಯ ಹಣ ಕ... ಕೊಂಚ ಸಂಕೋಚ ಉಳಿಸಿಕೊಳ್ಳಬೇಕು. ರಾಜಕಾ... ಮಣೆಹಾಕುವ ಬದಲಿಗೆ ಸಾಂಸ್ಕೃತಿಕ ಕ್ಷೇತ್ರ, ... ವೈದ್ಯಕೀಯ, ಉದ್ಯಮರಂಗಗಳ ಘನತೆಯುಳ್ಳ ... ಪ್ರತಿನಿಧಿಗಳಾಗಿ ಆಹ್ವಾನಿಸಿದರೆ ಉತ್ತಮ.

ಅದು ಬಿಟ್ಟು ರೇಣುಕಾಚಾರಿಯಂತಹ ... ಬೆನ್ನು ಯಾಕೆ ಕೆರೆಯಬೇಕು? ಈ ನರ್ಸ್ ... ಭಾನಗಡಿಯ ಕತೆ ಕರ್ನಾಟಕದ ಮನೆಮಂದಿಗೆಲ್ಲಾ ... ಈ ಬಾಯಿ ಬಡುಕ, ಬಫೂನನ್ನೇ ಕ... ಸಂಸ್ಕೃತಿ-ಪರಂಪರೆಯ ಪ್ರತಿನಿಧಿ ಎಂದು '... ಭಾವಿಸಿದರೆ, ರೇಣುಕನನ್ನೇ ಹಿಡಿದು ಹಣ ಕಿತ್ತ... ಉಳಿಯುತ್ತದಾ?

ಹೇಳಕ್ಕ,

• ಪಾರ್ವ...


ಕನ್ನಡ ಸಾಹಿತ್ಯ ಸಮ್ಮೇಳ... ಯಾಕೆ ರಾಜಕಾರಣಿಗಳ... ಬರುವುದಿಲ್ಲ?

ಅಮೆರಿಕಾದ ಅಕ್ಕ ಸಮಾವೇಶಕ್ಕೆ ಹೋ... ಲಜ್ಜೆಗೆಟ್ಟು, ಲಾಬಿ ನಡೆಸಿ ಓಡಿಹೋ... ಶಾಸಕ-ಮಂತ್ರಿಗಳಿಗೆ ಕೇಳಬೇಕಾದ ಪ್ರಶ್ನೆ ಇದು...

ಪ್ರತಿ ಬಾರಿ ಅಕ್ಕ ಸಮಾವೇಶಕ್ಕೆ ಕನಿಷ್ಠ 5... ಶಾಸಕರ ದಂಡು ಹೊರಡುತ್ತದೆ. ಅವರ ಓ... ಖರ್ಚನ್ನು ಸರ್ಕಾರವೇ ಕೊಡುತ್ತದೆ. ಈ ಬಾರಿ... ಒಟ್ಟು 31 ಮಂದಿ ಶಾಸಕ-ಮಂತ್ರಿ-ಅಧಿಕಾ... ದಂಡು ನ್ಯೂಜೆರ್ಸಿಗೆ ಹೋಗಿ ಬಂದಿದೆ.

ಇಲ್ಲೊಂದು ವಿಪರ್ಯಾಸ ಗಮನಿಸಿ. ಸ... ಪ್ರತಿ ವರ್ಷ ಕಸಾಪದವರು ನಡೆಸುವ ಅಖಿಲ ... ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತದೆ. ಸಮ್ಮೇಳನ ನಡೆಯುವ ಊರಿನ ಶಾಸಕ-ಸಂ... ಹಾಗೂ ಮಂತ್ರಿಗಳನ್ನು ಬಿಟ್ಟರೆ ಉಳಿದೆಡೆಯ ... ಶಾಸಕನೂ ಅತ್ತ ತಲೆ ಹಾಕಿಯೂ ಮಲಗುವ... ಕನಿಷ್ಠ ಕನ್ನಡಾಭಿಮಾನವನ್ನು ತೋರುವ... ಚರ್ಚಾಗೋಷ್ಠಿಗಳಲ್ಲೂ ಕಾಣಿಸಿಕೊಳ್ಳುವುದಿಲ್ಲ. ಇದೇ ಪ್ರಭೃತಿಗಳಿಗೆ ಅಮೆರಿಕಾ-ಅಕ್ಕ ಅಂದ ಕೂ... ತಾವು ಕನ್ನಡಿಗರೆಂಬುದು ನೆನಪಾಗಿ ವಿಮಾನ... ಹಾರಿಬಿಡುವುದು ವಿಪರ್ಯಾಸ.

ಹಟ್ಟಿ ಗಣಿ ಕಾರ್ಮಿಕರ ರಕ್ತ ಹೀರಿದ ಅಕ್ಕ



ಹಟ್ಟಿಕಾರ್ಮಿಕರ ಶೆಡ್‌ಗಳು

ನರ್ಸ್ ರೇಣುಕಾ ಅಬಕಾರಿ ಮಂತ್ರಿಯಾಗಿರುವುದರ ಜೊತೆಗೆ ಹಟ್ಟಿ ಚಿನ್ನದ ಗಣಿ ನಿಗಮಕ್ಕೆ ಅಧ್ಯಕ್ಷನೂ ಹೌದು. ಹಾಗಾಗಿಯೇ ಅಕ್ಕಗಳಿಗೆ ಪಾನೀಯ ನಿಗಮದಿಂದ 20 ಲಕ್ಷ ರೂ. ಕೊಡಿಸಿದ್ದಾನೆ. ಜೊತೆಗೆ ಹಟ್ಟಿ ಗಣಿ ನಿಗಮದಿಂದಲೂ ಅನಾಮತ್ತು 16 ಲಕ್ಷ ರೂಪಾಯಿ ಎತ್ತಿಕೊಟ್ಟಿದ್ದಾನೆ.

ಈ ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಸ್ಥಿತಿಗತಿಯ ಬಗ್ಗೆ ಇಲ್ಲಿ ಕೆಲವು ಮಾತು ದಾಖಲಿಸಬೇಕಿದೆ. ಒಟ್ಟು 3700 ಕಾರ್ಮಿಕರಿರುವ ಈ ನಿಗಮದಲ್ಲಿ ಬಹುತೇಕರು ಪ್ರಾಣಿಗಳಿಗಿಂತ ಕಡೆಯಾಗಿ ಬದುಕುತ್ತಿದ್ದಾರೆ. ಗಾಂಧಿ ಮೈದಾನ ಹಾಗೂ ರಾಮ ರಹೀಂ ಕಾಲನಿಗಳಲ್ಲಿ ಹಂದಿ ಗೂಡುಗಳಂತಹ ಶೆಡ್‌ಗಳಲ್ಲಿ ಕಾರ್ಮಿಕರು ವಾಸವಿದ್ದಾರೆ. ಇಲ್ಲಿ ಯಾವುದೇ ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಆಸ್ಪತ್ರೆ ಅಂತಾ ಒಂದು ಕಟ್ಟಡ ಇದೆಯಾದರೂ ಚಿಕಿತ್ಸಾ ವ್ಯವಸ್ಥೆ, ಔಷಧ ಲಭ್ಯವಿಲ್ಲ. ಹಂದಿಗೂಡಿನ ಮನೆಗಳ ಗೋಡೆ-ತಾರಸಿಯೆಲ್ಲಾ ತಗಡಿನ ಶೀಟ್‌ಗಳದ್ದು, ರಾಯಚೂರಿನ ಬಿಸಿಲಿನ ಜೊತೆಗೆ ಈ ತಗಡಿನ ಶೀಟ್‌ಗಳ ಗೂಡುಗಳಲ್ಲಿ ಬದುಕುವ ಕಾರ್ಮಿಕರ ಸ್ಥಿತಿಯನ್ನು ಒಮ್ಮೆ ಊಹಿಸಿಕೊಳ್ಳಿ.

ಇದೆಲ್ಲಕ್ಕಿಂತ ಭೀಕರ ವಿಚಾರ ಏನೆಂದರೆ ಎರಡೂವರೆ ಮೂರು ಸಾವಿರ ಅಡಿಗಳ ಆಳದಲ್ಲಿ ಗಣಿ ಅಗೆಯುವ ಕಾರ್ಮಿಕರು ಕೆಲಬಾರಿ ಅಲ್ಲೇ ಮಲ-ಮೂತ್ರ ವಿಸರ್ಜಿಸುತ್ತಾರಲ್ಲ ಅದನ್ನೆಲ್ಲಾ ಅವರ ಕೈಯಲ್ಲೇ ಎತ್ತಿಸಿ ಮೇಲಕ್ಕೆ ಸಾಗಿಸಿ ಬಿಸಾಡಿಸುವ ಅಮಾನವೀಯ ವ್ಯವಸ್ಥೆ ಇಲ್ಲಿದೆ. ಇದಕ್ಕೊಂದು ದೀಸೆಂಟಾದ ಪರಿಹಾರ ರೂಪಿಸಲು ಯಾವನೂ ಯೋಚಿಸುತ್ತಿಲ್ಲ.


ಇಷ್ಟು ಹೀನ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಕನ್ನಡ ಕಾರ್ಮಿಕರು ಹಟ್ಟಿ ಕಂಪನಿಗೆ ಪ್ರತಿವರ್ಷ ಒಂದು ನೂರು ಕೋಟಿ ರೂಪಾಯಿ ಲಾಭ ತಂದು ಕೊಡುತ್ತಿದ್ದಾರೆ. ಈ ಹಣದ ಒಂದು ಭಾಗವಾಗಿ 16 ಲಕ್ಷ ರೂಪಾಯಿಗಳನ್ನು ನರ್ಸ್ ರೇಣುಕ ಅಕ್ಕ ಗಳಿಗೆ ಕೊಟ್ಟಿದ್ದಾನೆ. ಇವನಿಗೆ ಕಾರ್ಮಿಕರ ಬದುಕನ್ನು ಉತ್ತಮಗೊಳಿಸಲು ಒಂದೇ ಒಂದು ರೂಪಾಯಿಯನ್ನು ಕೊಡುವ ಮನಸ್ಸು ಮಾನವೀಯತೆ ಇಲ್ಲ.



ಈ ಅಕ್ಕಗಳು ತೆಗೆದುಕೊಂಡಿರುವ 16 ಲಕ್ಷ ರೂಪಾಯಿ ... ಕಾರ್ಮಿಕರ ರಕ್ತ ಹೀರುವ ಮೂಲಕ ಪಡೆದದ್ದು!

ತಮ್ಮ ಮೋಜು, ಮಜಾಗಳಿಗೆಂದು ಕರ್ನಾಟಕ ಸರ್ಕಾರದಿಂ... ಕೀಳುವ NRI ಕನ್ನಡಿಗರೂ ಕಳೆದ ವರ್ಷ ಪ್ರವಾಹ ಬಂದಾ... ಮಾಡಿದರೆಂದು ನೋಡಬೇಕು. ಅಮೆರಿಕಾದ ಕೆಲವು ವ್ಯ... ಅನೇಕರಿಂದ ಹಣ ಸಂಗ್ರಹಿಸಿ ಇಲ್ಲಿಗೆ ಕಳಿಸಿರುವುದು ನಿಜ. ಆ... ಆಗ ಏನು ಮಾಡಲಿಲ್ಲ, ಈಗ ಸಮ್ಮೇಳನದ ಸಮಯದಲ್ಲಿ ... ರೂಪಾಯಿ ದೇಣಿಗೆ ಸಂಗ್ರಹಿಸಿ ಕೊಟ್ಟಿದ್ದಾರೆ. ಆದರೆ ಸಮ್ಮೇಳನ... ಜನ 8 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ, ಕ... ಸರ್ಕಾರದಿಂದಲೇ 1 ಕೋಟಿ ಪಡೆದಿದ್ದಾರೆ, ಇದೆಲ್ಲವರ ಮುಂದೆ ... ರೂಪಾಯಿ ದೊಡ್ಡ ಮೊತ್ತವೇನಲ್ಲ.

ಜು ಎಂಬ ಮೈಸೂರು ಲಿಕೆ ಗುಮಾಸ್ತನೂ, ಂಬಾರರ ಆಸ್ತಿಯೂ!



ೂರು ಮಹಾನಗರ ಪಾಲಿಕೆಯ ನೌಕರನಾಗಿರುವ ಟಿ.ರಾಜು, ಮುದಾಯದ ಜನರಿಗೆ ಸೇರ ಕೋಟ್ಯಾಂತರ ಬೆಲೆಯ ಆಸ್ತಿ ಮಾವ ಸಂಜೀವಯ್ಯನೆಂಬ ೂತೆ ಸೇರಿ ತಮ್ಮ ಕುಟುಂಬದ ಮಾಡಿಕೊಂಡಿರುವ ವಿಚಾರ ಷನ್ ವಲಯದಲ್ಲಿ ಮತ್ತು ಮುದಾಯದಲ್ಲಿ ಇಂದು ಬಹಳ ಸುದ್ದಿಯಾಗಿದೆ. ಕುಂಬಾರ ಾಯದ ಆಸ್ತಿಯಲ್ಲಿ ಅಕ್ರಮವಾಗಿ ಕಟ್ಟಿರುವ ್ ಕಾಂಪ್ಲೆಕ್ಸ್‌ನಿಂದ ಹರಿದುಬರುತ್ತಿರುವ ಬಾಡಿಗೆ ಕೋಟ್ಯಾಂತರ ರೂ.ಗಳನ್ನೂ ಸಹ ಈ ರಾಜು ಸಂ ಮಾಡಿದ್ದಾನೆ.

ರ ಸಮುದಾಯದ ಆರ್.ರಾಮಯ್ಯ ಮತ್ತು ಸೇರಿದಂತೆ ಹಲವು ಮುಖಂಡರುಗಳು ಸೇರಿ ಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ ನ ಸಂಘವನ್ನು ಪ್ರಾರಂಭಿಸಿ ದಶಕಗಳೇ ಸಂದಿವೆ. ದಾಯದ ವಿದ್ಯಾರ್ಥಿಗಳಿಗೆ ಅನುಕೂಲವಾಗ ಸೂರಿನ ಸಿಐಟಿಬಿ (ಆಗಿನ ಮೈ. ನಗರಾಭಿವೃದ್ಧಿ ಂಡಳಿ)ಗೆ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದರು. . ಸಿಐಟಿಬಿಯು ನ್ಯೂ ಕಾಂತರಾಜ್ ಅರಸ್ ಈಗಿನ ಅಪೋಲೋ ಆಸ್ಪತ್ರೆ ಎದುರು 6504 ಸಿ1 ನಿವೇಶನವನ್ನ ವಾರ್ಷಿಕ 200 ರೂ.ಗಳ ಶತ್ತಿನೊಂದಿಗೆ ಮಂಜೂರು ಮಾಡಿತ್ತು. ಇದರ ಂಬಾರ ಸಂಘವು ವಿದ್ಯಾರ್ಥಿ ನಿಲಯಕ್ಕೊಂದು ಮ್ಯ ರಸ್ತೆಯಲ್ಲಿ ಬ್ರಾಹ್ಮಣ ನೆಯನ್ನು ಸಹ ಖರೀದಿಸ



ರರ ಸಂಘದ ಈ ಮ್ಮತ್ತು ಕೋಟಿಗಟ್ಟಲೆ ಕಂಡುಕೊಂಡ ಳ್ಳಿ ಸಂಜೀವಯ್ಯ ಆತನ .ರಾಜು, ಸೋಮನಹಳ್ಳಿ ಮಂಚಯ್ಯ ಲಿಂಗಶೆಟ್ಟಿ 0 ಜನ ಕಿರಾತಕರು ಮಾಸ್ಟರ್ ಪ್ಲಾನ್ ರೂಪಿಸಿದರು. ಕುಂಬಾರರ ಸ್ತಿ ಕಬಳಿಸುವ ಇರಾದೆಯಿಂದ ಕುಂಬಾರರ ವಿದ್ಯಾರ್ಥಿ ನಿಲಯ ಟ್ರಸ್ಟ್‌ವೊಂದನ್ನು ಶುರು ದರು. ಇದಕ್ಕೆ ಮಾವ ಸಂಜೀವಯ್ಯನೇ ಅಧ್ಯಕ್ಷ, ರ್ಯದರ್ಶಿ, ತಮ್ಮ ಚೇಲಾಗಳೇ ಪದಾಧಿಕಾರಿ ದರ ನಂತರ ಕುಂಬಾರರ ಸಂಘದ ಹಾಲಿ ಗಳಿಗೆ ಈ 10 ಜನರ ಗೂಂಡಾಪಡೆ ಬೆದರಿಸಿ ೊಳ್ಳುವಂತೆ ಮಾಡಿತು. ಆಮೇಲಿನದ್ದೆಲ್ಲ ಭಾರಿ

ನಯ್ಯ ಮತ್ತು ರಾಜುವಿನ ಪುಂಡಾಟಕ್ಕೆ ಮಿಕ್ಕ ಮುಖಂಡರುಗಳು ಜಾಗ ಖಾಲಿಮಾಡಿ ಮನೆ ು. ಇದು ಜೋಡಿ ಕಳ್ಳರ ಹಾದಿ ಮತ್ತಷ್ಟು ಸುಗಮವಾಗುವಂತೆ ಮಾಡಿತು.

ಸಂಜೀವಯ್ಯ ಮತ್ತು ರಾಜು ಗ್ಯಾಂಗ್ ಸಮುದಾಯದ ವಿದ್ಯಾರ್ಥಿಗಳನ್ನ ಉದ್ಧಾರ ಮಾಡುವ ಹೆಸರಿನಲ್ಲಿ ಹಾಲಿ ಇರುವ ಕುಂಬಾರ ಸಂಘದ ಆಸ್ತಿಯನ್ನ ಯಾರ ಅನುಮತಿಯನ್ನೂ ಪಡೆಯದೆ ಟ್ರಸ್ಟ್ ಹೆಸರಿಗೆ ವರ್ಗಾವಣೆ ಮಾಡುವಂತೆ ಆಗಿನ ಸಿಐಟಿಬಿಗೆ ಕೋರಿದರು. ಮೂಲ ಸಂಘದ ಪದಾಧಿಕಾರಿಗಳ ಅನುಮತಿಯಿಲ್ಲದೆ ಟ್ರಸ್ಟ್ ಹೆಸರಿಗೆ ಆಸ್ತಿಗಳನ್ನು ವರ್ಗಾವಣೆ ಮಾಡಿಸಿಕೊಳ್ಳುವುದು ಮತ್ತು ಅಕ್ರಮವಾಗಿ ವರ್ಗಾವಣೆ ಮಾಡುವುದು ಕಾನೂನು ಬಾಹಿರವಾಗಿದ್ದರೂ 1987ರಲ್ಲಿ ಸಂಘಕ್ಕೆ ಮಂಜೂರಾಗಿದ್ದ ಆಸ್ತಿಯನ್ನು ಮೂರು ತಿಂಗಳಲ್ಲಿ ಸುಲಭವಾಗಿ ವರ್ಗಾವಣೆ ಮಾಡಿಸಿಕೊಂಡಿದ್ದ ರಾಜು. ಏಕೆಂದರೆ ರಾಜು ಅದೇ ಸಿಐಟಿಬಿ ಗುಮಾಸ್ತ!

ಈ ಅಕ್ರಮಕ್ಕೆ ಆಗಿನ ಸಿಐಟಿಬಿ ಅಧ್ಯಕ್ಷ ಕಾಂಗ್ರೆಸ ಡಿ.ಮಾದೇಗೌಡರನ್ನೇ ಬಳಸಿಕೊಳ್ಳುವುದರ ಮಟ್ಟಕ್ಕೆ ರಾಜು ಬೆಳೆದಿದ್ದ. ಇದು ಮಿಕ್ಕ ಕುಂಬಾರ ಮುಖಂಡರಿಗೆ ಭಯಹುಟ್ಟಿಸಿತು. ರಾಜು ಗ್ಯಾಂಗ್ ನಂತರ ಕುಂಬಾರ ವಿದ್ಯಾರ್ಥಿನಿಲಯದ ಹೆಸರಿನಲ್ಲಿ ಕುಂಬಾರ ಸಮುದಾಯದ ಅಧಿಕಾರಿಗಳಿಂದಲೂ ವಸೂಲಿಗಿಳಿದು ಬಾಚಿದ ಲಕ್ಷಗಟ್ಟಲೆ ಹಣಕ್ಕೆ ಇವತ್ತಿನವರೆವಿಗೂ ಲೆಕ್ಕವನ್ನೇ ಕೊಟ್ಟಿಲ್ಲ. ರಾಜು ತನ್ನ ಮಾವ ಮತ್ತು ಟ್ರಸ್ಟ್‌ನ ಅಧ್ಯಕ್ಷ ಸಂಜೀವಯ್ಯನಿಗೂ ಲೆಕ್ಕ ಕೊಡದೆ ದೋಚಿದ. ಇದೇ ವಿಚಾರ ಕುರಿತಂತೆ ಅಳಿಯನೊಂದಿಗೆ ನಡೆದ ಜಗಳದ ಕೊರಗಿನಲ್ಲಿ ಸಂಜೀವಯ್ಯ ಪ್ರಾಣಬಿಟ್ಟ ಎಂಬ ಆರೋಪಗಳಿವೆ.

ರಾಜು ತನ್ನ ನುಂಗಾಟಕ್ಕೆ ಜನ ಮಾನ್ಯತೆ ಗಳಿಸಿಕೊಳ್ಳಲು ಕುಂಬಾರ ಸಮುದಾಯದ ಮುಖಂಡ ಹಾಗೂ ರಾಜ್ಯ ಸಭಾ ಸದಸ್ಯರಾಗಿದ್ದ ಪ್ರೊ. ಎ.ಲಕ್ಷ್ಮಿಸಾಗರ್‌ರ ಕಾಲಿಗೆ ಬಿದ್ದು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಿಸಿ ಕೊಡಲು ಹಣ ಕೋರಿಕೊಂಡ. ಲಕ್ಷ್ಮಿಸಾಗರ್‌ರವರು 18 ಲಕ್ಷ ರೂ.ಗಳಷ್ಟು ಹಣವನ್ನು ತಮ್ಮ ರಾಜ್ಯ ಸಭಾ ನಿಧಿಯಿಂದ ನೀಡಿದ್ದರು. ಇದರಲ್ಲಿ ರಾಜು 13 ರೂಮುಗಳ ಯೋಜನೆ ರೂಪಿಸಿದ. ಮಾತ್ರವಲ್ಲ, ಮತ್ತೆ ಕುಂಬಾರ ಸಮುದಾಯದ ಅಧಿಕಾರಿಗಳ ಬಳಿಹೋಗಿ ಮತ್ತೆ ಎತ್ತುವಳಿಗಿಳಿದು ತನ್ನ ಜೇಬನ್ನ ತುಂಬಿಸಿಕೊಂಡಿದ್ದಾನೆಂದು ಆತನ ಮೇಲೆ ಆರೋಪವಿದೆ. ಆದರೆ ಕಳಪೆ ಕಾಮಗಾರಿ ಮಾಡಿಸಿ ಇಲ್ಲಿಯೂ ತನ್ನ ನುಂಗುಬುದ್ಧಿಯನ್ನ ತೋರಿಸಿ ಪ್ರೊ.ಎ.ಲಕ್ಷ್ಮಿಸಾಗರ್‌ನಿಂದಲೂ ಉಗಿಸಿಕೊಂಡು ದೂರವಾಗಿದ್ದ.


ಇಷ್ಟರಲ್ಲಾಗಲೇ ತೀರಿಹೋಗಿದ್ದ ತನ್ನ ಮಾವನ ಸ್ಥಾನಕ್ಕೆ ಮತ್ತೊಬ್ಬ ನುಂಗಣ್ಣ ಲಕ್ಷ್ಮಣ್ ಶೆಟ್ಟಿಯೆಂಬುವವನ್ನ ಕೂರಿಸಿದ್ದ. ಈತ ನುಂಗಣ್ಣ ರಾಜುವಿನಷ್ಟೇ ಅನುಭವಿ. ಕೆ.ಆರ್.ನಗರದಲ್ಲಿ ಸಹಕಾರಿ ಬ್ಯಾಂಕನ್ನೆ ಮುಳುಗಿಸಿದ್ದಾತ. ಈ ಜೋಡಿ ಕಳ್ಳರು ಸೇರಿಕೊಂಡ ಮೇಲೆ ಕುಂಬಾರ ಸಮುದಾಯದ ಇಡೀ



ಆಸ್ತಿಯನ್ನೇ ಸಬ್‌ಲೀಸ್ ಮಾಡುವಷ್ಟರ ಮಟ್ಟಕ್ಕೆ ಬೆಳೆದರು.

ಅಪೋಲೊ ಆಸ್ಪತ್ರೆ ಎದುರು ಕುಂಬಾರ ವಿದ್ಯಾರ್ಥಿ ನಿಲಯ ನಿರ್ಮಿಸುವ ಉದ್ದೇಶದಿಂದ ಪಡೆದಿದ್ದ 6504 ಚ.ಅಡಿ ನಿವೇಶನದಲ್ಲಿ ನೆಪಮಾತ್ರಕ್ಕೆ ಹಾಸ್ಟೆಲ್ ಕಟ್ಟಿಸಿದ ನಂತರ ಉಳಿಕೆ ನಿವೇಶನವನ್ನ ಕಾನೂನು ಬಾಹಿರವಾಗಿ ಸಬ್‌ಲೀಸ್ ಮಾಡಿದರು ಲಕ್ಷ್ಮಣ್ ಶೆಟ್ಟಿ ಮತ್ತ ರಾಜು.

ಸಿಐಟಿಬಿಯು ನಿವೇಶನ ಮಂಜೂರು ಮಾಡುವ ಸಂದರ್ಭದಲ್ಲಿ ವಿಧಿಸಿರುವ ಕರಾರು ಸಂಖ್ಯೆ 4ರ ಪ್ರಕಾರ ತನ್ನಿಂದ ಲೀಸ್ ಪಡೆದ ನಿವೇಶನವನ್ನ ಸಬ್‌ಲೀಸ್ ಮಾಡುವಂತಿಲ್ಲ. ಆದರೆ ಈ ಕಿರಾತಕ ಭೂಗಳ್ಳರು ಸೇರಿಕೊಂಡು ಲಿಂಗವಂತರಾದ ಡಾ.ಸಿದ್ದೇಶ್, ಡಾ.ಮಾದಪ್ಪ ಮತ್ತು ಡಾ.ಜ್ಞಾನೇಶ್ ಎಂಬ ಭೂಗಳ್ಳರಿಗೆ ಈ ಜಾಗೆಯನ್ನು ಅಕ್ರಮವಾಗಿ ಸಬ್‌ಲೀಸ್ ಮಾಡಿದರು. ಇದಕ್ಕಾಗಿ ಲಕ್ಷ್ಮಣ ಶೆಟ್ಟಿ ಮತ್ತು ರಾಜು ಎಂಬ ಜೋಡಿಕಳ್ಳರು ಮುಂಗಡ ಹಣವಾಗಿ ಸುಮಾರು ಎರಡು ಕೋಟಿ ಹಣವನ್ನು ಪಡೆದರು. ಜೊತೆಗೆ ತಿಂಗಳಿಗೆ ಸುಮಾರು 4.5 ಲಕ್ಷ ಬಾಡಿಗೆ ಪಡೆಯುತ್ತಿದ್ದರು. ಆದರೆ ಇಲ್ಲಿಯವರೆಗೆ ಒಂದೇ ಒಂದು ರೂಪಾಯಿ ಲೆಕ್ಕವನ್ನೂ ಕೊಟ್ಟಿಲ್ಲ. ಈ ಹಗರಣದಲ್ಲಿ ಮೂಡಾದ ಕೆಲವು ಹಾಲಿ ಅಧಿಕಾರಿಗಳೂ ಶಾಮೀಲಾಗಿದ್ದಾರೆಂಬ ಮಾತುಗಳು ಕೇಳಿಬರುತ್ತಿವೆ.



ಈ ಅಕ್ರಮ ವ್ಯವಹಾರವನ್ನು ಸರಿಯಾಗಿ ತನಿಖೆ ನಡೆಸಿದರೆ ಲಕ್ಷ್ಮಣ ಶೆಟ್ಟಿ ಮತ್ತು ರಾಜು ಸೇರಿದಂತೆ ಎಲ್ಲರೂ ಆರೋಪಿಗಳ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ.

ಇದೇ ಕುಂಬಾರ ಸಮುದಾಯದ ವಕೀಲ ಶ್ರೀನಿವಾಸ್ ಎಂಬುವವರು ಲಕ್ಷ್ಮಣ ಶೆಟ್ಟಿ ಮತ್ತು ರಾಜು ಎಸಗಿದ್ದ ಅಕ್ರಮವನ್ನ ಪ್ರಶ್ನಿಸಿದರು. ಅಕ್ರಮಗಳ ಬಗ್ಗೆ ದೂರು ನೀಡಿ, ಕಾನೂನುಬಾಹಿರ ಸಬ್‌ಲೀಸ್‌ನ್ನು ರದ್ದುಪಡಿಸಲು ಮನವಿ ಮಾಡಿದರು. ಇದು ರಾಜುವಿನ ಗ್ಯಾಂಗ್‌ನ ಬುಡಕ್ಕೆ ಬಿಸಿ ನೀರುಬಿಟ್ಟಂತಾಯಿತು. ಇದರಿಂದ ಸಿಟ್ಟಿಗೆದ್ದ ಇಡೀ ಗ್ಯಾಂಗ್ ರೌಡಿಗಳಿಗೆ ಸುಪಾರಿಕೊಟ್ಟು ಶ್ರೀನಿವಾಸ್ ಅವರ ಮೇಲೆ ಆಲನಹಳ್ಳಿಯ-ಟಿ.ನರಸೀಪುರ ರಸ್ತೆಯಲ್ಲಿ 21-2-2002 ರಂದು ಮಾರಣಾಂತಿಕ ದಾಳಿ ನಡೆಸಿತು. ಲಕ್ಷ್ಮಣ ಶೆಟ್ಟಿ ಮತ್ತು ರಾಜು ನೇತೃತ್ವದ ಈ ಮಾರಣಾಂತಿಕ ದಾಳಿಯಿಂದಾಗಿ ವಕೀಲ ಶ್ರೀನಿವಾಸ್ ಅವರು ಮೂರೇ ದಿನಗಳಲ್ಲಿ ಮರಣ ಹೊಂದಿದರು. ವಕೀಲ ಶ್ರೀನಿವಾಸ್ ತಾನು ಸಾಯುವ ಮುನ್ನ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ರಾಜುವಿನ ಮೇಲೆಯೇ ನೇರ ಆರೋಪ ಹೊರಿಸಿದ್ದರು.

ಇವರಿಬ್ಬರ ಕಿಡಿಗೇಡಿತನ ಇಲ್ಲಿಗೇ ಮುಗಿಯಲಿಲ್ಲ, ಆಗ ರಾಜು ಕಾರ್ಪೋರೇಷನ್‌ನಲ್ಲಿ ಎಫ್.ಡಿ.ಸಿ ಆಗಿದ್ದರಿಂದ ಆತನನ್ನು 12-11-2002ರಲ್ಲಿ ಆಯುಕ್ತ ಸೆಲ್ವಕುಮಾರ್ ಕೊಲೆ ಆರೋಪಿ ರಾಜುನನ್ನ ಸೇವೆಯಿಂದ ಅಮಾನತ್ತು ಮಾಡಿದರು. ಆದರೆ ವಕೀಲ ಶ್ರೀನಿವಾಸ್‌ರ ಹತ್ಯೆ ಕೇಸು ಹಳ್ಳಹಿಡಿಯುವಂತೆ ಈ ಕಿರಾತಕ ರಾಜುವಿನ ಹಡಬಿಟ್ಟಿ ದುಡ್ಡು ಕೆಲಸ ಮಾಡಿತು. ಹಾಗೆ ಮಾಡುವ ಮೂಲಕ ರಾಜು ಜೈಲಿಗೆ ಹೋಗುವುದರಿಂದ ತಪ್ಪಿಸಿಕೊಂಡ.

ರಾಜುವಿನ ಈ ದುಷ್ಟತನವನ್ನು ಒಂದಷ್ಟು ಯುವಕರು ಪ್ರತಿಭಟಿಸಿದಾಗ 'ವಕೀಲ ಶ್ರೀನಿವಾಸ್‌ಗೆ ಆದ ಗತಿ ನಿಮಗೂ ಆಗುತ್ತದೆ' ಎಂಬ ಬೆದರಿಕೆಯನ್ನೂ ರಾಜು ಹಾಕಿದ್ದ. ಆದರೂ ಹೆಚ್.ಎಸ್.ಪ್ರಕಾಶ್ ಮತ್ತು ಸೋಮಶೇಖರ್ ರಂತಹ ಮುಖಂಡರುಗಳು ರಾಜುವಿನ ಬೆದರಿಕೆಗಳಿಗೆ ಕೇರ್ ಮಾಡದೆ ಸೆಡ್ಡು ಹೊಡೆದು ನಿಂತರು. ಇಡೀ ಆಸ್ತಿ ಹಿಂದುಳಿದ ಕುಂಬಾರ ಸಮುದಾಯಕ್ಕೆ ಸೇರಬೇಕು ಮತ್ತು ಅದನ್ನು ಅಕ್ರಮವಾಗಿ ಸಬ್‌ಲೀಸ್ ಮಾಡಿರುವುದನ್ನು ರದ್ದುಪಡಿಸಬೇಕೆಂದು ಕುಂಬಾರ ಸಮುದಾಯದ ಮಠಾಧಿಪತಿಗಳು ಮತ್ತು ವಕೀಲ ಅರುಣ್‌ಕುಮಾರ್ ಜೊತೆಗೂಡಿ ಪ್ರತಿಭಟಿಸಿದರು.

ಇದೆಲ್ಲದರ ಪರಿಣಾಮವಾಗಿ ಈಗ ಜಿಲ್ಲಾಧಿಕಾರಿ ಹರ್ಷಗುಪ್ತ ಅವರು ಈ ವಿವಾದವನ್ನು ಬಗೆಹರಿಸಲು ಒಂದು ಸಮಿತಿಯನ್ನು ರಚಿಸಿದ್ದಾರೆ. ಆದರೆ ಇದರಿಂದ ಅಕ್ರಮ ಭೂಗಳ್ಳರಿಗೆ ಹಾಗು ಇದರಲ್ಲಿ ಶಾಮೀಲಾಗಿರುವ ಅಧಿಕಾರಿಗಳಿಗೆ ಶಿಕ್ಷೆಯಾಗಿ, ನೊಂದ ಕುಂಬಾರರಿಗೆ ನ್ಯಾಯ ಒದಗುತ್ತದಾ ಅಥವಾ ಮೈಸೂರಿನ ಉಪ್ಪಾರರಿಗೆ ಆದ ಗತಿ ಕುಂಬಾರರಿಗೂ ಆಗುತ್ತದಾ ಕಾದುನೋಡಬೇಕಿದೆ.

• ಲಕ್ಷ್ಮಣ್ ಚೀರನಹಳ್ಳಿ
lakshmancheeranahally@gmail.com

ಕಿರಾತಕ ರಾಜುಗೆ ಶಿಕ್ಷೆಯಾಗಲ್ವೇ?

ರಾಜು ಹುಟ್ಟಾ ಲಂಚಕೋರ, ಬಡ್ಡಿ ದಂಧೆಕೋರ, ಫೋರ್ಜರಿಗಾರ... ಇದು ಮೈಸೂರಿನ ಕಾರ್ಪೋರೇಷನ್ ಕಂದಾಯ ವಸೂಲಿ ವಿಭಾಗದ ರಾಜುವಿನ ಬಗ್ಗೆ ಜನ ಮಾತನಾಡಿಕೊಳ್ಳುವ ಪರಿ. ಇದು ನಿಜವೂ ಇರಬಹುದು.

ರಾಜು ಸಾಚನೇನಲ್ಲ, ಸಭ್ಯಸ್ಥನೂ ಅಲ್ಲ. ಕುಂಬಾರ ಸಮುದಾಯಕ್ಕೆ ನೀಡಿದ ನಿವೇಶನವನ್ನ ಲಪಟಾಯಿಸಿ ಇಡೀ ಸಮುದಾಯಕ್ಕೆ ನಾಮಹಾಕಲು ಹೊರಟಿರುವ ವ್ಯಕ್ತಿ ಈ ರಾಜು. ಕುಂಬಾರರ ಹೆಸರಿನಲ್ಲಿ ಕೋಟ್ಯಾಂತರ ಹಣವನ್ನ ಎತ್ತಿ ಅದನ್ನೆಲ್ಲ ಸ್ವತಃ ಸ್ವಾಹಾ ಮಾಡಿ ತನ್ನನ್ನು ನಂಬಿದ್ದ ತನ್ನ ಮಾವನಿಗೂ ಲೆಕ್ಕ ಕೊಡದೆ ಲಪಟಾಯಿಸಿದ್ದ ಭೂಪ ಈತ. ಇವನನ್ನು ಪ್ರಶ್ನಿಸಿದ್ದಕ್ಕೆ ವಕೀಲ ಶ್ರೀನಿವಾಸ್ ಅವರೇ ನರಳಿನರಳಿ ಪ್ರಾಣಬಿಡುವಂತೆ ಮಾಡಿದ ಕ್ರಿಮಿನಲ್.

ಈತನ ಆಸ್ತಿಪಾಸ್ತಿಗಳು ಅಷ್ಟಿಷ್ಟಲ್ಲ. ಗೋಕುಲಂನಲ್ಲಿ ಬೃಹತ್ ಭವ್ಯಬಂಗಲೆ ಇದೆ. ಇದರ ಬೆಲೆ ಏನಿಲ್ಲವೆಂದರೂ 2.5 ಕೋಟಿ ತೂಗುತ್ತದೆ. ಹೆಂಡತಿ ಹೆಸರಿನಲ್ಲಿ ಮೈಸೂರಿನಲ್ಲೇ ಕಡಿಮೆ ಎಂದರೂ 10 ಸೈಟುಗಳಿವೆ ಎಂಬುದು ಆತನ ಸ್ನೇಹಿತರ ವಲಯದಲ್ಲೇ ಕೇಳಿಬರುತ್ತಿರುವ ಸುದ್ದಿ. ದೇವರಾಜ ಮಾರುಕಟ್ಟೆಯಲ್ಲಿ ಈತನ ಬಡ್ಡಿ ವ್ಯವಹಾರ ಯಾವುದೇ ಅಡೆತಡೆಗಳಿಲ್ಲದೆ ನಡೆಯುತ್ತದೆ. ಪ್ರತಿ ಆರು ತಿಂಗಳಿಗೆ ಈತ ಐಶಾರಾಮಿ ಕಾರುಗಳನ್ನ ಬದಲಾಯಿಸುತ್ತಿರುವುದರ ಹಿಂದೆ ಈತ 'ಸಂಪಾದಿಸುತ್ತಿರುವ' ಹಣ ಹರಿದಾಡುತ್ತಿದೆ. ಒಂದಂತೂ ಸತ್ಯ, ಇಷ್ಟೆಲ್ಲಾ ಆಸ್ತಿ-ಪಾಸ್ತಿಗಳು ರಾಜು ಬೆವರು ಸುರಿಸಿ ಸಂಪಾದಿಸಿದ್ದಲ್ಲ. ಈತನ ಮೇಲೆ ತನಿಖೆ ನಡೆಸಿದರೆ ಮೇಲು ನೋಟಕ್ಕೆ ಕಾಣದಿರುವ ಹತ್ತು ಹಲವು ಹಗರಣಗಳು ಬಯಲಾಗುವುದಂತೂ ಗ್ಯಾರಂಟಿ. •



ರಾಮಚಂದ್ರಾಪುರ ಮಠ ಕಾಮುಕ ಜಗ್ಗ ಬಚಾವ್!



ುತೇಕರ ಆತಂಕ ನಿಜವಾಗಿದೆ. ರಾಮಚಂದ್ರಾಪುರ ಮಠದ ಪ್ರಧಾನ ಜಗದೀಶ ಶರ್ಮ ಲೈಂಗಿಕ ಕಿರುಕುಳ ಸಂಬಂಧಿ ಕೇಸಿನಿಂದ ದ್ದಾನೆ. ಕಾರಣ, ಪೊಲೀಸು ಮಂದಿ ಬಿಜೆಪಿ ಸರ್ಕಾರದ ಮರ್ಜಿಗೆ ' ರಿಪೋರ್ಟ್ ಬರೆದು ಬಿಸಾಡಿದ್ದಾರೆ.

ತಿಂಗಳುಗಳ ಹಿಂದೆ ಜಗದೀಶನ ವಿರುದ್ಧ ಹುಡುಗಿಯೊಬ್ಬಳು ಕಿರುಕುಳ ಸಂಬಂಧಿತ ದೂರೊಂದನ್ನು . ಇದು ಮಠದೊಳಗಿನ ಅಸಲೀ ವ್ಯವ ರ ಹಾಕಿ ಅಲ್ಲೋಲಕಲ್ಲೋಲ ಉಂಟಾ ದ್ದು ಹವ್ಯಕರೇ ಜಗದೀಶನಿಗೆ ಹಿಡಿ ಆತನಿಗೆ ಶಿಕ್ಷೆಯಾಗುವಂತೆ, ನೊಂದ ್ಯಾಯ ಸಿಗುವಂತೆ ಬಯಸಿದ್ದರು. ಇದನ್ನ ಸುತೆಯಿರುವವರೆಲ್ಲರೂ ನಿರೀಕ್ಷಿಸಿದ್ದರು. ರಾಮಚಂದ್ರಾಪುರ ಮಠದೊಳಗೆ ದೇ ಭಾನಗಡಿ ನಡೆದರೂ ಬಿಜೆಪಿ ಮಂದಿಗೆ ಅದೊಂದು ರೀತಿಯ ಆವರಿಸಿಕೊಳ್ಳುತ್ತದೆ. ಮಠದ ಸ್ವಾಮಿಗೆ, ಆತನ ಹಿಂಬಾಲಕರಿಗೆ ದೇ ಕಂಟಕ ಸುತ್ತಿಕೊಂಡರೂ ಬಿಜೆಪಿ ಸರ್ಕಾರ ತನ್ನದೆಂಬಂತೆ ಾಡಿಕೊಳ್ಳುತ್ತದೆ. ಕಳ್ಳರೋ, ಸುಳ್ಳರೋ, ಅತ್ಯಾಚಾರಿಗಳಾಗಿದ್ದರೂ ಪಾರು ಮಾಡಲು ಶತಾಯುಗತಾಯ ಪ್ರಯತ್ನಿಸುತ್ತದೆ. ಪ್ರಸ್ತುತ ವಿಚಾರದಲ್ಲೂ ಮೇಲ್ಕಂಡ ವಿಚಾರಗಳು ವಿರಾಟ್‌ರೂಪ ಪ್ರದರ್ಶಿಸಿ ಿರುಕುಳ ಪ್ರಕರಣದಿಂದ ಪಾರು ಮಾಡಿವೆ.

ಜನಸಾಮಾನ್ಯರಲ್ಲಿ ಪೊಲೀಸರೆಡೆಗಿದ್ದ ಗುಮಾನಿಗಳಿಗೆಲ್ಲ ಸಮರ್ಥನೆ ಸಿಕ್ಕಂತಾಗಿದೆ. ಖಾಕಿ ಪಡೆ ಸರ್ಕಾರದ ಮರ್ಜಿಯನ್ನು ಧಿಕ್ಕರಿಸಿ ನಡೆಯಲಾರದೆಂಬ ಸತ್ಯವೂ ಮತ್ತೊಮ್ಮೆ ಅನಾವರಣಗೊಂಡಿದೆ. ಮಠದೊಳಗೆ ನಡೆದಿದೆಯೆನ್ನಲಾಗಿರುವ ಈ ಲೈಂಗಿಕ ಕಿರುಕುಳ ಕರ್ನಾಟಕದ ರುಚಿಕಾ ಪ್ರಕರಣ ಅಂತಲೇ ಸುದ್ದಿ ಮಾಡಿತ್ತು. ಜನಪರ ಕಾಳಜಿಯಿರುವ ಅನೇಕರು ಅನ್ಯಾಯಕ್ಕೊಳಗಾದ ಬಾಲಕಿಗೆ ನ್ಯಾಯ ದೊರಕಿಸಿಕೊಡಲು ಹೋರಾಟಗಳನ್ನೂ ನಡೆಸಿದ್ದರು. ಈ ಪ್ರಕರಣದ ಬಿರುಸು ಅದೆಷ್ಟಿತ್ತೆಂದರೆ, ರಾಮಚಂದ್ರಾಪುರ ಮಠ ತನ್ನ ಪ್ರಸಿದ್ಧಿಯನ್ನೂ ಕಳೆದುಕೊಳ್ಳುವಂತಾಗಿ, ಶಿಷ್ಯ ವರ್ಗದಲ್ಲೇ ಅನುಮಾನ ಹೊಗೆಯಾಡಲು ಕಾರಣವಾಗಿತ್ತು. ಜೊತೆಗೆ ಕೇಂದ್ರ ಮಹಿಳಾ ಆಯೋಗಕ್ಕೂ ದೂರು ಸಲ್ಲಿಕೆಯಾಗಿತ್ತು. ಇವೆಲ್ಲ ಪ್ರಕರಣದ ಗಂಭೀರತೆಗೆ ಸಾಕ್ಷಿಗಳು.

ಆದರೆ ಇವ್ಯಾವುವೂ ಬಿಜೆಪಿ ಸರ್ಕಾರದ ಕಟ್ಟಾಳುಗಳಿಗೆ ತಾಕಿದಂತಿಲ್ಲ. ಅನ್ಯಾಯಕ್ಕೊಳಗಾದ ಬಾಲಕಿಯ ಆರ್ತನಾದವೂ ಕರುಣೆ ಹುಟ್ಟಿಸಲಿಲ್ಲ. ಇದರಿಂದಾಗಿಯೇ ಹೊರಗೆ ಪ್ರಜ್ಞಾವಂತರು ಕಾಮುಕ ಜಗದೀಶನಿಗೆ ಶಿಕ್ಷೆಯಾಗಬೇಕೆಂದು ಹೋರಾಟ ನಡೆಸುತ್ತಿದ್ದರೆ, ಈ ಜನ ಆತನನ್ನು ರಕ್ಷಿಸುವ ಕಸರತ್ತು ಶುರುವಿಟ್ಟಿದ್ದರು. ಬಿಜೆಪಿ ಸರ್ಕಾರದ ಕೆಟ್ಟ ಚಾಳಿ ಯಾವ ಪರಿಯಿದೆಯೆಂದರೆ, ಜಗದೀಶನ ವಿರುದ್ಧ ಕೇಸು ದಾಖಲಾಗದಂತೆ ನೋಡಿಕೊಳ್ಳಲಾಯಿತು. ಪ್ರಥಮ ಮಾಹಿತಿ ವರದಿ ಸಲ್ಲಿಕೆಯಾದರೂ ಬಂಧಿಸಲು ಮುಂದಾಗದಂತೆ ತಡೆಯಲಾಯಿತು. ಕೊನೆಗೆ ನಿರೀಕ್ಷಣಾ ಜಾಮೀನು ಸಿಗುವವರೆಗೂ ಕಣ್ಣಾಟಗಳಲ್ಲೇ ಕಾಲ ತಳ್ಳಲಾಯಿತು.

ಇವುಗಳಿಗೆಲ್ಲ ಈಗ ಫಲ ಸಿಕ್ಕಿದೆ. ಕಾಮುಕ ಜಗ್ಗ ಬಚಾವಾಗಿದ್ದಾನೆ. ಜನಪರ ಆಶಯಗಳು ಸುಳ್ಳಾದರೆ, ಅನ್ಯಾಯಕ್ಕೊಳಗಾದ ಆ ಹೆಣ್ಣು ಜೀವದ ಕೂಗು ಆರ್ತನಾದವಾಗಿಯೇ ಉಳಿದಿದೆ.

ಸಾಗರದ ಜನಪರ ಹೋರಾಟಗಾರರು ಒಂದಷ್ಟು ಮಂದಿ ಗೃಹ ಸಚಿವ ಆಚಾರ್ಯರನ್ನು ಭೇಟಿಯಾದ ಸಂದರ್ಭದಲ್ಲಿ ಅವರಾಡಿದ ಮಾತುಗಳು ನಿಜಕ್ಕೂ ನಾಚಿಕೆ ಹುಟ್ಟಿಸುವಂತಿವೆ. ಈ ಜನಪರರು ಮಠದ ಅಧ್ವಾನಗಳ ತನಿಖೆಯ ಸಂಬಂಧ ದೂರು ಸಲ್ಲಿಸಿದಾಗ ಆತಂಕಿತರಾದ ಆಚಾರ್ಯ 'ಸಂಘ ಪರಿವಾರದ ಅಜೆಂಡಾಗಳನ್ನು ಬೆಂಬಲಿಸುವವರಲ್ಲಿ ಪೇಜಾವರ ಶ್ರೀಗಳು ಪ್ರಮುಖರಾದರೂ ಅವರಿಗೆ ವಯಸ್ಸಾಗಿದೆ. ರಾಮಚಂದ್ರಾಪುರ ಮಠದ ಶ್ರೀಗಳು ಇನ್ನೂ ಯುವಕರು. ಅವರು ದೇಶಾದ್ಯಂತ ಸಂಚರಿಸಿ ಸಂಘದ ವಿಚಾರಗಳಿಗೆ ಜನಮನ್ನಣೆ ಕೊಡಿಸುತ್ತಾರೆ. ಅವರ ಸೇವೆಯ ಅಗತ್ಯ ಬಹಳಷ್ಟಿದೆ. ದಯವಿಟ್ಟು ಮಠದ ವಿರುದ್ಧ ಹೋಗುವುದನ್ನು ನಿಲ್ಲಿಸಿ' ಎಂಬರ್ಥದ ಮಾತುಗಳನ್ನಾಡಿದರಂತೆ!

ಈ ಜನಸಂಘ ಪರಿವಾರದ ಅಜೆಂಡಾಗಳನ್ನು ಬೆಂಬಲಿಸುವಾತ ಕೊಲೆಗಡುಕನಾದರೂ, ಕಾಮುಕನಾದರೂ ರಕ್ಷಿಸುತ್ತಾರೆಂದರೆ, ಇಲ್ಲಿ ಸಾವಿರ ಜಗದೀಶರುಗಳು ಸೃಷ್ಟಿಯಾಗಬಹುದು. ಬಚಾವಾಗಲೂ ಬಹುದು.

ಅನ್ಯಾಯಕ್ಕೊಳಗಾದವರ ಗತಿಯೇನು? •

ಗೋವಿನ ಸುತ್ತ... ಮುಗಿಯದ ವೃತ್ತ



ಕಾಮಧೇನುವೇ ಕಲ್ಪವೃಕ್ಷವಾಗಿ, ಇಂದಿನ ಕೈಗಾರಿಕೆಗಳಲ್ಲಿ, ಔಷಧ ಉದ್ಯಮಗಳಲ್ಲಿ, ಸುಗಂಧ ದ್ರವ್ಯ ತಯಾರಿಕೆಯಲ್ಲಿ, ಸುರೂಪಿ ಚಿಕಿತ್ಸೆಯಲ್ಲಿ, ಯಂತ್ರೋಪಕರಣಗಳಲ್ಲಿ, ಬಣ್ಣದ ಫ್ಯಾಕ್ಟರಿಗಳಲ್ಲಿ, ಚಿತ್ರೋದ್ಯಮದಲ್ಲಿ ಕೊನೆಗೆ ಕಟ್ಟಡ ಸಾಮಗ್ರಿಗಳಲ್ಲಿ ಹೇಗೆ ಹಾಸುಹೊಕ್ಕಾಗಿ ಬಳಕೆಯಾಗುತ್ತಿದೆ ಎಂಬುದರ ಸಂಕ್ಷಿಪ್ತ ಚಿತ್ರಣ........

ಬಾಯಲ್ಲಿ ಚ್ಯೂಯಿಂಗ್ ಗಮ್ ಅಗಿಯುತ್ತ ನೀವು ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಮಬ್ಬುಗತ್ತಲಲ್ಲಿ ವೇಗವಾಗಿ ಕಾರಿನಲ್ಲಿ ಧಾವಿಸುತ್ತಿದ್ದೀರಿ. ಎದುರಿಗೆ ಏನೋ ಅಸ್ಪಷ್ಟ ಆಕೃತಿ ಕಂಡಂತಾಗಿ ಹಠಾತ್ ಬ್ರೇಕ್ ಹಾಕುತ್ತೀರಿ. ಕಿರ್ರೆಂದು ಕಿರುಚುತ್ತ ಕಾರಿನ ಚಕ್ರಗಳು ರಸ್ತೆಯ ನಡುವೆ ಮಲಗಿರುವ ಹಸುವಿನ ಒಂದಡಿ ದೂರದಲ್ಲಿ ನಿಲ್ಲುತ್ತವೆ. ಅಬ್ಬ, ಪುಣ್ಯಕೋಟಿಯ ಪುಣ್ಯ ಎಂದುಕೊಂಡು ನೀವು ಮೆಲ್ಲನೆ ಸುತ್ತು ಬಳಸಿ, ನಗರಸಭೆಯ ಆಡಳಿತವನ್ನು ಬೈದುಕೊಳ್ಳುತ್ತ ಮುಂದೆ ಸಾಗುತ್ತೀರಿ.

ಆ ಹಸುವಿನ ಪ್ರಾಣ ಉಳಿಸಲು ಕಾರಣವಾಗಿದ್ದು ನಿಮ್ಮ ಕಾರಿನ ದಕ್ಷ ಬ್ರೇಕ್. ಅದು ಅಷ್ಟು ದಕ್ಷತೆಯಿಂದ ಕೆಲಸ ಮಾಡಲು ಕಾರಣ ಏನೆಂದರೆ ಅದರಲ್ಲಿರುವ ಬ್ರೇಕ್ ಫ್ಲೂಯಿಡ್. ಅಂದರೆ, ಬ್ರೇಕ್ ಸಿಲಿಂಡರಿನಲ್ಲಿ ತುಂಬಿಕೊಂಡಿರುವ ಎಣ್ಣೆಯಂಥ ದ್ರವ.

ಆ ದ್ರವ ತಯಾರಾಗಿದ್ದು ಅದೆಷ್ಟೊ ಮೃತ ದನಗಳ ಶರೀರದಿಂದ ಪಡೆದ ಕೊಬ್ಬಿನ ಆಮ್ಲ. ಇಂದು ಜೀವಂತ ದನವನ್ನು ಉಳಿಸಿದ್ದು ಎಂದೋ ಸತ್ತು ಹೋದ ಇನ್ಯಾವುದೋ ದನ!

ಕಾರು ಆ ಕ್ಷಣದಲ್ಲಿ ನಿಲ್ಲಲು ಬ್ರೇಕ್ ಎಣ್ಣೆಯೊಂದೇ ಕಾರಣವಲ್ಲ, ಅದರಲ್ಲಿನ ಬಾಲ್ ಬೇರಿಂಗ್ ಕೂಡ ಕಾರಣ ಅಂತೀರಾ? ಆ ವಿಶೇಷ ಉಕ್ಕಿನ ಗೋಲಿಗಳ ತಯಾರಿಕೆಗೆ ದನಗಳ ಮೂಳೆಗಳನ್ನು ಸುಟ್ಟ ಇದ್ದಲನ್ನೇ ಬಳಸಿರುತ್ತಾರೆ. ಬ್ರೇಕ್ ಹಾಕಿದಾಗ ಗಾಡಿ ನಿಲ್ಲಬೇಕಿದ್ದರೆ ನುಣುಪು ರಸ್ತೆಯನ್ನು ಸರಿಯಾಗಿ ಕಚ್ಚಿ ಹಿಡಿದ ಕಾರಿನ ಟಯರ್ ಕೂಡ ಅಷ್ಟೇ ಮುಖ್ಯ ಅಂತೀರಾ? ಹೌದು. ಆದರೆ ಕಾರಿನ ರಬ್ಬರಿಗೆ ವಿಶೇಷ ಹಿಡಿತಗುಣ ಬರುವಂತೆ ಮಾಡುವಲ್ಲಿ ಸ್ಟೀಯರಿಕ್ ಆಸಿಡ್ ಎಂಬ ರಸಾಯನವನ್ನು ಸೇರಿಸಿರುತ್ತಾರೆ. ಅದನ್ನು ದನದ ಕೊಬ್ಬಿನ ಎಣ್ಣೆಯಿಂದಲೇ ತಯಾರಿಸಿರುತ್ತಾರೆ.

ಸರಿ! ಬ್ರೇಕು, ಟಯರು.... ಇನ್ನೇನು ರಸ್ತೆಗೆ ಹಾಕಿದ ಡಾಂಬರಿನಲ್ಲೂ ದನದ ಅಂಶ ಇದೆ ಅಂತೀರೇನೊ ಎಂದು ರೇಗಿ ಹೊರಡಬೇಡಿ. ನಂಬಿದರೆ ನಂಬಿ, ರಸ್ತೆಗೆ ಹಾಕುವ ಟಾರ್‌ನಲ್ಲೂ ದನದ ಕೊಬ್ಬನ್ನು ಸೇರಿಸಿರುತ್ತಾರೆ!

ನಿಲ್ಲಿ ಇಲ್ಲಿಗೇ ನಿಂತಿಲ್ಲ,

ಮತ್ತೆ ನೀವು ಅಗಿಯುತ್ತಿದ್ದ ಚ್ಯೂಯಿಂಗ್ ಗಮ್ ಕೂಡ ಅಂಥದೇ ಮೃತ ದನದ ದೇಹದಿಂದ ಪಡೆದ ಕೊಲಾಜಿನ್ ಎಂಬ ದ್ರವ್ಯದ್ದೇ ಆಗಿದ್ದಿರಬಹುದು. ಅದರಲ್ಲಿ ವೆನಿಲ್ಲಾ ಸುಗಂಧವೂ ಇದ್ದರಂತೂ ಬಿಡಿ. ಮೊನ್ನೆ ತಾನೇ ಸುದ್ದಿಯಲ್ಲಿತ್ತಲ್ಲ, ಜಪಾನೀ ವಿಜ್ಞಾನಿಯೊಬ್ಬಳು ದನದ ಸೆಗಣಿಯನ್ನೇ ಸಂಸ್ಕರಿಸಿ ಕೃತಕ ವೆನಿಲ್ಲಾ ಪರಿಮಳವನ್ನು ಪಡೆಯಲು ಸಾಧ್ಯವೆಂದು ತೋರಿಸಿದ್ದು? ಆಕೆಗೆ ಆ ಸಾಧನೆಗೆ 'ಇಗ್ ನೊಬೆಲ್' ಪ್ರಶಸ್ತಿ ಸಿಕ್ಕಿದ್ದು?

ಇದು ಬರೀ ಆರಂಭ ಅಷ್ಟೆ. ಇಂದಿನ ಕೈಗಾರಿಕೆಯ ಯುಗದಲ್ಲಿ ಗೋಪುರಾಣ ಎಂಬುದು ಹೇಳಿದಷ್ಟೂ ಮುಗಿಯಲಾರದಷ್ಟಿದೆ. ಎಲ್ಲಿಂದ ಆರಂಭಿಸೋಣ?

ಗೋವು ಬದುಕಿದ್ದಾಗ ಏನೆಲ್ಲ ಉಪಕಾರ ಮಾಡುತ್ತದೆಂದು ನಮಗೆ ಗೊತ್ತು, ಅದರ ಚರ್ವಿತಚರ್ವಣ ಬೇಡ. ಪಾಶ್ಚಾತ್ಯ ದೇಶಗಳಲ್ಲಿ ಗೋಸಂಗೋಪನೆ ಎಂಬುದು ಒಂದು ದೊಡ್ಡ ಉದ್ಯಮವಾಗಿದೆ. ಒಂದೊಂದು ರ್‍ಯಾಂಚ್‌ನಲ್ಲಿ ಅನೇಕ ಸಾವಿರ ದನಗಳಿರುತ್ತವೆ. ಅಮೆರಿಕದ ಡಿಮಾಯ್ನ್ ನಗರದ ಹೊರವಲಯದಲ್ಲಿ ನಾನು ಭೇಟಿ ನೀಡಿದ್ದ ಒಂದು ರ್‍ಯಾಂಚ್‌ನಲ್ಲಿ ಮೂರೂವರೆ ಸಾವಿರ ದನಗಳಿದ್ದವು. ಅಲ್ಲಿ ದಿನವೂ ನೂರಾರು ಗರ್ಭಿಣಿ ದನಗಳು ಕರು ಹಾಕುತ್ತಿರುತ್ತವೆ. ಆಗ ಗರ್ಭದಿಂದ ಹೊರ ಬೀಳುವ ಸೆತ್ತೆಗಳನ್ನು ಸಂಗ್ರಹಿಸಿ ಅದರಿಂದ ನಾನಾ ಬಗೆಯ ಔಷಧ ದ್ರವ್ಯಗಳನ್ನೂ ಶೃಂಗಾರ ಪರಿಕರಗಳನ್ನೂ ತಯಾರಿಸುತ್ತಾರೆ. ಅದನ್ನೂ ನಾವಿಲ್ಲಿ ಚರ್ಚೆಗೆ ಎತ್ತಿಕೊಳ್ಳುವುದು ಬೇಡ.

ದನವೊಂದು ಸತ್ತ ನಂತರ ಏನೇನು ಸಿಗುತ್ತದೆ ಎಂಬಲ್ಲಿಂದ ನೋಡೋಣ:


'ಬಳಸಿದ್ದನ್ನೇ ಮತ್ತೆ ಬಳಸಿ; ಬಿಸಾಕುವ ಬದಲು ಮರುಬಳಕೆ ಮಾಡಿ' ಎಂಬುದು ವೇದ ಮಂತ್ರದಷ್ಟೇ ಮಹತ್ವದ ಸಂದೇಶವಾಗುತ್ತಿರುವ ಯುಗದಲ್ಲಿ ನಾವಿದ್ದೇವೆ. ಅಂಥ ಮರುಬಳಕೆಯ ಪರಮೋಚ್ಚ ಉದಾಹರಣೆ ಎಂದರೆ ನಾವು ಹಿಂದೂಗಳು ಪೂಜಿಸುವ ಗೋವು. ಭಾರತದ ಸಾಂಪ್ರದಾಯಿಕ ಸಮುದಾಯದಲ್ಲಿ ಗೋವುಗಳ ಮರುಬಳಕೆ ಎಂದರೆ ನಮಗೆ ಗೊತ್ತಿರುವುದು ಇಷ್ಟೆ:

ಒಂದು ಹಸು ಅಥವಾ ಎತ್ತು ಸತ್ತರೆ ಅದರ ಚರ್ಮವನ್ನು ಸುಲಿದು ಯಾರೋ ಪಾದರಕ್ಷೆ, ಬೆಲ್ಟ್ ಇತ್ಯಾದಿ ಮಾಡಲೆಂದು ಒಯ್ಯುತ್ತಾರೆ. ಮಾಂಸದ ಆಯ್ದ ಭಾಗಗಳನ್ನು ಕೆಲವರು ಆಹಾರಕ್ಕೆ ಬಳಸುತ್ತಾರೆ. ದನಗಳ ಗೊರಸು, ಕೋಡುಗಳಿಂದಲೇ ಜಲಟಿನ್ (ಜೆಲ್ಲಿ) ಎಂಬ ಅಂಟು ಪದಾರ್ಥವನ್ನು ತಯಾರಿಸುತ್ತಾರೆ ಅನ್ನೋದು ಗೊತ್ತಿತ್ತು, ಅದು ಬಿಟ್ಟರೆ ಈಚೆಗೆ ಬೆಂಗಳೂರಿನ ದಳಿ ಎಲ್ಲೋ 'ಬೋನ್ ಮಿ ಲ್' ಎಂಬ ಫ್ಯಾಕ್ಟರಿ ಆರಂಭವಾಗಿದೆಯಂತೆ; ಅದರಲ್ಲಿ ದನಗಳ ಮೂಳೆಯ ಪುಡಿಮಾಡಿ ಗೊಬ್ಬರಕ್ಕೋ ಇನ್ಯಾವುದಕ್ಕೋ ಬಳಸುತ್ತಾರಂತೆ. ಸಕ್ಕರೆ ಬೆಳ್ಳಗಾ ಗುವಂತೆ ಮಾಡಲೆಂದು ದನದ ಮೂಳೆಪುಡಿಯ ಬಳಿಕೆ ಬೆಡ್ ಮೇಲೆ ಹಾಯಿಸುತ್ತಾರಂತೆ..... ಅದಂತೆ ಇದಂತೆ.

ಅಲ್ಲಿಂದಾಚೆ ಏನು?

ಇಂಗ್ಲೆಂಡಿನಲ್ಲಿ ದನಗಳಿಗೆ 'ಬಿಜೆಡಿ' (ಅಂದರೆ 'ಹುಚ್ಚು ಹಸು ರೋಗ') ಕಾಣಿಸಿಕೊಂಡಾಗ ಅದೆಂಥದೊ ಮಹಾ ಪಿಡುಗು ಬಂದಂತೆ ಪಾಶ್ಚಾತ್ಯ ಜಗತ್ತು ತತ್ತರಿಸಿತು. ಗೋಮಾಂಸವನ್ನು ತಿಂದ ಕೆಲವರು ಅದೇ ರೋಗದಿಂದ ನರಳಿ ಸತ್ತಿದ್ದೂ ಬೆಳಕಿಗೆ ಬಂತು. ಬ್ರಿಟನ್ನಿನ ಗೋಮಾಂಸಕ್ಕೆ ನಾನಾ ದೇಶಗಳಲ್ಲಿ ಬೇಡಿಕೆ ಕುಸಿದು ವಾಣಿಜ್ಯ ರಂಗಕ್ಕೆ ಭಾರೀ ಧಕ್ಕೆ ಒದಗುವ ಸಂಭವ ಇತ್ತು, ಅದಕ್ಕೇ ಆರೆಂಟು ಲಕ್ಷ ಗೋವುಗಳನ್ನು ವಧೆ ಮಾಡಿ, ಜಗತ್ತಿಗೆಲ್ಲ ಗೊತ್ತಾಗುವಂತೆ ಟಿವಿ ಕ್ಯಾಮರಾ ಎದುರೇ ಸುಟ್ಟು ಹೂಳಲಾಯಿತು. ಇನ್ನುಳಿದ ಹಸುಗಳೆಲ್ಲ ಬದುಕಲು ಯೋಗ್ಯವೆಂದು ಹೇಳುತ್ತ ಬ್ರಿಟಿಷ್ ಆರೋಗ್ಯ ಸಚಿವರು ಗೋಮಾಂಸದ ಹುರಿದ ತುಣುಕನ್ನು ಕ್ಯಾಮರಾ ಎದುರೇ ಬಾಯಿಗೆ ಹಾಕಿಕೊಂಡು ಜಗತ್ತಿಗೆ ಧೈರ್ಯ ತುಂಬಿದರು. ಅದು ಸತ್ಯದ ಒಂದು ತುಣುಕು ಅಷ್ಟೇ. ಇಂದು ದನವನ್ನು ಭಕ್ಷಣೆಗಷ್ಟೇ ಅಲ್ಲ, ಬೇರೆ ಯಾವ ಯಾವ ರೂಪಗಳಲ್ಲಿ ನಾವು ಬಳಸುತ್ತಿದ್ದೇವೆ ಎಂಬುದರ ಉದ್ದುದ್ದ ಪಟ್ಟಿಗಳೇ ಆ ಸಂದರ್ಭದಲ್ಲಿ ಚರ್ಚೆಗೆ ಬಂದವು. ಅವುಗಳಿಂದ ಸಂಗ್ರಹಿಸಿದ ಮಾಹಿತಿಗಳಲ್ಲಿ ಕೆಲವು ಮಾತ್ರ ಇಲ್ಲಿವೆ:

ಉದಾಹರಣೆಗೆ, ದನಗಳ ಶ್ವಾಸಕೋಶ ಮತ್ತು ಶ್ವಾಸನಾಳದ ಒಳ ಪೊರೆಯಿಂದ ಹೆಪಾರಿನ್ ಎಂಬ ಔಷಧವನ್ನು ತಯಾರಿಸುತ್ತಾರೆ. ರಕ್ತ ಗರಣೆಗಟ್ಟದ ಹಾಗೆ ತಡೆಯಲು, ವಿಶೇಷವಾಗಿ ಗ್ಯಾಂಗ್ರೀನ್ ಆಗದಂತೆ ತಡೆಯಲು ಈ ಔಷಧ ಬಳಕೆಯಾಗುತ್ತದೆ. ದನದ ಅಡ್ರಿನಾಲಿನ್ ಗ್ರಂಥಿಗಳಿಂದ ಸ್ಟಿರಾಯಿಡ್‌ಗಳನ್ನು ತೀವ್ರ ಅಸ್ತಮಾದಂಥ ಕಾಯಿಲೆಗಳ ಉಪಶಮನಕ್ಕೆ ಬಳಸುತ್ತಾರೆ. ಇದೇ ಗ್ರಂಥಿಗಳಿಂದ ಎಪಿನೆಫ್ರಿನ್ ಎಂಬ ಔಷಧವನ್ನು ಉತ್ಪಾದಿಸಿ ಅದನ್ನು ರಕ್ತದ ಒತ್ತಡವನ್ನು ಹೆಚ್ಚಿಸಲು ಬಳಸುತ್ತಾರೆ. ಹೃದ್ರೋಗ ಚಿಕಿತ್ಸೆಗಂತೂ ಇದು ಬೇಕೇ ಬೇಕು. ದನದ ಯಕೃತ್ತಿನಿಂದ ಬಿ-12, ಲಿವರ್ ಎಕ್ಸ್‌ಟ್ರಾಕ್ಟ್ ಔಷಧಗಳು ತಯಾರಾಗುತ್ತವೆ. ಹಾಗೆಯೇ ಮಧುಮೇಹಿಗಳಿಗೆ ಬೇಕಾದ ಇನ್ಸೂಲಿನ್ನನ್ನು ದನಗಳ ಮೇದೋಜೀರಕ ಗ್ರಂಥಿಗಳಿಂದ ಪಡೆಯಲಾಗುತ್ತದೆ. ಇನ್ನು ಕೀಲುನೋವು, ಸಂಧಿವಾತದಿಂದ ಬಳಲುವವರಿಗೆ ಕೊಡುವ ಕೊಂಡ್ರಾಯಿಟಿನ್ ಸಲ್ಫೇಟ್ ಎಂಬ ಔಷಧವನ್ನು ದನದ ಮೂಗಿನ ಹೊರಳೆಗಳ ನಡುವಣ ಮೃದ್ವಸ್ಥಿಯಿಂದಲೇ ತಯಾರಿಸುತ್ತಾರೆ. ದನದ ಮಿದುಳಿನ ದಟ್ಟ ನಾರಿನಂಥ ಹೊರಗವಚವನ್ನು (ಡ್ಯುರಾ ಮೇಟರ್) ಮನುಷ್ಯರ ಮಿದುಳಿನ ಶಸ್ತ್ರಚಿಕಿತ್ಸೆ ಮಾಡುವಾಗ ತಲೆಬುರುಡೆಯ ಖಾಲಿ ಜಾಗವನ್ನು ತುಂಬಲು ಬಳಸಲಾಗುತ್ತದೆ.



• ನಾಗೇಶ ಹೆಗಡೆ

ವಿಶೇಷ ಲೇಖನ

ದನದ ಕರುಳನ್ನು ಉಪ್ಪಿನಲ್ಲಿ ಒಣಗಿಸಿ ಕೊಳವೆಯಂತೆ ಕತ್ತರಿಸಿ ಅದರಲ್ಲಿ ಮಸಾಲೆ ಮಾಂಸ ತುಂಬಿ ಕರಿದು 'ಸಾಸೇಜ್' ಎಂಬ ತಿಂಡಿಯನ್ನು ತಯಾರಿಸಲಾಗುತ್ತದೆ. ಕರುಳನ್ನು ದಾರದಂತೆ ಸೀಳಿ, ಗಾಯಕ್ಕೆ ಹೊಲಿಗೆ ಹಾಕುವ ದಾರವನ್ನಾಗಿ ಬಳಸಲಾಗುತ್ತದೆ.

ದನಗಳ ಪಿತ್ಥಕೋಶದ ಕಲ್ಲುಗಳನ್ನು ಪಾಲಿಶ್ ಮಾಡಿ ಆಭರಣ ತಯಾರಕರು ಹರಳುಗಳಂತೆ ಕೂರಿಸುತ್ತಾರೆ.

ಪ್ಲೈವುಡ್‌ನಲ್ಲಿ ಕಟ್ಟಿಗೆಯ ತೆಳು ಹಾಳೆಗಳನ್ನು ಅಂಟಿಸಲು ದನಗಳ ರಕ್ತವನ್ನು ಗೋಂದಿನಂತೆ ಸಾಂದ್ರೀಕರಿಸಿ ಬಳಸುತ್ತಾರೆ. ಕಟ್ಟಡಗಳಿಗೆ ಬೆಂಕಿ ಬಿದ್ದಾಗ ಉಪಯೋಗಿಸುವ ಅಗ್ನಿಶಾಮಕ ನೊರೆಯನ್ನೂ ದನಗಳ ರಕ್ತದ ಪುಡಿಯಿಂದಲೇ ತಯಾರಿಸಲಾಗುತ್ತದೆ. ಮಿಕ್ಕಿದ ಪುಡಿ ರಸಗೊಬ್ಬರದ ಉತ್ಪಾದನೆಗೆ ಹೋಗುತ್ತದೆ. ಕೃಷಿ ಕೆಲಸದಲ್ಲಿ ದುಡಿಯುವ ಮಹಿಳೆ ತೀರ ದುರ್ಬಲಳಾಗಿದ್ದರೆ ಅನಿಮಿಯಾ ಕಾಯಿಲೆ ಇದೆಯೆಂದು ಡಾಕ್ಟರು ಬರೆದುಕೊಡುವ ಐರನ್ ಟ್ಯಾಬ್ಲೆಟ್‌ಗೂ ದನದ ರಕ್ತವೇ ಮೂಲದ್ರವ್ಯ.

ದನಗಳ ಎಲುಬಿನ ಪುಡಿಯಿಂದಲೇ ಸಕ್ಕರೆಗೆ ಅಚ್ಚ ಬಿಳಿಬಣ್ಣ ಬರುತ್ತದೆ. ಪಿಂಗಾಣಿ ವಸ್ತುಗಳ ತಯಾರಿಕೆಯಲ್ಲೂ ಇದು ಬೇಕೇಬೇಕು. ಅತ್ಯುಚ್ಚ ಗುಣಮಟ್ಟದ ವಿಶೇಷ ಉಕ್ಕಿನ ತಯಾರಿಕೆಗೆ ಮೂಳೆಪುಡಿಯನ್ನು ಸೇರಿಸಬೇಕಾಗುತ್ತದೆ. ಎಲುಬಿನಿಂದ ತಯಾರಿಸಲಾದ ಬಟನ್‌ಗಳಿಗೆ ಈ ಪ್ಲಾಸ್ಟಿಕ್ ಯುಗದಲ್ಲೂ ಬೇಡಿಕೆ ಇದೆ.

ದನಗಳ ಎಲುಬು ಮತ್ತು ಕೊಬ್ಬು ಎರಡರಿಂದಲೂ 'ಟ್ಯಾಲೊ' ಎಂಬ ವಿಶೇಷ ಬಗೆಯ ಎಣ್ಣೆಯನ್ನು ತೆಗೆಯುತ್ತಾರೆ. ಭಕ್ಷಣೆಗೆ ಯೋಗ್ಯವಲ್ಲದ ಟ್ಯಾಲೊ ಎಣ್ಣೆಯನ್ನು ಬ್ರೇಕ್ ದ್ರವ ಮತ್ತು ಜೆಟ್ ವಿಮಾನಗಳ ಕೀಲೆಣ್ಣೆಯನ್ನು ಉತ್ಪಾದನೆಗೆ ಕಚ್ಚಾ ಪದಾರ್ಥವಾಗಿ ಬಳಸುತ್ತಾರೆ. ಮೋಂಬತ್ತಿಗೆ ಇದೇ ಮೂಲವಸ್ತು, ನಟನಟಿಯರು ಕೃತಕ ಕಣ್ಣೀರು ಹರಿಸಲೆಂದು ಬಳಿದುಕೊಳ್ಳುವ ಗ್ಲಿಸರಿನ್ ಕೂಡ ಇದೇ ಟ್ಯಾಲೊದಿಂದಲೇ ಬರುತ್ತದೆ. ಇದರಿಂದ ಸಾಬೂನು, ಡಿಟರ್ಜೆಂಟ್‌ಗಳೂ ತಯಾರಾಗುತ್ತವೆ. ವಿವಿಧ ಬಗೆಯ ಕಿವಿಗೆ ಹಾಕುವ ಹನಿಗಳು, ಕಣ್ಣಿಗೆ ಹಾಕುವ ಹನಿಗಳು, ಕೆಮ್ಮಿನ ಔಷಧಗಳು, ಕಂಡೀಶನರ್‌ಗಳು, ಶಾಂಪೂಗಳು ಎಲ್ಲವಕ್ಕೂ ಗ್ಲಿಸರೀನೇ ಮೂಲದ್ರವ್ಯ. ಇದರ ಬಣ್ಣಬಣ್ಣದ ಇಂಕು, ಕಾರುಗಳ ಪೇಂಟ್ ಮೇಲೆ ಹಚ್ಚುವ ಪಾಲಿಶ್, ಕಾರಿನ ಇಂಧನ ಚಳಿಯಲ್ಲೂ ಹೆಪ್ಪುಗಟ್ಟದಂತೆ ನೋಡಿಕೊಳ್ಳುವ ಆಂಟಿ... ಮಿಶ್ರಣಗಳು ಎಲ್ಲವಕ್ಕೂ ಗ್ಲಿಸರಿನ್ ಬೇಕು.

ಕಣ್ಣೀರು ಹಾಗಿರಲಿ, ಸಹಜ ನೀರೂ ತೊಟ್ಟಿಕ್ಕದಂತೆ 'ವಾಟರ್ ಪ್ರೂ... ಅಂಟುಗಳ ತಯಾರಿಕೆಗೂ ಕಚ್ಚಾ ಟ್ಯಾಲೊ ಬಳಕೆಯಾಗುತ್ತದೆ. ಆಹಾರವ... ಪ್ಯಾಕಿಂಗ್ ಮಾಡಲು ಬೇಕಾದ ವಿಶೇಷ ಬಗೆಯ ಎಣ್ಣೆಕಾಗದವೂ ಇದರಿ... ತಯಾರಾಗುತ್ತದೆ. ನಾನಾ ಬಗೆಯ ಆಂಟಿಬಯಾಟಿಕ್ ಔಷಧಗಳೂ ...

ಇನ್ನು ಮೂಳೆ, ಗೊರಸು ಮತ್ತು ಕೊಂಬುಗಳನ್ನು ಕಾಯಿಸಿದಾಗ ಭಕ್ಷ್ಯ... ಟ್ಯಾಲೊ ಎಣ್ಣೆ ದೊರಕುತ್ತದೆ. ಇದು ಚ್ಯೂಯಿಂಗ್ ಗಮ್, ಬೇಕರಿ ಖಾ... ಬಳಕೆಯಾಗುತ್ತದೆ.

ದನಗಳ ಅಂಗಾಂಶಗಳನ್ನು ಜೋಡಿಸುವ ಕೊಲಾಜಿನ್ ಎಂಬ ... ಭಾರೀ ಬೇಡಿಕೆ ಇದೆ. ಚರ್ಮವನ್ನು ಹಿಂಡಿದಾಗಲೂ ಕೊಲಾಜಿನ್ ಸಿ... ಇದರ ವೈದ್ಯಕೀಯ ಉಪಯೋಗದ ಪಟ್ಟಿಯೇ ಸಾಕಷ್ಟು ದೀರ್ಘವಿದೆ. ... ನಾಗರಿಕರಿಗೆ ಮೂತ್ರ ವಿಸರ್ಜನೆ ಅನಿಯಂತ್ರಿತವಾದಾಗ ಇದನ್ನೇ ಚುಚ್ಚು... ಔಷಧವಾಗಿ ಕೊಡುತ್ತಾರೆ. ಗಾಯಗಳಿಗೆ ಸುತ್ತಲೆಂದು ನಂಜುನಿರೋ... ಬ್ಯಾಂಡೇಜ್‌ಗಳ ತಯಾರಿಕೆಗೆ ಇದೇ ಬೇಕು. ಗಾಯ ಒಣಗಿದನಂತರ ಆ... ಗೀರು ಬಿದ್ದಿದ್ದರೆ, ಸುರೂಪ ಚಿಕಿತ್ಸಕರು ಅದನ್ನು ಮರೆಮಾಚಲೆಂದು ಕೊ... ತುಂಬುತ್ತಾರೆ. ಕಣ್ಣಿನ ಪೊರೆ ನಿವಾರಣೆಗೆ ಪಾಪೆ ಕವಚವಾಗಿ ಕೊಡ... ನೆರವಿಗೆ ಬರುತ್ತದೆ. ಇನ್ನು ಖಾದ್ಯ ಉದ್ಯಮದಲ್ಲಂತೂ ಇದೇ ಕೊ... ಪಾತ್ರವನ್ನು ಹೇಳುವುದೇ ಬೇಡ. ಜೆಲಟಿನ್ ಪುಡಿ ಇದರಿ... ತಯಾರಾಗುತ್ತದೆ. ಜೆಲ್ಲಿ, ಜಾಮ್‌ಗಳಿಗೆ ಇದಿಲ್ಲದಿದ್ದರೆ ಆಗು... ಬಹಳಷ್ಟು ಸೌಂದರ್ಯವರ್ಧಕ ದ್ರವ್ಯಗಳಲ್ಲಿ ಕೊಲಾಜಿನ್ ... ಇದ್ದೇ ಇರುತ್ತದೆ. ಜತೆಗೆ ತರಾವರಿ ಮುಲಾಮು, ನೋವು ... ಎಣ್ಣೆಗೆಲ್ಲ ಇದೇ ಬೇಕು. ಫೋಟೊಗ್ರಫಿ, ಸಿನಿಮಾ ... ತಯಾರಿಕೆಗೂ ಇದು ಕಚ್ಚಾವಸ್ತುವಾಗಿ ಬಳಕೆಯಾಗುತ್ತದೆ. ... ನಟ ನಟಿಯರ ಮುಖದಲ್ಲಿ ಸುಕ್ಕುಗಳು ಕಾಣಿಸದಂತೆ ... ವೃದ್ಧಾಪ್ಯನಿರೋಧಕ ಕ್ರೀಮ್ ಕೂಡ ಇದರಿಂದಲೇ ತಯಾರಾ...

ಮಲಿನ ಗಾಳಿಯನ್ನು ಸೋಸಲು ಇಂದು ಬಳಕೆಯಾಗ... ವಿಧವಿಧದ ಫಿಲ್ಟರ್‌ಗಳನ್ನು ದನಗಳ ಕೂದ... ತಯಾರಿಸಲಾಗುತ್ತದೆ. ನೀವು ಕೂತಿದ್ದ ಕಾರಿನ ... ತುಂಬಾ ದುಬಾರಿಯದಾಗಿದ್ದರೆ, ಅದು ವಿಶೇ... ಸಂಸ್ಕರಿಸಿದ ದನದ ಚರ್ಮದ್ದೇ ಇದ್ದೀತು.

ಇದು ಸಂಕ್ಷಿಪ್ತ ಗೋಚರಿತ್ರೆ. ಇಷ್ಟೆಲ್ಲ ವಿ... ಕೈಗಾರಿಕೆಗಳಲ್ಲಿ ಬಳಕೆಯಾದ ನಂತರವೂ ... ಗೋದ್ರವ್ಯಗಳು ಕಸಾಯಿಖಾನೆಗಳಲ್ಲಿ ಉಳಿದಿರುತ್ತವೆ. ಅವನ್ನೆಲ್ಲ ಬಾಚಿ ... ಪುಡಿ ಮಾಡಿ, ಪಶು ಆಹಾರವಾಗಿ ಗೋವುಗಳಿಗೆ ತಿನ್ನಿಸಿದ್ದರಿಂದಲೇ ... ಶರೀರದಲ್ಲಿ ಪ್ರಯಾನ್ ಎಂಬ ಪ್ರಳಯಕಾರಿ ಪ್ರೋಟೀನುಗಳು ಉತ್ಪಾದ... ಹುಚ್ಚುಹಸು ಕಾಯಿಲೆ ಬಂತೆಂದು ಹೇಳಲಾಗುತ್ತದೆ. ಕಸಾಯಿಖಾನೆಯ ... ಕಚಡಾ ವಸ್ತುಗಳನ್ನು ಶಾಖೋತ್ಪನ್ನ ವಿದ್ಯುತ್ ಘಟಕಗಳಲ್ಲಿ ಇಂ... ಉರಿಸುವ ಸಂಪ್ರದಾಯ ಆರಂಭವಾಗಿದೆ. ಯಾರಿಗೆ ಗೊತ್ತು ನೀವು ... ಬೆಳಕಿನಲ್ಲಿ ಇದನ್ನು ಓದುತ್ತಿದ್ದರೆ, ಅದರಲ್ಲೂ ದನದ ಕಾಣಿಕೆ ಇದ್ದಿರಲೂಬ... ಮತ್ತೆ ದನಗಳ ಬಿಡಿಭಾಗವನ್ನು ಸುಟ್ಟ ನಂತರ ಉಳಿಯುವ ಹಾರುಬೂದಿ... ಈಚೆಗೆ ಸಿಮೆಂಟ್ ಇಟ್ಟಿಗೆ ತಯಾರಿಸುತ್ತಾರೆ. ಅಂದಮೇಲೆ ಗೋ... ಮೇಲೂ ದನದ ನೆರಳು ಬಿದ್ದಿರಲೇಬೇಕು. ನಿಮ್ಮದು ಹಾರುಬೂದಿಯ... ಅಲ್ಲದಿದ್ದರೆ ಬಿಡಿ. ಸಾದಾ ಇಟ್ಟಿಗೆಯ ಗೋಡೆಗೆ ಪ್ಲಾಸ್ಟರ್ ಹಾಕಿ... ಮೇಲೆ 'ಪುಟ್ಟಿ'ಯ ಲೇಪನ ಕೊಟ್ಟು ನಂತರ ಬಣ್ಣ ಹೊಡೆದಿರಬೇಕಲ್ಲ? ಪುಟ್ಟಿಯ ತಯಾರಿಕೆಗೆ ದನಗಳ ಗೊರಸು ಅಥವಾ ಕೋಡುಗಳಿಂದ ... ಜಲಟಿನ್ ಎಂಬ ಅಂಟುದ್ರವವೇ ಕಾರಣ!

'ಇದು ಮುಗಿಯುವ ಕತೆಯೇ ಅಲ್ಲ' ಎನ್ನುತ್ತ ಪುಟ ಮಗುಚ... ಹೊರಟಿರಾ? ಹೊರಡುವ ಮುನ್ನ ಇಲ್ಲಿ ಮುದ್ರಿತವಾದ ಅಕ್ಷರಗಳತ್ತ ಕಣ್ಣು ಹಾಯಿಸಿ. ಇದಕ್ಕೆ ಬಳಸಿದ ಇಂಕಿನಲ್ಲಿ ಕೂಡ ಗೋವಿನ ಅಂ...

ಇನ್ನೂ ಹೆಚ್ಚಿನ ಮಾಹಿತಿ ಬೇಕೆಂದಿದ್ದರೆ ...

http://www.rense.com/general6/co...

(ಈ ಲೇಖನವನ್ನು 'ಅಕ್ಷರ ಪ್ರಕಾಶನ'ದವರು ಪ್ರಕಟಿಸಿದ ... ಹೆಗಡೆ ಅವರ 'ಆಯ್ದ ಬರಹಗಳು' ... ಸಂಕಲನದಿಂದ ಆಯ್ದುಕೊಳ್ಳಲಾ...)

ಮೆಡಿಕಲ್ ಕಾಲೇಜು ಹಗರಣ


...ಮುಣಾರು ಕಂಡುಕೊಂಡ ಒಳಮಾರ್ಗವೇ ಸುಳ್ಳು ಸರ್ಟಿಫಿಕೇಟ್. ...ನ್ನೆ ಕಾಲೇಜಿನಲ್ಲಿ ಬೇಕಾದಷ್ಟು ವರ್ಷಗಳು ಕೆಲಸ ಮಾಡಿದ್ದೆವು ...ಕೊಂಡು ಬಂದರು. ಬೇರೆ ಮೆಡಿಕಲ್ ಕಾಲೇಜುಗಳು ಈ ರೀತಿ ...ವಿಗೆಲ್ಲಾ ಸರ್ಟಿಫಿಕೇಟ್ ಬರೆದುಕೊಡುವಷ್ಟು ಕೆಟ್ಟು ಹೋಗಿರಲಿಲ್ಲ. ...ರಿನ ಆದಿಚುಂಚನಗಿರಿ ಸಂಸ್ಥಾನದ ಜಗದ್ಗುರುಗಳ ನೇತೃತ್ವದಲ್ಲಿ ...ನ ಮೆಡಿಕಲ್ ಕಾಲೇಜು, ಸುಳ್ಯದ ಕುರುಂಜಿ ವೆಂಕಟರಮಣಗೌಡ ...ಲೇಜುಗಳು ಎಗ್ಗೂ ಸಿಗ್ಗಿಲ್ಲದೇ ಬರೆದುಕೊಟ್ಟರು.

...ಚನಗಿರಿ ಕಾಲೇಜು ದಯಪಾಲಿಸಿದ ಸರ್ಟಿಫಿಕೇಟ್ ಪಡೆದುಕೊಂಡ ...ಲು ವೈದ್ಯರು ಹಿಡಿದ ಸ್ಥಾನಗಳನ್ನು ನೋಡಿದರೆ ಗಾಬರಿಯಾಗುತ್ತದೆ. ...ಮು ಸಣ್ಣ ಪಟ್ಟಿಯನ್ನು ಮಾತ್ರ ಇಲ್ಲಿ ಕೊಟ್ಟಿದ್ದೇವೆ.

...ಮೆಡಿಕಲ್ ಕಾಲೇಜು–ಡಾ.ಗಂಗಾಧರ್ ಮೆಡಿಕಲ್ ಕಾಲೇಜಿನ ... ಡಾ.ರಾಜಶೇಖರ್ ಮೆಡಿಸಿನ್ ಪ್ರೊಫೆಸರ್, ರವಿಕುಮಾರ್ ...ಫೆಸರ್, ಡಾ.ಶ್ರೀರಂಗ ಮೂಳೆ ಅಸೋಸಿಯೇಟ್ ಪ್ರೊಫೆಸರ್, ...ಮ್‌ಕುಮಾರ್ ಮೆಡಿಸಿನ್ ಪ್ರೊಫೆಸರ್ (ಹಾಲಿ ಆರೋಗ್ಯ ವಿವಿ

...ಗ - ಡಾ.ರವೀಂದ್ರ ಅನಸ್ತೇಷಿಯಾ ವಿಭಾಗ ಮುಖ್ಯಸ್ಥರು, ...ಡಿಸಿನ್ ವಿಭಾಗ ಮುಖ್ಯಸ್ಥರು, ಡಾ ತಾಶೀಲ್ದಾರ್, ಆರ್ಥೋ ...ಮುಖ್ಯಸ್ಥರು

...ಬರೋಬ್ಬರಿ 15 ಮಂದಿ. ಡಾ.ಸಂದೀಶ್ (ಲೀಡಿಂಗ್ ಅಡ್ವೋಕೇಟ್ ...ದೇವರ ಪುತ್ರ, ಮಂಡ್ಯದ ಲೀಡಿಂಗ್ ಸರ್ಜನ್)- ಸರ್ಜರಿ ...ಮುಖ್ಯಸ್ಥರು, ಡಾ.ಜಿ.ಎಂ.ಪ್ರಕಾಶ್ (ಕಾವೇರಿ ಹೋರಾಟ ಖ್ಯಾತಿಯ ಜಿ.ಮಾದೇಗೌಡರ ಹಿರಿಯ ಪುತ್ರ)- ಮೆಡಿಸಿನ್ ಪ್ರೊಫೆಸರ್, ಡಾ.ಕೆ.ಎಂ .ಶಿವಕುಮಾರ್- ಮೆಡಿಸಿನ್ ವಿಭಾಗ ಮುಖ್ಯಸ್ಥರು, ಡಾ.ಎಚ್.ಸಿ.ಸವಿತಾ (ಪೀಠ ಸಂಸ್ಥೆಯ ಅಧ್ಯಕ್ಷ, ಶಿಕ್ಷಣ ತಜ್ಞ, ಮಾಜಿ ಶಾಸಕರಾದ ಎಚ್.ಡಿ.ಚೌಡಯ್ಯನವರ ಪುತ್ರಿ ಮತ್ತು ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಮೋಹನ್‌ರ ಪತ್ನಿ), ಡಾ.ಕಾವ್ಯಶ್ರೀ (ಶಿಕಾರಿಪುರ ಮೂಲದ ಈಕೆ ಸುಳ್ಯ ಮೆಡಿಕಲ್ ಕಾಲೇಜು ಪ್ರಾರಂಭವಾಗುವುದಕ್ಕೆ ಮುಂಚೆಯೇ ಅಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಸರ್ಟಿಫಿಕೇಟು ತಂದ ಖ್ಯಾತಿ ಹೊಂದಿದ್ದಾರೆ), ...-ಅನಸ್ತೇಷಿಯಾ ವಿಭಾಗದ ಮುಖ್ಯಸ್ಥರು . . ಹೀಗೇ ಇನ್ನೂ ... ಇದೆ.



...ಡಿಕಲ್ ಕಾಲೇಜಿನಿಂದ ಸುಳ್ಳು ಸರ್ಟಿಫಿಕೇಟ್ ತಂದವರ ಪಟ್ಟಿ ... ಚಿಕ್ಕದಷ್ಟೇ. ಇನ್ನೂ ಉಳಿದ ಮೂರು ಮೆಡಿಕಲ್ ಕಾಲೇಜುಗಳಲ್ಲಿ ...ಗಳಿಂದ ಎಷ್ಟು ಜನರಿಗೆ ಸರ್ಟಿಫಿಕೇಟ್ ನೀಡಲಾಗಿದೆ ಎಂಬುದನ್ನು ...ನಿಖೆ ನಡೆಯಬೇಕಾಗಿದೆ.

...ಸಂಖ್ಯೆಯ ಎಚ್‌ಓಡಿಗಳನ್ನು, ಪ್ರೊಫೆಸರ್‌ಗಳನ್ನು, ನಿರ್ದೇಶಕರನ್ನು ...ಡಿಮೆ ಅವಧಿಯಲ್ಲಿ ಸೃಷ್ಟಿ ಮಾಡಿದ ಪೂಜ್ಯ ಆದಿಚುಂಚನಗಿರಿ ...ಅಮೂಲ್ಯ ಕೊಡುಗೆಯನ್ನು ಪರಿಗಣಿಸಿ ರಾಜೀವ್‌ಗಾಂಧಿ ಆರೋಗ್ಯ ...ಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್‌ಅನ್ನು ಸಹ

ಜೆಡಿಎಸ್‌ನ ಇಬ್ಬಗೆ ನೀತಿ

...ಸಂಸ್ಥಾನಾಧೀಶ ರೇವಣ್ಣನವರು ಅಲ್ಲಿನ ಮೆಡಿಕಲ್ ಕಾಲೇಜಿನ ...ತು ಅಬ್ಬರಿಸಿದರು. ಇಲ್ಲಿಯವರೆಗೆ ಅವರು ಯಾಕೆ ಸುಮ್ಮನಿದ್ದರು ...ಹ ಬಂದೇ ಬರುತ್ತದೆ.. ಜೆಡಿಎಸ್‌ನ ಮುಖ್ಯಮಂತ್ರಿ ಇದ್ದ ... ಎಲ್ಲಾ ಮೆಡಿಕಲ್ ಕಾಲೇಜುಗಳು ಪ್ರಾರಂಭವಾದದ್ದು. ಅದೇ ...ನೋ, ಬೇರೆ ಜಿಲ್ಲೆಗಳ ಜೆಡಿಎಸ್ ನಾಯಕರು ಇದುವರೆಗೆ ...ಲ್ಲ, ಇದ್ದುದರಲ್ಲಿ ಜೆಡಿಎಸ್ ಪ್ರಬಲವಾಗಿರುವ ಮಂಡ್ಯದಲ್ಲಿ ...ಕ್ರಮಗಳು ನಡೆದರೂ, ಐದು ಜನ ಶಾಸಕರು, ಒಬ್ಬ ಎಂಪಿ ...ಇಲ್ಲದಿರುವುದು ಏಕೆ ಎಂಬ ಪ್ರಶ್ನೆಯಂತೂ ನಾವು ಕೇಳಬೇಕಿದೆ. ...ಸ್ವಾಮಿ ಆರೋಗ್ಯ ಮಂತ್ರಿಯಾಗಿದ್ದಾಗಲೇ ಮಂಡ್ಯದ ಮೆಡಿಕಲ್ ...ಜೂರಾಗಿದ್ದು, ಇದನ್ನು ಸಾಧನೆ ಎಂದು ಬತ್ತರಿಸಿಕೊಳ್ಳುವವರು ...ಗಳಿಗೆ ಕಡಿವಾಣ ಹಾಕಲೂ ಮುಂದಾಗಬೇಕಲ್ಲವೇ?


...ಎಂಸಿಐ ಎಂಬ ಬೆದರುಬೊಂಬೆ

...ಮು ನೇಮಕಾತಿ ಮಾಡಿಕೊಳ್ಳುವುದರಲ್ಲಿ ಒಂದು ಲೋಕೋಪ ...ಶವಿತ್ತು ಎಂದು ಈ ವೈದ್ಯ ಮಹಾಶಯರು ಹೇಳಿಕೊಳ್ಳುತ್ತಾರೆ. ...ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ನಿಯಮಾವಳಿಗಳ ... ಮೆಡಿಕಲ್ ಕಾಲೇಜಿನಲ್ಲೂ ಇಂತಿಷ್ಟು ಮಂದಿ, ಇಂತಹ ...ಬೋಧಕ ಸಿಬ್ಬಂದಿ ಇರಬೇಕು, ಕಟ್ಟಡ ಹೀಗಿರಬೇಕು, ವೈದ್ಯಕೀಯ ...ತ್ರೆಯಲ್ಲಿನ ಸೌಲಭ್ಯಗಳು ಹೀಗಿರಬೇಕು ಎಂದಿದೆ. ಹಾಗಾಗಿ ...ಕೆಗಾಗಿ ತರಾತುರಿಯಲ್ಲಿ ನೇಮಕಗಳನ್ನು ಮಾಡಿಕೊಂಡಿದ್ದೇವೆ ...ಾಗುತ್ತದೆ.

...ಸ್ತವದಲ್ಲಿ ತಮಗೆ ಬೇಕಾದವರಿಗೆ ಒಳ್ಳೆಯ ಹುದ್ದೆ ಕಲ್ಪಿಸಲು ... ಹೇಳಿರುವುದೇ ಬಹುತೇಕ ಸಂದರ್ಭದಲ್ಲಿ ನಡೆದಿದೆ. ಅದೇ ...ೂ, ಅರ್ಹತೆಯಿದ್ದವರನ್ನು ನೇಮಿಸಿಕೊಳ್ಳದಿರುವುದು, ಎಂಸಿಐ ...ತ ಹೆಚ್ಚಿನವರನ್ನು ನೇಮಕ ಮಾಡಿಕೊಂಡಿರುವುದು ನಡೆದಿದೆ. ... ಕಾರಣ ಎಂಬುದಕ್ಕೆ, ಇವರುಗಳು ಉತ್ತರ ಹೇಳಬೇಕಿದೆ. ...ಕಡೆಯಿಂದಲೂ ಉತ್ತರ ಕೇಳುವ ತನಿಖೆಯಾಗಬೇಕಿರುವುದಷ್ಟೇ

• ಚೀರನಹಳ್ಳಿ ಲಕ್ಷ್ಮಣ್

ಸಾಹಿತ್ಯದ ರಾಜ್ಯಪಾಲ ಕಿ.ರಂ.



ಕಿ.ರಂಗೆ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಮತ್ತು ಸಾಹಿತ್ಯ ಪ್ರಚಾರಕ ಪ್ರಶಸ್ತಿ ದೊರಕಿದ ಹಿನ್ನೆಲೆಯಲ್ಲಿ ಹುಟ್ಟೂರಾದ ಹಾಸನ ಜಿಲ್ಲೆಯಲ್ಲಿ ಒಂದು ಅಭಿನಂದನಾ ಸಮಾರಂಭವನ್ನು ಏರ್ಪಡಿಸಬೇಕೆಂಬ ಹಲವಾರು ಮಿತ್ರರ ಒತ್ತಾಯಕ್ಕೆ ಅವರೇನೂ ಮಣಿದಿರಲಿಲ್ಲ. ಹೀಗಾಗಿ ಅಭಿನಂದನಾ ಸಮಾರಂಭವೆಂಬ ಪದವನ್ನು ಕೈ ಬಿಟ್ಟು, ಅದೇ ಕಾರ್ಯಕ್ರಮವನ್ನು ವಿಚಾರ ಸಂಕಿರಣ ಮತ್ತು ಕವಿಗೋಷ್ಠಿಯೆಂಬ ಹೆಸರಿನಿಂದ ಕರೆದಿದ್ದರಿಂದ ಕಿ.ರಂ ತಮ್ಮ ಕಾವ್ಯ ಪ್ರೀತಿಯಿಂದ ಸಂಘಟಕರ ಹುನ್ನಾರಕ್ಕೆ ಬಲಿ ಬಿದ್ದು ಒಪ್ಪಿಕೊಂಡಿದ್ದರು. ಹೀಗಾಗಿ ಸೆಪ್ಟೆಂಬರ್ ತಿಂಗಳ ಹತ್ತೊಂಭತ್ತರಂದು ಈ ಕಾರ್ಯಕ್ರಮ ನಿಗದಿಯಾಗಿತ್ತು, ಆದರೆ ವಿಧಿಯಾಟವೇ ಬೇರೆ ಇತ್ತು, ನಿಗದಿಯಾಗದಿದ್ದ ಕಾರ್ಯಕ್ರಮಕ್ಕೆ ಅವರ ಪೂರ್ವಾನುಮತಿಯನ್ನು ಕೋರದೆ ಕಿ.ರಂ ಅವರನ್ನು ಸೆಳೆದೊಯ್ದಿತು. ಹೀಗಾಗಿ ಅಭಿನಂದನಾ ಕಾರ್ಯಕ್ರಮದ ಬದಲಿಗೆ ಕಿ.ರಂ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಚರಿಸಬೇಕಾಯಿತು.

ಸೆಪ್ಟೆಂಬರ್ 5 ರಂದು ಅಧ್ಯಾಪಕರ ದಿನಾಚರಣೆಯ ದಿನ ಕಿ.ರಂ ನೆನಪಿನ ದಿನವನ್ನಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಪ್ರೇರಣಾ ವಿಕಾಸ ವೇದಿಕೆ ಹಾಗೂ ಸಂವೇದನಾ ಸಾಂಸ್ಕೃತಿಕ ಅಕಾಡೆಮಿಯ ಸಹಭಾಗಿತ್ವದಲ್ಲಿ ಹಾಸನ ನಗರದಲ್ಲಿ ಆಯೋಜಿಸಲಾಗಿದ್ದ 'ಕಿ.ರಂ ಚಿಂತನೆ ಮತ್ತು ಸಾಹಿತ್ಯ' ಗೋಷ್ಠಿಯಲ್ಲಿ ಅವರ ಭಾವದುಂಬಿದ ನೆನಪುಗಳು, ವಿಕ್ಷಿಪ್ತ ವ್ಯಕ್ತಿತ್ವದ ವರ್ಣನೆ ಹಾಗೂ ಕಾವ್ಯ ಪ್ರೀತಿಯ ಬಗ್ಗೆ ಸಂವಾದ ನಡೆಯಿತು. ಸ್ವಾಗತ ಭಾಷಣ ಮಾಡಿದ ಅಕಾಡೆಮಿಯ ರಿಜಿಸ್ಟ್ರಾರ್ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿಯವರು ಕಿ.ರಂಗೂ ಮಳೆಗೂ ಇರುವ ಅವಿನಾಭಾವ ಸಂಬಂಧದ ಬಗ್ಗೆ ಪ್ರಸ್ತಾಪಿಸುತ್ತ "ಕಿ.ರಂಗೆ ಅಕಾಡೆಮಿಯ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿಯೂ ಮಳೆ, ಅವರ ಸಾವಿನ ಸಂದರ್ಭದಲ್ಲಿಯೂ ಮಳೆ ಮತ್ತು ಈಗಲೂ ಮಳೆ " ಎಂದು ನೆನಪಿಸಿಕೊಂಡು "ಬರೆದದ್ದೆಲ್ಲಾ ಸಾಹಿತ್ಯವಾಗೋದಿಲ್ಲ; ಆದರೆ ಕಿ.ರಂ ಸಾವಿರಾರು ವರ್ಷಗಳ ಮೌಖಿಕ ಪರಂಪರೆಯ ಚಿಂತಕ'' ಎಂದು ಹೇಳಿದ್ದು ಸಮಯೋಚಿತವಾಗಿತ್ತು.

ಕವಯಿತ್ರಿ ಮತ್ತು ಪ್ರೇರಣಾ ವಿಕಾಸ ವೇದಿಕೆಯ ಅಧ್ಯಕ್ಷೆಯಾದ ರೂಪಾ ಹಾಸನ್ ಈ ಕಾರ್ಯಕ್ರಮದ ಪ್ರಮುಖ ಪ್ರೇರಣಾ ಶಕ್ತಿಯಾಗಿದ್ದು, ಮಹತ್ವದ ವಿಮರ್ಶಕ ಚಿಂತಕ, ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ, ಮನುಷ್ಯ ಪ್ರೀತಿಯ ಮನುಷ್ಯನೊಬ್ಬ ಕಿತ್ತಾನೆ ಎಂಬ ಗ್ರಾಮದಿಂದ ಕನ್ನಡ ಸಾಹಿತ್ಯದ ಪರಿಚಾರಕನಾದ ಬಗೆಯನ್ನು ವಿಸ್ಮಯದಿಂದ ಅವಲೋಕಿಸಿ, "ಕಿ.ರಂ ಅವರ ಮಾತು, ಕೆಲಸ, ಹೋರಾಟ ಚಳವಳಿ ಮೊದಲಾದುವೆಲ್ಲ ಮಾಧ್ಯಮದಲ್ಲಿ ದಾಖಲಾಗಬೇಕು" ಎಂದು ಅಭಿಪ್ರಾಯ ಪಟ್ಟರು.

ಕಣ್ಣಂಚಿನ ಪಸೆಯನ್ನು ಅಲ್ಲಲ್ಲಿಯೇ ಇಂಗಿಸುತ್ತಾ ಮಾತನಾಡಿ, ಕೆದರಿದ ಕೂದಲು, ಕನ್ನಡಕದ ಗಾಜು ಮತ್ತು ಖಾದಿಯ ಬ್ಯಾಗಿನೊಡನೆ ಹಾಗೂ ಅಪಾರ ತಾತ್ವಿಕ ಸಿಟ್ಟಿನೊಂದಿಗೆ ಕೂಡಿದ ಕಿ.ರಂರ ಅಕ್ಷರ ಚಿತ್ರವನ್ನು ಮನಮುಟ್ಟುವಂತೆ ಬಿಡಿಸಿಕೊಟ್ಟವರೆಂದರೆ ಬಸವರಾಜ ಕಲ್ಗುಡಿಯವರು. "ಕಿ.ರಂನೊಡನೆ ಸಾಹಿತ್ಯದ ಅಧ್ಯಯನವು ರಸಾಸ್ವಾದನೆಯ ಅದ್ಭುತ ಲೋಕಕ್ಕೆ ಕೊಂಡೊಯ್ಯುತ್ತಿತ್ತು, ಅವರು ಸಾಹಿತ್ಯವನ್ನು ತನ್ನ ಉಸಿರಿನ ಹಾಗೆ ಉಸಿರಾಡಿದವರು. ಕಾಲವೆಂಬುದನ್ನು ಇನ್ನೊಬ್ಬರಿಗಾಗಿ ಮತ್ತು ಕನ್ನಡಕ್ಕಾಗಿ ವ್ಯಯಿಸಿದವರು" ಎಂದ ಅವರು "ಒಂದು ಕವನದ ಒಳಸತ್ವವನ್ನು ಹಿಡಿಯುವ ವಿಶಿಷ್ಟ ಪ್ರತಿಭೆಯಾಗಿದ್ದ ಅವರಿಗೆ ಫ್ರಾಯ್ಡ್ ಹೇಳುವಂತೆ ವಿಚಿತ್ರವಾದ ಹುಡುಕುವ ಇನಸ್ಟಿಂಕ್ಟ್ ಇತ್ತು. ಸಾಮಾನ್ಯ ಕವಿತೆ ಕೂಡ ಕಿ.ರಂ ಸ್ಪರ್ಶಕ್ಕೆ ಒಳಗಾದಾಗ ವಿಶೇಷ ಹೊಳಹುಗಳನ್ನು ಬೀರುವ ಮತ್ತು ಅರ್ಥವ್ಯಾಪ್ತಿಯನ್ನು ಹೊಂದಿದ ಅಸಮಾನ್ಯ ಕವಿತೆಯಾಗುತ್ತಿತ್ತು ಹಾಗೂ ಅವರ ಕೆದಕುವ ವಿನ್ಯಾಸ ಅವರ ಮನೋಧರ್ಮವಾಗಿತ್ತು, ಕಾವ್ಯದ ಬಗ್ಗೆ ಮಾತನಾಡುವಾಗ ಉನ್ಮಾದದ ರೀತಿಯ ತಾದ್ಯಾತ್ಮತೆಯಿಂದ ಕೂಡಿ, ಕಾವ್ಯಮೀಮಾಂಸೆಯ ಪರಿಕಲ್ಪನೆಯನ್ನು ಧ್ವನಿ ತತ್ವದಾಚೆ ಹಿಡಿದಿಡುತ್ತಿದ್ದರು" ಎಂದು ಕಿ.ರಂ ಅವರ ವ್ಯಕ್ತಿತ್ವವನ್ನು ವಿಶ್ಲೇಷಿಸಿದರು.

"ರೂಪಾತ್ಮಕವಾಗಿ ಮಾತನಾಡುತ್ತಿದ್ದ ಕಿ.ರಂಗೆ ಕನ್ನಡ ಸಾಹಿತ್ಯ ಅಕ್ಷಯ ಪಾತ್ರೆಯಂತೆ ಇತ್ತು ಹಾಗೂ ಅವರು ಬರೆಹ ಮತ್ತು ಕೇಳುಗೆ ನಡುವೆ ವೇಗವರ್ಧಕವಾಗಿದ್ದರು ಮತ್ತು ಬರೆಹದ ಹೊಳಹನ್ನು ಸಮುದಾಯಕ್ಕೆ ಮಾತಿನ ಮೂಲಕ ದಾನ ಮಾಡುತ್ತಿದ್ದರು. ಕಾವ್ಯದ ಅರ್ಥವನ್ನು ಹೇಳಬಹುದು ಆದರೆ ಕಾವ್ಯದ ಅನುಭವ ಮತ್ತು ಅನುಭಾವವನ್ನು ಹೇಳೋಕಾಗಲ್ಲ. ಪಂಪನಿಂದ ಹಿಡಿದು ಆಧುನಿಕ ಕನ್ನಡ ಸಾಹಿತ್ಯದ ಬರಹಗಾರರವರೆಗೂ ಕಿ.ರಂ ಅವರ ಓದುವಿಕೆಗಾಗಿ ಕಾಯುತ್ತಿದ್ದರೇನೋ. ಮಾತಿನ ಚೈತನ್ಯವನ್ನು ಬರಹದಲ್ಲಿ ಇಳಿಸಬಹುದೆಂಬುದರ ಬಗ್ಗೆ ಅವರಿಗೆ ನಂಬಿಕೆ ಇರಲಿಲ್ಲ; ಕಿ.ರಂ ಕಟ್ಟಿದ್ದಾರಲ್ಲಾ ಅದೇ ಅವರ ಬರಹ."

"ವಿಮರ್ಶಕ ಎಂಬ ಪದದ ಬಗ್ಗೆ ಕಿ.ರಂಗೆ ಅಸಹನೆ ಇತ್ತು, ಕಾವ್ಯದಲ್ಲಿ ಸಮರಸದ ಸಿದ್ಧಾಂತಕ್ಕೆ ಪ್ರತಿಯಾಗಿ ವಿರಸ ಮತ್ತು ಸಮರಸವೆಂಬ ಈ ಎರಡೂ ಕಲ್ಪನೆಗಳೊಡನೆ ಕಿ.ರಂ ಆಟವಾಡಿದ್ದಾರೆ" ಎಂದ ಕಲ್ಗುಡಿಯವರು ಭಾವುಕರಾಗಿ, ಕ್ಷಣಕಾಲ ಮಾತನ್ನು ನಿಲ್ಲಿಸಿ "ಎಲ್ಲೋ ಇದಾನೆ, ಬರ್‍ತಾನೆ ಅನಿಸುತ್ತೆ" ಎಂದು ಮಾತನ್ನು ಮುಗಿಸಿ ಅಕ್ಷರದ ಮೂಲಕ ಕಿ.ರಂ ಅವರ ವ್ಯಕ್ತಿ ಚಿತ್ರಣವನ್ನು ಸಮರ್ಥವಾಗಿ ಮೂಡಿಸಿದರು.

ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎಮ್.ಎಚ್.ಕೃಷ್ಣಯ್ಯನವರು ಮಿತವಾದ ಭಾಷಣ ಮಾಡುತ್ತ "ವಿಮರ್ಶೆಯು ಸಹೃದಯ ವಿಮರ್ಶೆ ಮತ್ತು ಆಸ್ವಾದನೆಯನ್ನು ಒಳಗೊಂಡಿರುತ್ತದೆ, ಕಿ.ರಂ ವಿಧಾನವು ಲಿವಿಂಗ್ ಕ್ರಿಟಿಸಿಸಮ್. ಕನ್ನಡದಲ್ಲಿ ಜೀವಂತ ವಿಮರ್ಶೆ ಅಂದರೆ ಅರ್ಥಾನ್ವಯವಾಗುವುದಿಲ್ಲ, ಆದುದರಿಂದ ಬದಲಾವಣೆ ಮತ್ತು ಬೆಳವಣಿಗೆಗಳನ್ನು ತನ್ನೊಳಗೆ ಹೀರಿಕೊಂಡಿರುವ ಜೀವಸತ್ವವಿರುವ ವಿಮರ್ಶೆ. ಪ್ರತಿಯೊಬ್ಬ ಸಹೃದಯನೂ ಮತ್ತು ಓದುಗನು ಬರಹಗಾರನ ಬರವಣಿಗೆಯನ್ನು ಪೂರ್ಣಗೊಳಿಸುತ್ತಾನೆ; ಪ್ರತಿಯೊಬ್ಬ ವೀಕ್ಷಕನೂ ಕೂಡಾ ಒಬ್ಬ ಕಲಾವಿದನ ಕಲಾಕೃತಿಯನ್ನು ಪೂರ್ಣಗೊಳಿಸುತ್ತಾನೆ. ಮುಂದಿನ ತಲೆಮಾರಿಗೆ ಕಿ.ರಂ ಅವರನ್ನು ಹೇಗೆ ಮುಟ್ಟಿಸಬೇಕೆಂಬ ಆಲೋಚನೆಯನ್ನು ಅವರ ಅಭಿಮಾನಿಗಳು ಮತ್ತು ಅವರ ಒಡನಾಡಿಗಳು ಪೂರ್ಣಗೊಳಿಸಬೇಕು" ಎಂದು ಹೇಳಿ ಈ ಬಗ್ಗೆ ಅಕಾಡೆಮಿಯ ಪೂರ್ಣ ಬೆಂಬಲವಿದೆಯೆಂದು ನುಡಿದರು.

"ಶಿಶುನಾಳ ಶರೀಫರು ಪಿಸುದನಿಯಲ್ಲಿ ಹೇಳಿದ್ದನ್ನು ಕಿ.ರಂ ಗಟ್ಟಿದನಿಯಲ್ಲಿ ಹೇಳಿದರು. ಹಿ ವಾಸ್ ಎ ಲೆಜೆಂಡ್'' ಎಂದು ನುಡಿದ ಹಿ.ಶಿ. ರಾಮಚಂದ್ರೇಗೌಡರು ಕಿ.ರಂ ಅವರಿಗೆ ಸಂಬಂಧಿಸಿದಂತೆ ಒಂದು ಸ್ವಾರಸ್ಯಕರವಾದ ಪ್ರಸಂಗವನ್ನು ನೆನಪಿಸಿಕೊಂಡರು. ಒಮ್ಮೆ ಕಿ.ರಂ, ತಮ್ಮ ಲಹರಿಯಲ್ಲಿ ರಾತ್ರಿಹೊತ್ತಿನಲ್ಲಿ ಹಕ್ಕಿಯು ಹಾಡುತಿದೆ ನೋಡಿದಿರಾ ಎಂದು ಗುನುಗುನಿಸುತ್ತಾ ಮುಸ್ಲಿಮರ ಮೊಹಲ್ಲಾದಲ್ಲಿ ಕಾಲಿಟ್ಟು ಹಾಗೆಯೇ ಒಂದು ಜಗುಲಿಯ ಮೇಲೆ ಠಿಕಾಣಿ ಹೂಡಿದಾಗ ಗಾಬರಿಗೊಳಗಾದ ಆ ಮನೆಯ ಮಹಿಳೆಯು ಪೊಲೀಸರಿಗೆ ಫೋನ್ ಮಾಡಿ, ಆಕೆಯ ದೂರಿನ ಮೇರೆಗೆ ಕಿ.ರಂ ಠಾಣೆಯ ಮೆಟ್ಟಿಲೇರಬೇಕಾದ ಪ್ರಸಂಗವೇರ್ಪಟ್ಟಿತು. ಆಗ ಪೊಲೀಸಿನವರು ಅವರ ವಿಳಾಸವನ್ನು ಕೇಳಿದಾಗ, ತಮ್ಮ ಕೈಯಾರೆ, ತಮ್ಮ ವಿಳಾಸವನ್ನು 'ವೆಂಕಟಸುಬ್ಬಯ್ಯ ಕರ್ನಾಟಕದ ರಾಜ್ಯಪಾಲ' ಎಂದು ಬರೆದಿದ್ದನ್ನು ನೆನಪಿಸಿಕೊಂಡ ಹಿ.ಶಿ. ರಾಮಚಂದ್ರೇಗೌಡರು "ಕಿ.ರಂ ಸಾಹಿತ್ಯದ ರಾಜ್ಯಪಾಲರು'' ಎಂದು ಅಭಿಪ್ರಾಯಪಟ್ಟರು. ಗಡಿಗಳನ್ನು ಮತ್ತು ಮಿತಿಗಳನ್ನು ಸೃಷ್ಟಿಸುವುದು ಪ್ರಭುತ್ವದ ಲಕ್ಷಣ. ಕಿರಮ್ ಪ್ರತಿಭೆಯ ಮಿತಿಗಳನ್ನು ದಾಟಿದವರು" ಎಂದು ಸ್ಮರಿಸಿದರು.

ಈ ಎಲ್ಲಾ ಮಾತಿನ ಸಂದರ್ಭದಲ್ಲಿಯೇ ನನ್ನ ಮನ ಹಿಂದಕ್ಕೋಡಿತು. ನಾನು ಹಾಸನದ ಪ್ರಥಮ ದರ್ಜೆ ಕಾಲೇಜಿನ ಪದವಿ ತರಗತಿಯ ವಿದ್ಯಾರ್ಥಿನಿಯಾಗಿದ್ದಾಗ ಕಿ.ರಂ ಅವರ ಸಹೋದರಿ ಜಯಲಕ್ಷ್ಮಿ ನನ್ನ ಸಹಪಾಠಿ ಮತ್ತು ಸ್ನೇಹಿತೆಯಾಗಿದ್ದಳು. ಅಣ್ಣ ಕಿ.ರಂಗೆ ತದ್ವಿರುದ್ಧವಾದ ಆಜಾನುಬಾಹು ವ್ಯಕ್ತಿತ್ವ ಆಕೆಯದು, ಅವಳನ್ನು ನಾವು 'ಕೀರಮ್' ಎಂದು ಪೀಡಿಸುತ್ತಿದ್ದ ನೆನಪು. ಹೀಗಾಗಿ 'ಕೀರಮ್'ಳ ಅಣ್ಣ ಕಿ.ರಂ ಎಂದು ಅಜ್ಞಾತ ಪರಿಚಯವಿದ್ದರೂ, ಆಗಿದ್ದ ವಿರುದ್ಧ ಲಿಂಗಿಗಳ ನಿಷಿದ್ಧ ಸ್ನೇಹದ ಗಡಿಗಳಾಚೆ ನಿಂತು ಕೇವಲ ದೂರದಿಂದ ನಿರುಕಿಸುತ್ತಿದ್ದೆವು.

ಸುಮಾರು ಒಂದು ವರ್ಷದ ಹಿಂದೆ ಕಿ.ರಂ ಹಾಸನದ ಕೋರ್ಟಿನ ಬಾಗಿಲ ಬಳಿ ಇದ್ದ ಕೇಸನ್ನು ಕೂಗುವಾತನ ಬಳಿ ನಿಂತು ವಿಶೇಷ ಚರ್ಚೆಯಲ್ಲಿ ಮುಳುಗಿದ್ದರು; ಎಂದಿನಂತೆ ತಮ್ಮ ಖಾದಿ ಬ್ಯಾಗಿನೊಡನೆ. ನಾನು ಹೋಗಿ ಅವರನ್ನು ಕೇಳಿದಾಗ, ತಮ್ಮದೊಂದು ಪ್ರಕರಣ ನ್ಯಾಯಾಲಯದಲ್ಲಿ ನಡೆಯುತ್ತಿದೆಯೆಂತಲೂ, ಅದರ ಸಲುವಾಗಿ ಬಂದಿರುವುದೆಂತಲೂ ಹೇಳಿದರು. ಅವರನ್ನು ಕೋರ್ಟಿನೊಳಗೆ ಕರೆದುಕೊಂಡು ಹೋಗಿ, ಅಲ್ಲಿ ಕುಳಿತಿದ್ದ ವಕೀಲರೊಬ್ಬರಿಗೆ ಕಿ.ರಂ ರವರ ಪರಿಚಯ ಮಾಡಿಸಿ ಅವರ ಸೀಟನ್ನು ಖಾಲಿ ಮಾಡಿಸಿ ಕಿ.ರಂ ಅವರನ್ನು ಕೂರಿಸಿ ಬಂದೆ. ಅವರ ಕೋರ್ಟಿನ ಕೆಲಸ ಮುಗಿದ ಮೇಲೆ ನನ್ನನ್ನು ಹುಡುಕಿಕೊಂಡು ಬಂದರು. ಕ್ಯಾಂಟೀನಿನಲ್ಲಿ ನಾವಿಬ್ಬರೂ ಕುಳಿತಿದ್ದಾಗ ಕೋರ್ಟಿನಲ್ಲಿ ಆಗತಾನೇ ಜನ್ಮ ತಾಳಿದ್ದ ಕವಿತೆಯೊಂದನ್ನು ಅವರ ಕೈಗಿಟ್ಟೆ. ಒಂದು ಗಂಟೆಯವರೆಗೂ ಅದರ ಬಗ್ಗೆ ಮಾತನಾಡಿದ ಕಿ.ರಂ ನನ್ನ ಎಲ್ಲಾ ಕವಿತೆಗಳ ಬಗ್ಗೆ ವಿವರಗಳನ್ನು ಪಡೆದಿದ್ದೂ ಅಲ್ಲದೆ ಕೂಡಲೇ ಅದನ್ನು ಪ್ರಕಟಿಸಬೇಕೆಂಬ ತುರ್ತು ಆದೇಶವನ್ನು ಕೂಡ ಹೊರಡಿಸಿದರು. ನೀವೇ ಮುನ್ನುಡಿಯನ್ನು ಬರೆದುಕೊಡಿ ಎಂಬ ನನ್ನ ಬೇಡಿಕೆಯನ್ನು ಅಲ್ಲಿಯೇ ರದ್ದುಗೊಳಿಸಿದ ಅವರು ನನಗೆ ಮುನ್ನುಡಿಯ ಅವಶ್ಯಕತೆಯೇ ಇಲ್ಲವೆಂತಲೂ, ಆ ನನ್ನ ಕವಿತೆಯೇ ನನ್ನ ಮುನ್ನುಡಿ ಎಂತಲೂ ಹೇಳಿದ್ದೂ ಅಲ್ಲದೆ ನನ್ನ ಇತರೆ ಯಾವ ಕವನಗಳನ್ನು ಕೂಡ ಓದದೆ, ನನ್ನ ಕವನ ಸಂಕಲನವು ಕನ್ನಡ ಸಾಹಿತ್ಯ ಲೋಕದಲ್ಲಿ ಸಂಚಲನವನ್ನು ಉಂಟು ಮಾಡುತ್ತದೆಂತಲೂ ಘೋಷಿಸಿಬಿಟ್ಟರು. ಇದಲ್ಲವೇ ಕಿ.ರಂ ವಿಧಾನ?

• ಬಾನು ಮುಷ್ತಾಕ್

ಹುಬ್ಬಳ್ಳಿ: ಮೂರು ಸಾವಿರ ಮಠದ ಭಂಡ ಸ್ವಾಮಿ
ಮಾರ್ವಾಡಿಗಳಿಗೆ ಮಠದ ಆಸ್ತಿ ಕೊಟ್ಟ



ಹುಬ್ಬಳ್ಳಿಯ ಮೂರು ಸಾವಿರದ ಮಠದ ರಗಳೆಗಳಿಗೆ ಅಂತ್ಯವೇ ಇಲ್ಲವೇನೋ? ಕೆಲವರ್ಷಗಳ ಹಿಂದೆ ಇಲ್ಲಿ ಪೀಠಕ್ಕಾಗಿ ಇಬ್ಬರು ಸ್ವಾಮಿಗಳ ನಡುವೆ ವಾರ್ ನಡೆದು, ಭಕ್ತರಲ್ಲೇ ಎರಡು ಗುಂಪುಗಳಾಗಿ ರಾಜ್ಯಾದ್ಯಂತ ಜನರಲ್ಲಿ ವಾಕರಿಕೆ ಹುಟ್ಟಿಸಿತ್ತು. ರಾಜಿ, ಕಬೂಲಿ, ರಾಜಕಾರಣ, ಧರ್ಮಕಾರಣಗಳೆಲ್ಲ ನಡೆದು ಹಾನಗಲ್ ಮಠದ ಕುಮಾರಸ್ವಾಮಿಯು ಗುರುಸಿದ್ಧಸ್ವಾಮಿ ಎಂಬ ನವ ಅಂಕಿತನಾಮದೊಂದಿಗೆ ಮೂರು ಸಾವಿರ ಮಠದ ಪೀಠ ಏರಿದ್ದಾಯಿತು. ನಂತರ ಸಣ್ಣಪುಟ್ಟ ಸಮಸ್ಯೆ ಎದ್ದಿದ್ದು ಬಿಟ್ಟರೆ ಮಠ ಸುದ್ದಿಯಲ್ಲಿರಲಿಲ್ಲ. ಆದರೆ ಈಗ ಗುರುಸಿದ್ಧಸ್ವಾಮಿ ಒಳಗೊಳಗೆ ನಡೆಸಿದ ಆಸ್ತಿ ಮಾರಾಟ ಬಯಲಿಗೆ ಬಂದು ಹುಬ್ಬಳ್ಳಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ನಿತ್ಯಚರ್ಚೆಯ ವಿಷಯವಾಗಿದೆ.

ಹಾನಗಲ್‌ನಲ್ಲಿ ಹಾಸಿಗೆ ಪುರಾಣದಿಂದ ಕುಖ್ಯಾತಿ ಹೊಂದಿದ್ದ ಕುಮಾರಸ್ವಾಮಿ ಯಾವಾಗ ಗುರುಸಿದ್ದ ಸ್ವಾಮಿಯಾಗಿ ಮೂರುಸಾವಿರ ಮಠಕ್ಕೆ ಕಾಲಿಟ್ಟನೋ ಅವಾಗಲೇ ಈ ಮಠಕ್ಕೆ ಶನಿ ವಕ್ಕರಿಸಿದಂತಾಗಿದೆ. ಸದಾ ರಂಖಲು ಖಯಾಲಿಯ ಈ ಸ್ವಾಮಿ ಸದ್ಯ ಮಠದ ಆಸ್ತಿಗಳಿಗೆ ಕೈ ಹಚ್ಚಿದ್ದಾನೆ. ಹಾನಗಲ್ ವಿರಕ್ತಮಠದ 42 ಆಸ್ತಿಗಳನ್ನು ಮಾರವಾಡಿಗಳಿಬ್ಬರಿಗೆ ಗಪ್‌ಚುಪ್ಪಾಗಿ ಅನಾಮತ್ತು 15 ಕೋಟಿ ರೂ.ಗೆ ಪರಭಾರೆ ಮಾಡಿ ಕೈ ತೊಳೆದುಕೊಂಡಿದ್ದಾನೆ.

ಹಾವೇರಿ ಜಿಲ್ಲೆ ಹಾನಗಲ್ ಶಹರದ ಕುಮಾರಸ್ವಾಮಿಗಳ ವಿರಕ್ತಮಠವೆಂದರೆ ಇಡೀ ಉತ್ತರ ಕರ್ನಾಟಕ ಭಾಗದ ಲಿಂಗಾಯತ ಸಮುದಾಯದ ಜೀವಾಳ. ಅಷ್ಟೇ ಅಲ್ಲ, ಸುದೀರ್ಘ ಇತಿಹಾಸವನ್ನು ಹೊಂದಿದ ಶ್ರೇಷ್ಠ ಧಾರ್ಮಿಕ ಕ್ಷೇತ್ರ. ಅಂತಹ ಪೀಠದಲ್ಲಿ ಕುಳಿತಿದ್ದ ಗುರುಸಿದ್ದ ಹೇಳಿಕೊಳ್ಳುವಂತಹ ಒಂದು ಸಾತ್ವಿಕ, ಧಾರ್ಮಿಕ ಕೆಲಸ ಮಾಡಲಿಲ್ಲ, ಬದಲಾಗಿ ತನ್ನ ರಂಖಲು, ತೆವಲುಗಳಿಂದ ಪ್ರಚಾರ ಪಡೆದುಕೊಂಡಿದ್ದ. ಇವನ ಇತರೆ ಸಮಸ್ಯೆಗಳನ್ನು ಬಗೆಹರಿಸುವುದೇ ಉದಾಸಿ ಸೇರಿದಂತೆ ಇನ್ನುಳಿದ ಹಿರಿತಲೆಗಳ ಕೆಲಸವಾಗಿತ್ತು. ಮೂರು ಸಾವಿರ ಮಠದ ಉತ್ತರಾಧಿಕಾರಿ ಜಗಳ ಸುಪ್ರೀಂ ಕೋರ್ಟು ಮೆಟ್ಟಲೇರಿ ತಿಪಟೂರಿನ ರುದ್ರಮುನಿ ಸ್ವಾಮಿ ಮೂಜಗಂ ವಿರುದ್ಧ ತೊಡೆ ತಟ್ಟಿ ನಿಂತಾಗ ಲಿಂಗಾಯತ ಮುಖಂಡರೆಲ್ಲಾ ಸೇರಿ ರಾಜಿ ಪಂಚಾಯತಿ ಮಾಡಿ ಮೂಜಗಂ ಉತ್ತರಾಧಿಕಾರಿಯನ್ನಾಗಿ ಗುರುಸಿದ್ದನನ್ನು ನೇಮಿಸಿದರು. ಇದು ಮೂಜಗಂ ಅವರಿಗೇ ಇಷ್ಟವಿರಲಿಲ್ಲ, ಹೀಗಾಗಿ ಮೂಜಗಂ ಗುರುಸಿದ್ದನಿಗೆ ಸುಮಾರು ಒಂದೂವರೆ ವರ್ಷ ಯಾವ ಅಧಿಕಾರವನ್ನು ನೀಡದೇ, ಅವನೊಂದಿಗೆ ಮಾತನ್ನೂ ಆಡದೇ ಇದ್ದರು. ಆದರೆ ಮೂಜಗಂ ನಿಧನದ ನಂತರ ಗುರುಸಿದ್ದನ ಅಸಲಿ ಕರಾಮತ್ತು ತಣ್ಣಗೆ ಶುರುವಾಗಿಬಿಟ್ಟಿತು. ಸತ್ಕಾರ್ಯಕ್ಕಾಗಿ ದಾನಿಗಳು ಮಠಕ್ಕೆ ದಾನ ನೀಡಿದ ಆಸ್ತಿಗಳನ್ನು ತನ್ನ ಸ್ವಂತ ಆಸ್ತಿಗಳಂತೆ ಸದ್ದಿಲ್ಲದೆ ಪರಭಾರೆ ಮಾಡಿದ ಗುರುಸಿದ್ದನ ಪವಾಡದಿಂದ ಮೂಜಗಂ ಆತ್ಮ ಸಮಾಧಿಯಲ್ಲೇ ಕಣ್ಣೀರಾಕಿರಬೇಕು. ಆದರೆ ಮೂರು ಸಾವಿರ ಮಠದ ಉಸ್ತುವಾರಿ ಸಮಿತಿಯ ವಿಜಯ ಸಂಕೇಶ್ವರ, ಬಸವರಾಜ ಬೊಮ್ಮಾಯಿ, ಹೊರಟ್ಟಿ, ಮುನವಳ್ಳಿ, ಲಿಂಬಿಕಾಯಿ ಹಾಗೂ ಜಗದೀಶ ಶೆಟ್ಟರ ಮಾತ್ರ ಈ ವಿಷಯದಲ್ಲಿ ತಮಗೇನೂ ಸಂಬಂಧವಿಲ್ಲ ಎಂಬಂತೆ ಸೈಡ್ ಹಚ್ಚಿದ್ದಾರೆ. ಇಡೀ ಲಿಂಗಾಯತ ಸಮಾಜ ಸ್ವಾಮಿಯ ಈ ವಂಚನೆಯಿಂದ ಕಂಗಾಲಾಗಿದೆ.



ಸೈಲೆಂಟಾಗಿ ಮಾರವಾಡಿಗಳಿಗೆ ಮಾರಿಬಿಟ್ಟ!

ಹುಬ್ಬಳ್ಳಿ ಶಹರದ ಹೃದಯಭಾಗದಲ್ಲಿರುವ ಹಾನಗಲ್ ಮಠದ ಕೋಟ್ಯಾಂತರ ರೂ.ಗಳ ಬೆಲೆ ಬಾಳುವ 42 ಆಸ್ತಿಗಳು ಈಗ ಮಾರವಾಡಿ ಬಡ್ಡಿ ಕುಳಗಳಿಬ್ಬರ ಸ್ವತ್ತಾಗಿದೆ. ದೋ ನಂಬರ್ ದಂಧೆಯ ಕುಳಗಳಾದ ಪಟ್ಟೆಗಾರ ಸತ್ಯನಾರಾಯಣ ಪ್ರೇಮನಾಥಜಿ ರಾಯಬಾಗಿ ಮತ್ತು ಬಳ್ಳಾರಿಯಿಂದ ವಲಸೆ ಬಂದಿರುವ ಮಾರವಾಡಿ ದಿಲೀಪ ಬಾಬುಲಾಜಿ ಮುನೋಟ್ ಎಂಬುವರೇ ಗುರುಸಿದ್ದನಿಂದ ಕೇವಲ 97 ಲಕ್ಷಗಳಿಗೆ ಪವರ್ ಆಫ್ ಅಟಾರ್ನಿ ಬರೆಯಿಸಿಕೊಂಡು, ಹಾಗೆಯೆ ದಾಖಲೆಗಳಲ್ಲಿ ತೋರಿಸಿದ್ದಾರೆ. ಆದರೆ ಸ್ವಾಮಿ ಅನಾಮತ್ತು 15 ಕೋಟಿ ಹಣವನ್ನು ಈ ಇಬ್ಬರಿಂದ ಪಡೆದಿದ್ದಾನೆ ಎಂಬ ಪುಕಾರು ಜೋರಾಗಿದೆ. ಗುರುಸಿದ್ದನ ಬಲಗೈ ಬಂಟ ಕುರಡಗಿಮಠ ಇದೆಲ್ಲಾ ವ್ಯವಹಾರ ಕುದುರಿಸಿದ್ದು ರಹಸ್ಯವಾಗಿ ಈ ದಾಖಲೆ ತಯಾರಿಸಿದ್ದಾನೆ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲೂ ಇದರ ವಾಸನೆ ಹರಡಲು ಬಿಟ್ಟಿಲ್ಲ! ಒಬ್ಬ ಸಬ್ ರಿಜಿಸ್ಟ್ರಾರನಿಗೆ ಬಿಟ್ಟರೆ ಬೇರಾರಿಗೂ ಇದು ಗೊತ್ತೇ ಇರಲಿಲ್ಲ! ಆದರೆ ಗುರುಸಿದ್ದ ಏಕಾಏಕಿ ಈ ಆಸ್ತಿಗಳನ್ನು ಏಕೆ ಪರಭಾರೆ ಮಾಡಿದ ಎಂಬ ಪ್ರಶ್ನೆ ಕೂಡಾ ಈಗ ಉದ್ಭವಿಸಿದೆ. ಅದೇನೇ ಇರಲಿ, ಹುಬ್ಬಳ್ಳಿಯ ಪದ್ಮಾ ಟಾಕೀಸಿಗೆ ಹೊಂದಿಕೊಂಡಿರುವ, ಪಕ್ಕದ ರಸ್ತೆಯ ಮ್ಯಾದಾರ ಓಣಿಯವರೆಗಿರುವ ಈ ಆಸ್ತಿಗಳ ಕನಿಷ್ಠ ಮೌಲ್ಯವೇ 50-60 ಕೋಟಿ! ಅಂತಹುದರಲ್ಲಿ ಕೇವಲ 97 ಲಕ್ಷಕ್ಕೆ ಪರಭಾರೆ ಮಾಡಿದ್ದಾನೆಂದರೆ ಗುರುಸಿದ್ದನ ವೈಯಕ್ತಿಕ ಕಮಾಯಿ ಜೋರಾಗಿಯೇ ಇರಬೇಕಲ್ಲವೇ?

42 ಆಸ್ತಿಗಳನ್ನು ತೂರಿದ್ದರ ಬೆನ್ನಹಿಂದೆಯೇ ಗುರುಸಿದ್ದನ ತಲೆಗೆ ಷೇರಿನ ಜ್ವರ ಬಂದು ಅಮರಿಕೊಂಡಿದೆ. ಮಠಕ್ಕೆ ಸಂಬಂಧಿಸಿದ ಕೆಲ ಷೇರುಗಳನ್ನು ಸಹ ಸುಮಾರು ನಾಲ್ಕೂವರೆ ಕೋಟಿ ರೂ.ಗಳಿಗೆ ಸ್ವಾಮಿ ಮಾರಿದ್ದಾನೆ ಎಂಬ ಸುದ್ದಿ ಕೂಡಾ ಈಗ ತೇಲುತ್ತಿದೆ.

ಪವರ್ ತನ್ನ ಕೈಗೆ ತಗೊಂಡಿದ್ದಾ...!

ಬದಾಮಿ ತಾಲೂಕಿನ ನಂದಿಕೇಶ್ವರ ಗ್ರಾಮದ ಬಿ.ಜಿ. ಸಂಕಿನಮಠ ಎನ್ನುವವನ ಹೆಸರಿನಲ್ಲಿ ಸುಮಾರು 102 ಆಸ್ತಿಗಳು ಇದ್ದವು. ಗುರುಸಿದ್ದನೇ 2-5-1991ಕ್ಕೆ ಸಂಕಿನಮಠನ ಹೆಸರಿಗೆ ಪವರ ಆಫ್ ಅಟಾರ್ನಿ ಬರೆದುಕೊಟ್ಟಿದ್ದ. ಸಂಕಿನಮಠ ಗುರುಸಿದ್ದನ ಖಾಸಾ ವಲಯದಲ್ಲೇ ಪ್ರಮುಖ. ಇವನ ಡೇ ಅ್ಯಂಡ್ ನೈಟ್ ಸೇವಕನೂ ಹೌದು ಎಂಬ ಮಾತು ಕೂಡ ಇದೆ. ಆದರೆ ಇವನಿಗೆ ಅದ್ಯಾವ ಆಸ್ತಿಯೂ ಮಾರಾಟವಾಗಿರಲಿಲ್ಲ, ಉಸ್ತುವಾರಿ ಜವಾಬ್ದಾರಿ ಮಾತ್ರ ನೀಡಲಾಗಿತ್ತು. ಹೀಗಾಗಿ ಕಳೆದ 9 ವರ್ಷಗಳಿಂದ ಗುರುಸಿದ್ದ ಸಂಕಿನಮಠನನ್ನು ತನ್ನ ಬಗಲಲ್ಲೇ ಇಟ್ಟುಕೊಂಡು ಬಂದಿದ್ದ. ಈಗ ಬಡ್ಡಿ ಕುಳಗಳೊಂದಿಗೆ ಕುದುರಿದ ವ್ಯಾಪಾರಕ್ಕಾಗಿ ಸಂಕಿನಮಠನಿಂದ 9-8-2010 ರಂದು ಹುಬ್ಬಳ್ಳಿ ಸಬ್ ರಿಜಿಸ್ಟ್ರಾರ್ ಎನ್. ಶ್ರೀನಿಧಿ ಅವರ ಸಮ್ಮುಖದಲ್ಲಿ ಪವರ್ ಆಫ್



ಅಟಾರ್ನಿ ವಾಪಸ್ಸು ಪಡೆದು, ಅಂದೇ ವ... ಗಳಿಗೆ ಪರಭಾರೆ ಮಾಡಿದ್ದಾನೆ. ಒಂದೇ ... ಒಂದೇ ಕಚೇರಿಯಲ್ಲಿರುವ ಇಬ್ಬರು ಸಬ್ ... ಗಳನ್ನು ಸ್ವಾಮಿ ಬಳಸಿಕೊಂಡಿದ್ದಾನೆ. ಎನ್. ... ಎಂಬುವರಲ್ಲಿ ಆಸ್ತಿಗಳನ್ನು ತನ್ನ ಹೆಸರಿಗೆ ... ಯಿಸಿ, ಮುಂದೆ ಇನ್ನೊಬ್ಬ ರಿಜಿಸ್ಟ್ರಾ... ವಿಜಯಕುಮಾರ ಬಳಿ 42 ಆಸ್ತಿಗಳನ್ನು ... ಮಾಡಿದ್ದಾನೆ. ಚಾಲಾಕ್ ಸ್ವಾಮಿ ಒಂದೇ ಸ... ಕಚೇರಿಯಲ್ಲೂ ಬರಹೂರ್ ಗೇಮ್ ...

ರಾಯಬಾಗಿ ಮತ್ತು ಮುನೋಟ... ಬರೆದುಕೊಟ್ಟಿರುವ ಪರಭಾರೆ ಪತ್ರದದಲ್ಲಿ ... 16 ಕಂಡಿಷನ್ನುಗಳನ್ನು ನೋಡಿದರೆ ಇದು ... ಅಲ್ಲ, ಮಾರಾಟಕ್ಕೆ ಫುಲ್ ಪವರ್ ನೀ... ಎಂಬುದು ತಿಳಿಯುತ್ತದೆ. ಹಿಂದೆ ಸಂಕಿ... ನೀಡದ ಪವರ್‌ಗಳನ್ನು ಈ ಬಡ್ಡಿಕುಳ ವ... ಗಳಿಗೇಕೆ ನೀಡಿದ್ದಾನೆ? ಹುಬ್ಬಳ್ಳಿ ದೇಶಪಾಂ... ಆಕ್ಸಿಸ್ ಬ್ಯಾಂಕಿನಲ್ಲಿ ಎರಡು ಪೇ ಆ... ಮೂಲಕ ತೊಂಭತ್ತಾರು ಸಾವಿರಗಳ ... ಶುಲ್ಕವನ್ನು ಸತ್ಯನಾರಾಯಣ ರಾ... ಪಾವತಿಸಿದ್ದಾನೆ. ಗುರುಸಿದ್ದನ ಈ ಪವರ್ ... ನೋಡಿದರೆ ಎಂತಾ ಹುಚ್ಚನಿಗೂ ಇದರ... -ಕಷ್ಟರ ಲೆಕ್ಕ ನಡೆದಿದೆ ಎಂಬುದು ಗೊತ್ತಾಗುತ್ತೆ. ಅಸಲಿಗೆ ಮಠ... ಅಲ್ಲದ ಪಕ್ಕಾ ಬಡ್ಡಿ ದಂಧೆಕೋರರಾದ ಈ ಇಬ್ಬರು ಗುರುಸಿದ್ದ... ಪರಿಚಯವಾದರು ಎಂಬುದೇ ಈಗ ಬಲು ಚರ್ಚೆಯ ... ಸಂಕಿನಮಠನಿಂದ ಒಟ್ಟು ವಾಪಸ್ಸು ಪಡೆದಿದ್ದು 102 ಆಸ್ತಿಗಳು. ... ರಾಯಬಾಗಿ ಮತ್ತು ಮುನೋಟಗೆ ಈಗ ಪರಭಾರೆ ಮಾಡಿರು... ಆಸ್ತಿಗಳನ್ನು, ಹಾಗಾದರೆ ಉಳಿದ 60 ಆಸ್ತಿಗಳನ್ನು ಗುರುಸಿ... ಮಾಡಿದ? ಯಾರಿಗೆ ಬರೆದುಕೊಟ್ಟ ಎಂಬುದು ಹ... ಕಮಿಟಿಯವರಿಂದಲೇ ಹೊರಬರಬೇಕಷ್ಟೇ.

ಚೇಲಾಗಳ ಸಾಮ್ರಾಜ್ಯ......

ಮೂಜಗಂ ಹೋದನಂತರ ಎಲ್ಲ ವ್ಯವಹಾರಗಳನ್ನು ತನ್ನ ... ಗುರುಸಿದ್ದ ತೆಗೆದುಕೊಂಡ ನಂತರ ಇವನ ಸುತ್ತಲೂ ಎಲ್ಲ ... ಚೇಲಾಗಳೇ ತುಂಬಿಕೊಂಡಿದ್ದಾರೆ. ಎಲ್ಲರೂ ಸ್ವಾಮಿಯ ವೀಕ್ ... ಇಟ್ಟುಕೊಂಡು ಆಟವಾಡುತ್ತಿದ್ದಾರೆ. ಸದಾ ಗುರುಸಿದ್ದನ ಬಗಲಲ್ಲೇ ... ಕುರಡಗಿಮಠ ಈ ಹಿಂದೆ ಒಂದು ಕೋಟಿ ರೂ.ಗಳ ಚೀಟಿಂಗ್ ... ಮಾಡಿ 12 ವರ್ಷ ಅದೆಲ್ಲೋ ಮಾಯವಾಗಿದ್ದ. ಕಳೆದೆರಡು ವ... ಮತ್ತೆ ಮಠದ ಅಂಗಳದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ. ಇವನ ಹಿಂ... ನವಲಗುಂದ, ಶಿವಾನಂದ ಮುತ್ತಣ್ಣನವರ ಎಂಬ ಇಬ್ಬರಿದ್ದು ... ನುಣ್ಣಗೆ ಬೋಳಿಸುತ್ತಿದ್ದಾರೆ. ಇದೆಲ್ಲ ಒಂದೆಡೆಯಾದರೆ, ಇನ್ನೊ... ಬಾಳೆಹೊಸೂರಿನ ದಿಂಗಾಲೇಶ್ವರ ಸ್ವಾಮಿಗೆ ಗುರುಸಿದ್ದನ ಅದೇ... ಪಾಯಿಂಟ್ ಸಿಕ್ಕಿದೆಯೋ ಏನೋ, ಟೈಮ್ ಸಿಕ್ಕಾಗಲೆಲ್ಲಾ ಸ್ವಾ... ಗದರಿಸಿ ಕೆಲಸ ಕುದುರಿಸಿಕೊಳ್ಳುತ್ತಿದ್ದಾನೆ. ದಿಂಗಾಲಿ ಹೇಳಿದ್ದಕ್ಕೆಲ್ಲಾ ... ಅಲ್ಲಾಡಿಸುವ ಗುರುಸಿದ್ದ ಇತ್ತೀಚೆಗಷ್ಟೇ ಮೂರು ಸಾವಿರ ಮಠ... ಸಂಸ್ಥೆಯಲ್ಲಿ 9 ಜನ ದಿಂಗಾಲಿ ಕಾ... ಗಳನ್ನು ನೇಮಕ ಮಾಡಿಕೊಂಡಿ... ನೌಕರಿ ಪಡೆದವರು ದಿಂಗಾಲಿಗೆ ... ಮಾಡಿದ್ದಾರೆ. ಹೀಗೆ ಗುರುಸಿದ್ದ ... ಪುಢಾರಿಗಳಿಗೆ ಹೆದರಿ ಬದುಕು...

ತಪ್ಪು ಮಾಡದವರು ... ಎಂದು ತನ್ನನ್ನು ತಾನೇ ಸಾಚ... ತೋರಿಸಿಕೊಳ್ಳುತ್ತಿರುವ ಕುಮ... ಅಲಿಯಾಸ್ ಗುರುಸಿದ್ದಸ್ವಾಮಿಗೆ ... ಕೇಳೋರು ಯಾರೂ ಇಲ್ಲವಂ... ಸೋಲ್ ಟ್ರಸ್ಟಿಯಾಗಿದ್ದರಿಂದ ... ಬೇಕಾದರೂ ಮಾಡತಾನಂತೆ... ಹೀಗೆ ಕಳೆದವಾರ ಮೀಡಿಯಾ... ಬಾಯಿ ಹರಿದುಕೊಂಡಿದ್ದಾನೆ. ಆದರೆ ಇವನ ವಿಚಾರಕ್ಕೊಂದು ನೇಮ... 6 ಜನ ಮೇಲುಸ್ತುವಾರಿ ಕಮಿಟಿಯವರು ಇವತ್ತಿಗೂ ಸ್ವಾಮಿ... ಯಾಕೆ ಅಂತ ಕೇಳಿಲ್ಲ! ಅದು ಯಾವಾಗ ಕೇಳುತ್ತಾರೋ? ಕ... ಮಂತ್ರಿಗಳಾದ ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ, ಶಾಸ... ವಿಜಯ ಸಂಕೇಶ್ವರ, ಮೋಹನ ಲಿಂಬಿಕಾಯಿ, ವೀರಣ್ಣ ಮತ್ತಿಗಟ್ಟಿ, ... ಹೊರಟ್ಟಿ ಹಾಗೂ ಶಂಕ್ರಣ್ಣ ಮುನವಳ್ಳಿಗಳೆಂಬ ಹುಬ್ಬಳ್ಳಿಯ... ಮುಕ್ಕಿದ ರಾಜಕೀಯ ತಲೆಗಳೇ ಸೇರಿಕೊಂಡಿವೆ. ಸದ್ಯ ಪರಭಾರೆಯಾ... ಹಾನಗಲ್ ವಿರಕ್ತಮಠದ ಆಸ್ತಿಯಾದರೂ ಅದು ಮೂರುಸಾ... ವ್ಯಾಪ್ತಿಗೆ ಬರುತ್ತದೆ. ಸೋಲ್ ಟ್ರಸ್ಟಿಯಾದ ಸ್ವಾಮಿ ಮಾರಲು... ಹೊಂದಿದ್ದರೂ ಅದು ಭಕ್ತರ ಆಸ್ತಿಯೆಂಬುದು ಮಾತ್ರ ಸುಳ್ಳಲ್ಲ...

ಈಗಲಾದರೂ ಮೇಲುಸ್ತುವಾರಿ ಸಮಿತಿ ಎಚ್ಚೆತ್ತುಕೊಳ್ಳದಿದ್ದರೆ ... ಮೂರು ಸಾವಿರ ಮಠವನ್ನು ಆರು ಸಾವಿರಕ್ಕೆ ಮಾರಿದರೂ ಮಾ...

• ವಿನಯ್ ಹುರ...



ಮುನವಳ್ಳಿ



ಬೊಮ್ಮಾಯಿ



ಉದಾಸಿ




ಹೊರಟ್ಟಿ



ಸಂಕೇಶ್ವರ

ಸ್ತ್ರೀಸಂಗೀತ ಪ್ರವೀಣ ಗುರುಸಿದ್ಧ...




ಈ ಗುರುಸಿದ್ದ ಸ್ವಾಮಿ ಸಾಚಾ ಅಲ್ಲ ಅಂತಾ ಎಲ್ಲರಿಗೂ ಗೊತ್ತು, ಯಾಕೆಂದರೆ ಹಾನಗಲ್ ವಿರಕ್ತಮಠದಲ್ಲಿ ಗುರುಸಿದ್ದ ಶ್ರೀಗಳು ಪಲ್ಲಂಗದಲ್ಲೇ ಸಿಕ್ಕಿಬಿದ್ದ, ಆಗ ದೊಡ್ಡ ರಂಪಾಟವೇ ನಡೆದಿತ್ತು, ಮಂತ್ರಿ ಉದಾಸಿಗೆ ಸ್ಥಳೀಯ ಪ್ರತಿಷ್ಠೆಯಾಗಿದ್ದರಿಂದ ಕ್ಷಣಾರ್ಧದಲ್ಲಿ ಅದನ್ನು ಮುಚ್ಚಿ ಹಾಕಿದ. ಮಠದ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದ ಸೊರಬ ತಾಲೂಕಿನ ಯುವತಿಯೊಬ್ಬಳು ಗುರುಸಿದ್ದನಿಗೆ ಆವಾಗಿನಿಂದ ಹಿಡಿದು ಇಂದಿನವರೆಗೂ ಆಪ್ತಸಖಿಯಾಗೇ ಇದ್ದಾಳೆ. ವೃತ್ತಿಯಿಂದ ಸಂಗೀತಗಾರಳಾಗಿರುವ ಶೋಭಾ (ಹೆಸರು ಬದಲಾಗಿದೆ) ಈಗಲೂ ಧಾರವಾಡದಲ್ಲಿ ವಾಸವಾಗಿದ್ದಾಳಂತೆ. ರಸಿಕ ಗುರುಸಿದ್ದ ಆಗಾಗ ಇವಳಿಂದ ಸಂಗೀತ ಕೇಳುವ ಹವ್ಯಾಸ ಇಟ್ಟುಕೊಂಡಿದ್ದಾನಂತೆ. ಅದರಂತೆ ಇವನ ಆಟಕ್ಕೆ ಹುಬ್ಬಳ್ಳಿ ಧಾರವಾಡದಲ್ಲಿ ಇನ್ನೂ ಇಬ್ಬರು ಗೆಳತಿಯರಿದ್ದಾರಂತೆ.

ಮಾಡುವುದನ್ನೆಲ್ಲಾ ಮಾಡಿ ಈಗ ಕಂಡಕಂಡಲ್ಲಿ ಕೈಕಾಲು ಬೀಳುತ್ತಿದ್ದಾನೆ. ಇದೇ ಪರಿಸ್ಥಿತಿ ಮುಂದುವರೆದಲ್ಲಿ ಗುರುಸಿದ್ದನನ್ನು ಮಠದಿಂದ ಹೊರಹಾಕುವ ಸೂಚನೆಗಳು ಕಾಣಸಿಗುತ್ತಿವೆ. ಇದರಿಂದ ವಿಚಲಿತನಾಗಿರುವ ಗುರುಸಿದ್ದ ಮೊನ್ನೆ ಮಂತ್ರಿ ಜಗದೀಶ ಶೆಟ್ಟರ್‌ರ ತಂದೆ ಹಿರಿಯ ನ್ಯಾಯವಾದಿ ಎಸ್.ಎಸ್. ಶೆಟ್ಟರ್ ಮನೆಗೆ ಹೋಗಿ ಕಣ್ಣೀರು ಹಾಕಿ ಕಾಲು ಬಿದ್ದು ಕಾಪಾಡಿ ಎಂದಿದ್ದಾನೆ. ಪ್ರಾಪರ್ಟಿ ಪರಭಾರೆ ಮಾಡಿದ ಸುದ್ದಿ ಹೊರಬಿದ್ದಾಗಲೇ ಎಚ್ಚೆತ್ತುಕೊಂಡಿರುವ ಗುರುಸಿದ್ದ ತಾನು ಸೇಫ್ ಆಗಲು ಏನು ಬೇಕೋ ಅದನ್ನೆಲ್ಲಾ ಈಗ ಶುರು ಹಚ್ಚಿಕೊಂಡಿದ್ದಾನೆ.

...ಜೆಪಿಗಳತ್ರ ಜಾತಿ, ದುಡ್ಡು ಅನ್ನೋ ಅಸ್ತ್ರವೀಗ!

...ರುತ್ತಿದ್ದಂತೆಯೇ ಕಾಳಮಾವ,
...ಗ್ರಿ, ಅವುನ್ಯಾರ್ಲ ಮಂತ್ರಿ ರಾಜೀನಾಮೆ
..." ಎಂದ.
...ನುಂತರಾಯನ ಗುಡಿ ಪೂಜಾರಿ

...ನಿ ಕಂಧ್ರ, ಅವುನ ಸುದ್ದ್ಯಾಕೆ ಈಗ."
... ಅದೇತರ ಒಬ್ಬ ಮಂತ್ರಿಯಿದ್ದ ಈ
...ಕಿಸುರು ರಾಮಚಂದ್ರಗೌಡ ಅಂತ ಇದ್ರು,
...ಂತ ಹೇಳಿಕೊಳೋನು."
...ಣೀತೆ ಅಂತಿದ್ನ ಅವುನೇನು ಗಂಡಸಲ್ಲವೆ"



...ಮ್ಮಿ.
...ಬ ಕಣೆ, ಆದ್ರೆ ಬೈತಲೆ ಬಾಚಗಂಡು,
...ಮದ ಬಟ್ಟು ಇಕ್ಯತಿದ್ನ, ನಗಾಡಿದ್ರೆ
...ಗೆ ಕಾಣತಿದ್ದ, ಗೌಡ ಅಂತ
...ಮ್ಯಾಲೆ, ಒಂದು ಚೂರಾರ ಗತ್ತಿರಬ್ಯಾಡವೆ,
... ಅವುನಾಕಾರ ಯಾಕೆ ಆಡಿಕಳನ, ಅವುನು
...ಚಿವನಾಗಿದ್ನ ಅವುನ ಕಾಲ್ದಲ್ಲಿ ಇಲಾಕೆಗೆ
...ದ್ರೆ, ಲಂಚ ತಗಂಡು ಅಯೋಗ್ಯರನ್ನೆಲ್ಲ
...ಗಂಡಿದ್ನಂತೆ."
...ದೆವು ಯರಡುಡುಗ್ರವೆ ಕಂಧ್ರ ಅಲ್ಲೀ"
...ಮ್ಮಿ.
...ು ಕೊಟ್ಟಿದ್ರಂತೆ."
...ಟು ಲಕ್ಷ ಕೊಟ್ಟಿದ್ರಂತೆ, ಇನ್ನೂ ಕೊಡಬೇಕು

... ಸಿಕ್ತು ಸಾಕ್ಷಿ, ಈ ತರ ದುಡ್ಡ ತಗಂಡು
...ು ಗೊತ್ತಾಯ್ತು. ಆಗ ಯೋಗ್ಯತೆ ಇರೊ
...ಟಿ ಮಾಡಿದ್ರು. ಆಗ ಕೋರ್ಟು ಉಗಿತು,
...ಗಿಸಿಗಂಡು ಸಾಕಾಗಿರೊ ಎಡೂರಪ್ಪ ಇಡೀ
...ಜಾ ಮಾಡಿಬುಟ್ಟ."
...ಸ ಮಾಡಿದ ಬುಡತ್ತಗೆ."
... ವಳ್ಳೆ ಕ್ಯಲಸ ರಾಮಚಂದ್ರಗೌಡನ
..., ಉಳ್ಳಿಕಂಡ, ಅಲ್ಲಿಗೆ ಎಡೂರಪ್ಪನ
...ಟ್ಟು ಆರು ಜನ ಮಂತ್ರಿಗಳು ನ್ಯಗದು
...ಅತ್ತಗೆ" ಎಂದ ಉಗ್ರಿ.
...ನ್ಯಾರ್ಲ" ಎಂದಳು ಜುಮ್ಮಿ.
...ಲ್ಲಿಗೆ ಉಮೇಸ್‌ಕತ್ತಿ ಅನ್ನೊನ್ನ ಮಂತ್ರಿ
... ಬೆಳ್ಳುಬ್ಬಿಯ ದಬ್ಬಿದ್ರು. ಅವುನು ಅತ್ತೂ
...ಜನ ಅನುಭವಿಸಿ ರಾಜೀನಾಮೆ ಕೊಟ್ಟ."
... ಆಸುಪತ್ರೆಲಿ ಮಲಗಿದ್ದ ಅಲವೆ" ಎಂದ

"ನೋಡ್ರಪ್ಪ ಸೀರಮಾವ ಬೆಳ್ಳುಬ್ಬಿಯ ಯಂಗೆ ಗೆಪ್ತಿ ಮಡಿಕಂಡವ್ರುನೆ."

"ಏ, ನೀವೇ ಹೇಳಿದ್ರಲ್ಲಾ."

"ನಿಜ ನಾನೆ ಹೇಳಿದ್ದೆ. ಆಮ್ಯಾಲೆ ಕಿಸ್ಣಯ್ಯ ಶೆಟ್ಟಿ ಅಂತ ವಬ್ಬ ದಡ್ಡಮಂತ್ರಿ ಇದ್ದ. ದಡ್ಡ ಅಂದ್ರೆ ನಡವಳಿಕೆಲಿ ದಡ್ಡ ಅಷ್ಟೆಯ, ವ್ಯಾಪಾರ ಮಾಡದು, ದುಡ್ಡ ಎಣಿಸಿ ಪೆಟಿಗೇಲಿ ತುಂಬಿಕಳದು, ಹೆಂಡತಿಗೆ ವಡವೆ ಮಾಡಸನು, ತೀರ್ಥಯಾತ್ರೆ ಮಾಡದು, ತೀರ್ಥ ಪ್ರಸಾದ ತಂದು ಮಾರದು, ಆ ದುಡ್ಡ ಬಡ್ಡಿಗೆ ಬುಡದು, ಇಂತ ಆಸಾಮಿ."

"ಸೆಟ್ಟಿ ಅಲವೇನ್ಲ ಅವುನು, ಅವುನ ಕ್ಯಲಸವೆ ಗಂಟು ಮಾಡದಪ್ಪ" ಎಂದ ಕಾಳಮಾವ.

"ಅದ್ನೆ ಸರಕಾರದಲ್ಲೂ ಮಾಡತಿದ್ದ ಕಣಮಾವ, ಹೌಸಿಂಗ್‌ಬೋರ್ಡ್‌ಗೆ ಮನೆಕಟ್ಟಕ್ಕೆ ಜಮೀನು ಬೇಕು ಅಂತ, ತಾನೇ ಜಮೀನು ಖರೀದಿ ಮಾಡಿ, ತಿರಗ ಸರಕಾರಕ್ಕೆ, ಭಾರಿ ದುಡ್ಡಿಗೆ ತಾನೇ ಮಾರತಿದ್ದ. ಅವುನಿಗೆ ದ್ಯಾಬೇರಿ ಅನ್ನೊ ಅಧಿಕಾರಿ ಗೈಡ್ ಮಾಡತಿದ್ದ."

"ದ್ಯಾಬೇರಿ ಅಂದ್ರೇನ್ಲ?"

"ದ್ಯಾಬೇರಿ ಅಂದ್ರೆ ಅಧಿಕಾರಿ ಹೆಸುರು ಕಣೊ, ಕೊಂಗವಾಡ ದ್ಯಾಬೇರಿ ಸೇರಿಕಂಡು ಕಿಷ್ಣಯ್ಯ ಶೆಟ್ಟಿ ಯಾಪಾರಕೆ ಹೆಲ್ಪ್‌ಮಾಡಿದ್ರು, ಶೆಟ್ಟಿ ಸಿಗಾಯ್ಕಂಡ, ಆಗ ಎಡೂರಪ್ಪ ರಾಜೀನಾಮೆ ತಗಂಡು ಸೋಮಣ್ಣನ ಮಂತ್ರಿ ಮಾಡಿದ."

"ಓಹೋ ಸೋಮಣ್ಣ ಮಂತ್ರಿಯಾಗಿದ್ದು ಆಗ್ಲೆಯಾ ಅನ್ನು."

"ಊ, ಸೋಮಣ್ಣ ಮಂತ್ರಿಯಾದ್ರೂ ಯಲಕ್ಷನ್ನಲಿ ಗೆದ್ದು ಬರಬೇಕಾಗಿತ್ತು, ಆಗ ದ್ಯಾವೇಗೌಡ್ರು ತಮ್ಮ ಪಾರ್ಟಿ ಕ್ಯಾಂಡೇಟ್ ಹಾಕದಂಗೆ ಕಾಂಗ್ರೆಸ್ ಕೃಷ್ಣಪ್ಪನ ಮಗನಿಗೆ ಸಪೋರ್ಟು ಮಾಡಿ, ಸೋಮಣ್ಣನ ತಗದ್ರು."

"ದ್ಯಾವೇಗೌಡ ಮನಸು ಮಾಡಿದ್ರೆ ಬುಟ್ಟನೆ."

"ಸೋಮಣ್ಣ ಯಲಕ್ಷನ್ನಲಿ ಸೋತು, ಮಂತ್ರಿಗಿರಿಗೂ ರಾಜೀನಾಮೆ ಬರದ. ಅಲ್ಲಿಗೆ ಮೂರು ಜನೋದ್ರು, ಇನ್ನ ಕರಂದ್ಲಾಜೆಯ ಅನ್ಯಾಯವಾಗಿ ತಗದ್ರು."

"ಅನ್ಯಾಯವೆಯ ಪಾಪ, ಇದ್ದೊಳೆ ವಬ್ಬೆಂಗಸು, ಎಷ್ಟು ಚೆನ್ನಾಗಿ ಇದು ಮಾಡೊಳು."

"ಮಾಡೋಳು ಸರಿಕಣೆ, ಅವುಳದೂ ಸ್ವಲುಪ ಜೋರಾಗಿತ್ತು, ಎಡೂರಪ್ಪನ ಜ್ವತೆಲಿದ್ದಿನಿ ಅಂತ ಒಂದಿಷ್ಟು ಧಿಮಾಕಿತ್ತು, ಆದ್ರು ಅವುಳ ಖಾತೆಯ ಭಾಳ ಚನ್ನಾಗಿ ನಿಭಾಯಿಸ್ತಾಯಿದ್ದ್ಲು."

"ಈಗವುಳ ಕಾತೆ ಎಲ್ಲದ್ಲ" ಎಂದ ಸೀರ.

"ಅವುಳ ಖಾತೆ ಇನ್ನೆಲ್ಲಿದ್ದತೂ ಬ್ಯಾಂಕಲ್ಲಿರತದೆ."

"ಅಂಗಲ್ಲ ಕಂಧ್ರ, ಅವುಳ ಬದ್ಲಿಗ್ಯಾರು ಅಂದೆ."

"ಅವುಳ ಬದ್ಲಿಗೆ ಶೆಟ್ಟರ್ ಅಂತ ಅವುನೆ. ಅದೇನು ಮಾಡ್ತನೊ ಏನೊ ಅಂತೂ ಮಂತ್ರಿ ಅಂತ ಆದ, ಸುಮ್ಮನಾದ ಅತ್ತಗೆ."

"ಅಂಗರೇನ್ಲ ಮಾಡ್ತಯಿವೆ."

"ಅದೇನು ಮಾಡ್ತನೊ ಏನೋ, ಅವುನ್ಗೇಗೊತ್ತು ಇನ್ನ ಹರತಾಳಾಲಪ್ಪನಂತು ರೇಪ್ ಮಾಡಿ ಸಿಗಾಯ್ಕಂಡು ರಾಜೀನಾಮೆ ಬರದು ಊರಿಗೋದ ಅತ್ತಗೆ."

"ಹಾಲಪ್ಪನ ಕತೆ ಮುಗೀತು ಕಣೊ ಉಗ್ರಿ" ಎನ್ನುತ್ತಾ ವಾಟಿಸ್ಸೆ ಬಂದ.

"ಪೋಲಿಟೀಸನ್ನಿಗೆ ಹೋಗಿದ್ದಂತಲ್ಲ ಯಾಕ್ಲ" ಎಂದಳು ಜುಮ್ಮಿ.

"ಅಯ್ಯೊ ಅದೊಂದು ಕತೆಕಣಕ್ಕ, ಈ ದೇಸಕ್ಕೆ ಇನ್ನುಮುಂದೆ ಭವಿಷ್ಯನೆ ಇಲ್ಲ ಕಣಕ್ಕ."

"ದೇಸದ ಬವುಸ್ಯ ಇರ್ಲಿ ನಿಂದೇಳಲೆ."

"ಬಿಂಡಿಗನೂಲೆಲಿ ಯಾವೊನೊ ಸಾಬರುಡುಗ್ನು ಹಿಂದೂ ಹುಡುಗ್ನೂ ವಡದಾಡಿದ್ರು. ಅದು ಅವರ ಪರಸನಲ್ ಜನಗಳ ವ್ಯವಹಾರದ ಜಗಳ. ಅದ್ಕೆ ಜನಗಳ್ಳಲ್ಲ ಸೇರಿ, ಆ ಸಾಬರುಡಗನ್ನ ಓಡಿಸಿಗಂಡೋದ್ರು ಕಣಕ್ಕ, ಅದು ಯಂಗೆ ಅಂತೀ, ಹಂದಿ ಓಡಿಸಿಗಂಡೋಯ್ತರೆ ನೋಡು ಅಂಗೆ. ಆಗ್ಲೆ ನನಿಗೆ ಅಂಗನ್ನಿಸಿದ್ದು ಈ ದೇಶಕ್ಕೆ ಪ್ಯೂಚರಿಲ್ಲ ಅಂತ. ನಾನಾತರ ಡೀಪಾಗಿ ಥಿಂಕ್ ಮಾಡ್ತ ಇರಬೇಕಾದ್ರೆ ಪೊಲೀಸ್‌ನೋರು ಯಳಕಂಡೋಗದೇನಕ್ಕ ನನ್ನ?"

"ಅಂಗರೆ ವಳಿಕಾಕಿದ್ರೆ."

"ಇನ್ನೇನಾಕೋರು ಕಣಕ್ಕ, ಅಷ್ಟರಲ್ಲಿ ನಾನು ಒಂದು ಚೂರು ಇಂಗ್ಲಿಸಲ್ಲೂ ಮಾತಾಡಿದೆ. ತಾಸೀಲ್ದಾರ್ರು ನನ್ನನ್ನ ಎಲ್ಲೊ ನೋಡಿದ್ದಿನಲ್ಲ ಅಂದ್ರು. ಇರಬಹುದು ಬುಡಿಸಾರ್. ಐ ಯಾಮ್ ಜಂಟ್ಲುಮಾನು ಅಂದೆ. ಆಗ ಸರಕೋಲ್ ಇನ್ಸ್‌ಪೆಕ್ಟರು ಬುಟ್ಟು ಕಳಿಸಿದ್ರು. ಆದ್ರೆ ಅಲ್ಲೇ ಇದ್ದು ಅವುರಿಗ್ಯಲ್ಲ ಮಾಹಿತಿ ಹೇಳಿಬಂದೆ ಕಣಕ್ಕ."



"ಏನು ಮಾಯಿತಿ ಹೇಳಿದೆ."

"ಎಲ್ಲೆಲ್ಲಿ ಭಜರಂಗಿ ಜನ ಇರತರೊ, ಅಲ್ಲಿ ಸಮಸ್ಯೆ ಇರತದೆ ಸಾರ್, ಅವುರು ಜಾತಿ ಜಗಳ ಹಚ್ಚದ್ರಲ್ಲಿ ನಿಸ್ಸೀಮರು. ಹೋಗಿ ಸಾಬರ ಕೆಣಕದು, ಆ ಸಾಬರು ಮಚ್ಚತಗಂಡು ಬರದು, ಯಾಕೆ ಅಂದ್ರೆ, ಅವುರ ಸಾವ್ರುಬದುಕಿನ ಪ್ರಶ್ನೆ ಅದು. ಅದ್ಕೆ ಮಚ್ಚ ತಂದು ಹೆದುರಸ್ತಾವೆ. ಆದ್ರಿಂದ ನೀವು ಭಾಳ ಸೂಕ್ಷ್ಮವಾಗಿ ಸಿಚುಯೇಶನ್ನ ಹ್ಯಾಂಡ್ಲು ಮಾಡಿ ಅಂತ ಹೇಳಿಬಂದೆ."

"ಅಂತಾ ಅಧಿಕಾರಿಗಳು ನಿನ್ನ ಮಾತ ಕೇಳಿದ್ರೇನೊ."

"ಕೇಳ್ಳಿ, ಬುಡ್ಲಿ. ಒಬ್ಬ ಪ್ರಜೆಯಾಗಿ ನನ್ನ ಅಭಿಪ್ರಾಯ ಹೇಳದು ಮುಖ್ಯ ಕಣೊ. ಪ್ರಜೆ ಅಂದ್ರೆ ಏನು ತಿಳಕಂಡೆ ಪ್ರಭು ಅವುನು."

"ಆ ಪ್ರಭು ಕಾಸುತಗಂಡು ಓಟುಮಾಡಂಗಾಗ್ಯವುನಲ್ಲ ಹೇಳು."

"ಆ ಮಾತ ವಾಪಸ್ ತಗೊ."

"ಕಡೂರ ಯಲಕ್ಷನ್ನಲಾದದ್ದು ಇನ್ನೇನೊ ಮತ್ತೆ"

"ಅಂಗರೆ ಕಡೂರ ಎಡೂರಪ್ಪ ದತ್ತು ತಗಳಂಗಾಯ್ತು ಅನ್ನು"

"ಆಗದೇನು, ಚುನಾವಣೆ ಸುರುವಾದಾಗ್ಲೆ ಅವುನು ದತ್ತು ತಗಂಡಾಗಿತ್ತು, ಬಟವಾಡೆನೂ ಸುರುವಾಗಿತ್ತು"

"ಮಿಸ್ಟರ್ ಉಗ್ರಿ, ನಿನ್ನ ಚುನಾವಣೆ ವಿಶ್ಲೇಷಣೆ ಸ್ವಲುಪ ರಾಂಗಾಗ್ಯದೆ, ಕಡೂರಲ್ಲಿ ಲಿಂಗಾಯಿತ್ರು ಮೆಜಾರಿಟಿಲವ್ರರೆ, ಅವುರು ಕೈ ಕೈಕಡುದ್ರೂ ಬ್ಯಾರೆ ಜಾತಿ ಕ್ಯಾಂಡೇಟಗೆ ಓಟು ಮಾಡಲ್ಲ. ಕ್ಯಂಪರಾಜ ಕುರುಬ, ದತ್ತ ಬಡಬ್ರಾಹ್ಮಣ ಅಂತ ಗೌಡ್ರೆ ಹೇಳ್ಯವುರ, ಇನ್ನ ವಿಶ್ವನಾಥ ಯರಡಸತಿ ಸೋತಿದ್ದ ಶರಣ ಕ್ಯಾಂಡೇಟು, ವಳ್ಳೆಯವನು ಈತರನೂ ಯೋಚನೆ ಮಾಡಬವುದಲ್ಲವೇ?"

"ಜೋಡಿ ತಿಮ್ಮಾಪುರಕೆ ಎಷ್ಟು ಲಕ್ಷ ಕೊಟ್ರು ಅಂತ ಇಲ್ಲಿ ಬಂದೋನೆ ಹೇಳಿದನಲ್ಲೊ"

"ಅದನ್ನ ನಾನು ಅಲ್ಲಗಳಿಯದಿಲ್ಲ, ಬಿಜೆಪಿಗಳತ್ರ ಈಗ ಪ್ರಬಲವಾದ ಜಾತಿ ಮತ್ತೆ ದುಡ್ಡು ಸೇರಿಕಂಡದೆ, ಆದ್ರಿಂದ ಕಾಂಗ್ರೆಸ್ಸಿನೋರು ಮುಂದೆ ಗೆಲ್ಲದು ಕಷ್ಟ."

"ಅಲ್ಲಾ ಇಷ್ಟೊಂದು ಹಗರಣ ಇರೋ ಸರಕಾರಕೆ, ಜನ ಓಟಾಕ್ತ ಕೂತವುರಲ್ಲ ಹೇಳು."

"ಸರಿಯಪ್ಪ ಗುಲಬರ್ಗಾದಲ್ಲಿ ಜೆಡಿಎಸ್ ಬಂದದಲ್ಲ ಅದಕ್ಕೇನೇಳ್ತಿ"

"ಅವಮ್ಮ ವಿಭೂತಿ ಬಳಕಂಡು ಅತ್ತಗಂಡು ತಿರುಗಿದ್ದು ಕ್ಯಲಸ ಮಾಡಿರಬೇಕು."

"ಅದೇ ಅಲವೇನೊ ನಾನು ಮದ್ಲಿಂದ ಹೇಳತ ಬಂದಿರದು, ರಾಜ್ಯಮಟ್ಟದ ವಿಧಾನಸಭೆ ಚುನಾವಣೇಲಿ ಕ್ಯಲಸಮಾಡೊ ವಿಷಯನೇ ಬ್ಯಾರೆ. ಲೋಕಲ್ ಚುನಾವಣೇಲಿ ವರ್ಕುಮಾಡೋ ಲೋಕಲ್‌ಮ್ಯಾಟ್ರೆ ಬ್ಯಾರೆ."

"ಮತ್ತೆ ಕಡೂರಲ್ಲಿ ಕಾಂಗ್ರೆಸ್ ಮುಂದೆ ಅಂತ ಕನ್ನಡ ಪ್ರಭದಲ್ಲಿ ಬಂದಿತ್ತಲ್ಲಾ."

"ಅದು, ಕಾಂಗ್ರೆಸ್‌ನ ಮುಗಿಸಿ ಬಿಜೆಪಿಗಳ ಎಚ್ಚೆತ್ತಗಳಂಗೆ ಮಾಡಿರೊ ಮೋಸದ ನ್ಯೂಸು ಕಣೊ. ಕನ್ನಡಪ್ರಭದಲ್ಲಿ ಅಂಗೆ ಬರದೇಟಗೆ ಕಾಂಗ್ರೆಸ್ಸಿನವ್ರು ಮನಿಗೋಗಿ ಮನಿಕಂಡ್ರೊ, ಬಿಜೆಪಿಗಳು ಎಚ್ಚೆತ್ತಗಂಡು, ಎರಡು ದಿನ ಹಗಲೂರಾತ್ರಿ ಹಣ ಹಂಚಿದ್ರು, ಜೊತಿಗೆ ಹಂಚುವಾಗ ಸಿಗಾಯ್ಕಂಡ್ರು ಕನ್ನಡಪ್ರಭ ಬಿಜೆಪಿಗಳ ಎಚ್ಚರಸದೆಯಿದ್ರೆ ಓಟು ಕಡಮೆ ಆಯ್ತಿದ್ದೊ ಗೊತ್ತೆ."

"ಯಾವ ಪೇಪರ್ ನಂಬನಾ, ಯಾರು ಮಾತ ನಂಬನ ಹೋಗ್ಲ ಅತ್ತಗೆ" ಎಂದ ಕಾಳಮಾವ.

"ಯಾರ ಮಾತನೂ ನಂಬಬ್ಯಾಡ ದ್ವಡಪ್ಪ. ನೀನು ಮದ್ಲಿಗೆ ಮಾಡತಿದ್ದೆ ನೋಡು ಅಂಗೆ ಮಾಡು ಯಲ್ಲ ಸರಿಯಾಯ್ತವೆ."

"ಮದ್ಲೇನು ಮಾಡತಿದ್ದ?"

"ಮದ್ಲಿಗೆ ಕಾಳಮಾವ ಯೋಚನೆ ಮಾಡಿ ತನ್ನ ಮನಸು ಏನೇಳತದೆ ಅದ ಒಪ್ಪಿಗಳನು ಕಣಕ್ಕ, ಈಗ್ಲು ನಾವು ಅಂಗೇ ಮಾಡಬೇಗ್ಯಾದೆ."

"!?"

...ಪುರದ ಉತ್ತರ

...ರದಿಂದ ಇತ್ತೀಚಿನ ಸುದ್ದಿ ಏನು? ಮೈಖೇಲ್ ಫೇಯ ಅಂಡಿಗೆ ಬೆತ್ತದ ಏಟು

...ರಿಗೆ ಇದು ಚಿಂತೆ. ಸಿಂಗಪುರ ಒಂದು ರೀತಿಯಲ್ಲಿ ಹವಾನಿಯಂತ್ರಣಗೊಂಡ ...ಳೂರಿನ ಕಾಲುಭಾಗ ಕೂಡ ಇಲ್ಲದ ಈ ದೇಶ-ಪಟ್ಟಣ ಚೊಕ್ಕಟ. ಎಲ್ಲ ವಿದ್ಯಾವಂತರು; ...ಷ್ಟದ ಸರ್ವಾಧಿಕಾರಿಗಳು ತುಂಟಕೋರತನವನ್ನು ಸಹಿಸುವುದಿಲ್ಲ. ಮೈಖೇಲ್ ...ಮಾಡಿದ್ದಕ್ಕೆ ಮೊನ್ನೆ ಶಿಕ್ಷೆ ವಿಧಿಸಲಾಯಿತು. ಅಮೆರಿಕಾದ ಮಂತ್ರಿಗಳು, ...ಣ್ಯರು, ಪತ್ರಕರ್ತರು ಮತ್ತು ಅಧ್ಯಕ್ಷ ಕ್ಲಿಂಟನ್ 'ಶಿಕ್ಷಿಸಬೇಡಿ' ಎಂದು .... ಆದರೆ ಮೊನ್ನೆ ಆರು ಛಡಿ ಏಟಿಗೆ ಬದಲು ಮೈಖೇಲ್ ಫೇಯ ...ಲ್ಕು ಏಟು ಬಿದ್ದವು; ಜೈಲಿಗೆ ಹಾಕಲಾಯಿತು. ಈ ಬಗ್ಗೆ ಸಿಂಗಪುರದ ... ಹೇಳಿದ: ಅಮೆರಿಕಾದವರಾದ ನೀವು ಆಡಳಿತ ನಡೆಸುವ ರೀತಿಗೂ ...ವ ರೀತಿಗೂ ವ್ಯತ್ಯಾಸವಿದೆ. ನಿಮ್ಮದು ದೊಡ್ಡ ರಾಷ್ಟ್ರ. ಅಲ್ಲಿ ದರೋಡೆ ..., ಗಾಂಜಾ ಸೇದುವವರು, ಗಂಡನ ಶಿಶ್ನ ಕತ್ತರಿಸುವವರು, ಪ್ರತಿಸ್ಪರ್ಧಿಯ ...ಯುವವರು ಕ್ಷಮೆ ಪಡೆಯಬಹುದು. ಆದರೆ ಕಾನೂನುಬದ್ಧವಾಗಿ ...ದುಕಬೇಕಾದ ನಾವು ಹಾಗೆ ಮಾಡಲಾಗುವುದಿಲ್ಲ, ಈಗ ಒಬ್ಬನ ತಪ್ಪು ...ಳೆ ನಮ್ಮ ನ್ಯಾಯಾಲಯ ಎಲ್ಲ ತಪ್ಪು ಕ್ಷಮಿಸಬೇಕಾಗುತ್ತದೆ. ಹಾಗಾದರೆ ... ನಡೆಯುವುದಿಲ್ಲ. ಇದನ್ನು ಅಮೆರಿಕಾದ ನೀವು ದಯವಿಟ್ಟು ...ಳ್ಳಬೇಕು....

...' ಫೇಯ ಅಷ್ಟ ಜೋರು ಮಾಡಿದ; ಅಮೆರಿಕಾ ಈ ಸಿಂಗಪುರಕ್ಕೆ ದಿಗ್ಬಂಧನ ...ಳಿದುಹಾಕುತ್ತೆ ಎಂದು ಹಾರಾಡಿದ. ಆದರೆ ಸಿಂಗಪುರದ ಸರ್ಕಾರ ಸ್ವಲ್ಪವೂ ...ಲ್ಲ. 'ನಮ್ಮ ಕರ್ತವ್ಯ ನಾವು ಮಾಡಿದ್ದೇವೆ. ನಿಮಗನ್ನಿಸಿದ್ದು ನೀವು ಮಾಡಿ' ಎಂದು ...ಲೀ ಹೇಳಿದ. ಇಂಥ ತಣ್ಣನೆಯ ಕಠೋರ ಜನರೆದುರು ಅಮೆರಿಕಾ ಕೂಡ ಬಾಲ ...ದು ಕಷ್ಟ!



ಕವಯತ್ರಿಯ ಸಾವು ಮತ್ತೆ ಮತ್ತೆ ಕಾಡಿಸಿದಾಗ...



ಚಿಕ್ಕ ವಯಸ್ಸಿನಲ್ಲಿ ಸತ್ತ ಕವಿಗಳ ಬಗ್ಗೆ ಕತೆಗಳು ಹರಡುತ್ತವೆ. ಕೀಟ್ಸ್, ಶೆಲ್ಲಿ, ಚಾಟರ್‌ಟನ್, ರೂಪರ್ಟ್ ಬ್ರೂಕ್, ಓವೆನ್-ಎಲ್ಲರೂ ನಮ್ಮಲ್ಲಿ ಭಯದ, ಕಲ್ಪನೆಯ, ನಶ್ವರತೆಯ ಚಿತ್ರ ಮೂಡಿಸುತ್ತಾರೆ. 1963ರಲ್ಲಿ ಆತ್ಮಹತ್ಯೆ ಮಾಡಿಕೊಂಡು ಸತ್ತ ಕವಯತ್ರಿ ಸಿಲ್ವಿಯಾ ಪ್ಲಾತ್ ಬಗ್ಗೆ ಲೇಖನಗಳು, ಪುಸ್ತಕಗಳು ಬರುತ್ತಲೇ ಇವೆ. ಇತ್ತೀಚೆಗೆ ಜಾನೆಟ್ ಮಾಲ್ಕಂ ಎಂಬ ಮಹಿಳೆ ಸಿಲ್ವಿಯಾ ಪ್ಲಾತ್ ಬಗ್ಗೆ ಜೀವನಚರಿತ್ರೆ ಬರೆದಿದ್ದಾಳೆ.

ಸಿಲ್ವಿಯಾ ಪ್ಲಾತ್....

"ಇದು ಮನಸ್ಸಿನ ಬೆಳಕು, ತಣ್ಣಗೆ, ಕ್ಷಿಪಣಿಯಂತೆ;
ಮನಸ್ಸಿನ ಮರಗಳು ಕಪ್ಪಾಗಿವೆ, ಬೆಳಕು ನೀಲಿಯಾಗಿದೆ,
ನಾನು ದೇವರೆಂಬಂತೆ ಗರುಕೆ ನನ್ನ ಕಾಲಮೇಲೆ
ತಮ್ಮ ದುಃಖವನ್ನು ದ್ರವಿಸುತ್ತಿವೆ..."

-ಇವು ಒಂದು ಪದ್ಯದ ಸಾಲುಗಳು. ನೇರವಾಗಿ, ಧೈರ್ಯವಾಗಿ, ತನ್ನ ಮಾತುಗಳು ತನ್ನ ಆಳದ ನೋವಿನಿಂದ ಹೊರಟು ಮಾಂತ್ರಿಕತೆ ಕಳೆದುಕೊಳ್ಳದಂತೆ ಹೇಳಿದವಳು ಸಿಲ್ವಿಯಾ ಪ್ಲಾತ್; ನೋವಿನಿಂದ, ನಿರಾಶೆಯಿಂದ, ಸೂಕ್ಷ್ಮ ಮನಸ್ಸಿನ ತೀವ್ರ ವ್ಯಥೆಯಿಂದ ಬರೆದವಳು. ಮೇಲ್ನೋಟಕ್ಕೆ ಎಲ್ಲ ಇತ್ತು, ಸುಂದರಿ ಈ ಕವನಗಾರ್ತಿ; ಗಣ್ಯನೊಬ್ಬನ ಮಗಳಾಗಿ ಹುಟ್ಟಿದವಳು. ಆಗಿನ ಪ್ರಸಿದ್ಧ ತರುಣಕವಿ ಟೆಡ್ ಹ್ಯೂಸ್‌ನನ್ನು ಮದುವೆಯಾದಳು. ಹೃದಯ ತಟ್ಟುವಂಥ ಕವನ ಬರೆದಳು. ಆದರೆ ಈ ಜಗತ್ತಿನ ಬಗ್ಗೆ ಮತ್ತು ತನ್ನ ಜೀವನದ ಬಗ್ಗೆ ಇವಳಲ್ಲಿದ್ದ ಅತೃಪ್ತಿ ಆರಿರಲಿಲ್ಲ. ಗಂಡ ಟೆಡ್ ಹ್ಯೂಸ್ ಇವಳ ಪ್ರಖರ ವ್ಯಕ್ತಿತ್ವ ತಾಳಲಾರದೆ ಇನ್ನೊಬ್ಬಳ ಜೊತೆಗೆ ಎಲ್ಲೋ ಹೋಗಿದ್ದಾಗ ಆಕೆ ತನ್ನಿಬ್ಬರು ಪುಟ್ಟ ಮಕ್ಕಳಿಗೆ ಊಟಕ್ಕಿಟ್ಟು ಉರಿಯುತ್ತಿದ್ದ ಸ್ಟವ್‌ನಲ್ಲಿ ತಲೆ ಇಟ್ಟು ಸತ್ತಳು.


ಇವತ್ತಿಗೂ ಇವಳ ಸಾವು ಎಲ್ಲರಲ್ಲಿ ದಿಗಿಲು ಹುಟ್ಟಿಸುತ್ತದೆ. ಯಾರಿಗೂ ಅರ್ಥವಾಗದ್ದು ಇವಳ ಸೂಕ್ಷ್ಮಪ್ರಜ್ಞೆ, ಇವಳ ವಿಚಿತ್ರ ಆತ್ಮಹತ್ಯಾತ್ಮಕ ಕೋಮಲತೆ...

ಆಕೆ ಇನ್ನೊಂದು ಪದ್ಯದಲ್ಲಿ ಬರೆಯುತ್ತಾಳೆ:
"ಇದನ್ನು ನಾನೇ ಹೇಳಿ ಮಾಡಿಸಿದೆ, ಈ ಚೊಕ್ಕ
ಪೆಟ್ಟಿಗೆಯನ್ನು, ಕುರ್ಚಿಯಂತೆ ಚಚ್ಚೌಕವಾದ
ಎತ್ತಲಾಗದಂಥ ಪೆಟ್ಟಿಗೆಯನ್ನು..."

ಜೂನ್ 1, 1994

ಇದ್ದಿದ್ದ ಇದ್ದಂಗೆ ಹೇಳಿದ್ರೆ...

ಕೇಂದ್ರ ಸಚಿವರ 'ಕೈಬಿಸಿ ಮಾಡಿ' ಗಣಿಗಾರಿಕೆ ಪರವಾನಗಿ ಪಡೆಯಬಹುದು ಎಂಬ ಸ್ಫೋಟಕ(!) ಮಾಹಿತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಯಡ್ಯೂರಪ್ಪನವರು ಬಗಜ್ಜಾಹೀರುಪಡಿಸಿದ್ದಾರೆ. ಹಲವು ದಶಕಗಳಿಂದ ರಾಜಕೀಯದಲ್ಲಿ ಪ್ರಜ್ವಲಿಸುತ್ತಿರುವ ಸನ್ಮಾನ್ಯರ ಹೇಳಿಕೆಯನ್ನು ತಳ್ಳಿ ಹಾಕುವಂತಿಲ್ಲ. ಇದೇ ಸಂಪ್ರದಾಯವನ್ನು ಮಾನ್ಯರೂ ತಮ್ಮ ದಕ್ಷ ಆಡಳಿತದಲ್ಲಿ ಅಳವಡಿಸಿಕೊಂಡಿದ್ದಾರೆಯೋ ಇಲ್ಲವೋ ಎಂಬುದು ತಿಳಿದುಬಂದಿಲ್ಲ. ತತ್ವಸಿದ್ಧಾಂತಗಳ ಅಧಿಪತಿಯವರಾದ



ಎಚ್.ಎಲ್. ಕೇಶವಮೂರ್ತಿ

ಶ್ರೀಯುತರು ಅಂತಹ ಹಾದಿ ತುಳಿದಿಲ್ಲವೆಂದು ಭಾವಿಸಲಾಗಿದೆ. ಏಕೆಂದರೆ ರೆಡ್ಡಿ ಸಹೋದರರ 'ತಾಯಿ' ಸುಷ್ಮಾ ಸ್ವರಾಜ್ ಅವರು ಪ್ರತಿ ವರ್ಷ ವರಮಹಾಲಕ್ಷ್ಮಿ ಪೂಜೆಗೆ ಬಳ್ಳಾರಿಗೆ ಬರುವುದು ಸರಿಯಷ್ಟೆ. ಇದರ ಒಳಗುಟ್ಟನ್ನು ಅರಿತಿರುವೆನು ಎಂಬ ಭ್ರಮೆಯಲ್ಲಿರುವ ಎಂ.ಪಿ. ಪ್ರಕಾಶ್ ಅವರು 'ತಾಯಿ' ಇಲ್ಲಿಗೆ ಒಂದು 'ವರ' ನೀಡಿ 'ಲಕ್ಷ್ಮಿ'ಯನ್ನು ಸಾಗಿಸುತ್ತಾರೆ ಎಂದು ಮಾರ್ಮಿಕವಾಗಿ ನುಡಿದಿದ್ದರು. ಅವರ ಮಾತುಗಳಿಂದ ಕೆಂಡಮಂಡಲ ಆಗಿದ್ದರು 'ತಾಯಿ.' ಇದ್ದದ್ದ ಇದ್ದಂಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದಂಗೆ ಆಯ್ತು ಎಂಬ ಆಡುಮಾತಿನಂತೆ ಅಲ್ಲ ಇದು. 'ತಾಯಿ'ಯವರೇ ಇತ್ತೀಚೆಗೆ ಬಳ್ಳಾರಿಗೆ ಬಂದಿದ್ದಾಗ 'ನಾನು ಹನ್ನೊಂದು ವರ್ಷದಿಂದ ಬಳ್ಳಾರಿಗೆ ವರಮಹಾಲಕ್ಷ್ಮಿ ಪೂಜೆಗೆ ಬರುತ್ತಿದ್ದೇನೆ. ಹನ್ನೊಂದು ವರ್ಷಗಳಿಂದ ಹನ್ನೊಂದು ರೂಪಾಯಿಯನ್ನೂ ಇಲ್ಲಿಂದ ತೆಗೆದುಕೊಂಡು ಹೋಗಿಲ್ಲ' ಎಂದು ಸಾರ್ವಜನಿಕವಾಗಿ ಘೋಷಿಸಿದ್ದಾರೆ. ಅಂದರೇನಾಯ್ತು 'ತಾಯಿ'ಯವರು 'ವರ' ನೀಡಿ 'ಲಕ್ಷ್ಮಿ' ಇಲ್ಲೇ ಬಿಡುತ್ತಾರೆ ಅಂದ ಹಾಗಾಯಿತು. ಇವರು ತೆಗೆದುಕೊಂಡು ಹೋಗಲ್ಲ ನಿಜ. ತಲುಪಿಸಬೇಕಾದ ಸ್ಥಳಕ್ಕೆ ತಲುಪಿಸುತ್ತಾರೆ ನಿಷ್ಠಾವಂತ ಮಕ್ಕಳು; ಇಂತಹ ಮಾತುಗಳೆಲ್ಲ **public consumption**ಗೇ ಸರಿ ಅನ್ನುವ ಕುಹಕಿಗಳ ಮಾತಿಗೆ ಅಷ್ಟು ಮಾನ್ಯತೆ ನೀಡಬೇಕಿಲ್ಲ. ಇಂತಹ ಶಿಷ್ಟಾಚಾರದ ಮೇಲ್ಪಂಕ್ತಿಯನ್ನೇ ಸನ್ಮಾನ್ಯ ಯಡ್ಯೂರಪ್ಪನವರೂ ಪಾಲಿಸುತ್ತಿದ್ದಾರೆ ಎಂಬುದನ್ನು ಅವರ ಬಳಿಗೆ ವಿವಿಧ ಕೆಲಸಗಳಿಗಾಗಿ ಬರುವವರಿಗೆ ಮನದಟ್ಟು ಮಾಡಿಕೊಡಬಹುದಾಗಿದೆ. ಆದರೆ ಯಾಕೋ ಏನೋ ಫಲಾನುಭವಿಗಳ ಅನುಭವ ಮಾನ್ಯರು ಸೂಚಿಸಿದ 'ಕೈಬಿಸಿ'ಎಡೆಗೆ ಎಳೆಯುತ್ತಿದೆಯಂತೆ! ಹಾಗಿದ್ದಲ್ಲಿ ಯಾವ ಕೆಲಸಕ್ಕೆ ಎಷ್ಟು ನೀಡಬೇಕಾಗಬಹುದು ಎಂಬುದನ್ನು ಮೊದಲೇ ತಿಳಿಸಿದಲ್ಲಿ ಯಾವ ಕೆಲಸ ತಮ್ಮ ಅರ್ಹತೆಗೆ ನಿಲುಕುವಂತಹದ್ದು ಯಾವ ಕೆಲಸ ನಿಲುಕುವುದಿಲ್ಲ ಎಂಬುದು ಅರಿವಾಗುತ್ತದೆ. ಹೀಗೆ ಮಾಡುವುದರಿಂದ ಹೊಸದಾಗಿ ಹೆಜ್ಜೆ ಇಡುವವರಿಗೆ ಮಾರ್ಗದರ್ಶನ ನೀಡಿದ ಪುಣ್ಯ ಸನ್ಮಾನ್ಯರಿಗೆ ಸಿಗಲಿದೆ!

ಅಂತೆಯೇ ಇದು ಸ್ಪರ್ಧಾ ಪ್ರಪಂಚ. ಸ್ಪರ್ಧಾತ್ಮಕ ಪರೀಕ್ಷೆಗಳ ವಿಷಯಕ್ಕೆ ಬಂದರೆ.... ಅಭ್ಯರ್ಥಿಗಳು ಹೇಗೆ ಪರೀಕ್ಷೆಗಳನ್ನು ಎದುರಿಸಬೇಕು; ಅದಕ್ಕೆ ಮಾನಸಿಕ ಸಿದ್ಧತೆ ಹೇಗಿರಬೇಕು; ಯಾವ ಯಾವ ಪುಸ್ತಕಗಳನ್ನು ಅಧ್ಯಯನ ಮಾಡಬೇಕು ಮುಂತಾದವುಗಳನ್ನು ಕುರಿತಂತೆ ವಿದ್ವತ್ ಪೂರ್ಣ ಲೇಖನಗಳನ್ನು ಪತ್ರಿಕೆಗಳು ಪ್ರಕಟಿಸುತ್ತಿವೆ. ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ಸ್ಪರ್ಧಿಸುವವರ ಒಟ್ಟಾರೆ ಅಭಿಪ್ರಾಯ ಏನೆಂದರೆ... ಪರೀಕ್ಷೆ ಎದುರಿಸುವಲ್ಲಿ ನಮಗೇನೂ ಭಯವಿಲ್ಲ, ನಿರ್ಭಯವಾಗಿಯೇ ಎದುರಿಸ್ತೀವಿ. ಆದರೆ ಲಿಖಿತ ಪರೀಕ್ಷೆ ಮುಗಿದ ನಂತರ 'ಸಂದರ್ಶನ' ಎಂಬ ನಾಟಕ ನಡೆಯುತ್ತದಲ್ಲ ಆದರಲ್ಲಿ ಯಶಸ್ವಿ ಪ್ರದರ್ಶನ ನೀಡುವುದು ಹೇಗೆ ಎಂಬುದೇ ಸಮಸ್ಯೆಯಾಗಿದೆ. ಯಾವ ಹುದ್ದೆಗೆ ಎಷ್ಟು ಹಣ ಯಾರಿಗೆ ಕೊಡಬೇಕು ಎಂಬುದನ್ನು ಪ್ರಕಟಿಸಿದರೆ ಮಹದುಪಕಾರ ಮಾಡಿದಂತಾಗುತ್ತದೆ. ಅದನ್ನು ಆಗ ಮಾಡಬೇಕಾಗಿ ಸಂಪಾದಕರಲ್ಲಿಯೂ ಹಾಗೂ ಪಾರದರ್ಶಕ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿಗಳಲ್ಲಿಯೂ ಬಹುವಿನಯದ ಪ್ರಾರ್ಥನೆ ಆಗಿದೆ!

ಹೆಂಡತಿ ಇರಬೇಕು!

'ನಾನು ತಪ್ಪು ಮಾಡ್ದೆ ಸಾ' ಅಂದ ಕ್ಯಾತ ಸಾವೇರಿ ರಾಗದಲ್ಲಿ.

ಬೇಕಿದ್ದರೆ ಕ್ಯಾತೇಗೌಡರ ಜಾತಕ ಬಿಚ್ಚಿನೋಡಿ. ಅಗಾಧ ತಪ್ಪುಗಳ ನಡುವೆ ಸರಿ ಹುಡುಕುವುದು ದುಸ್ಸಾಧ್ಯ.

'ಏನು ಮಾಡ್ದೊ' ಅಂದೆ.

'ತಪ್ಪು ಮಾಡ್ದೆ ಸಾ' ಅದೇ ರಾಗ ಹಾಡಿದ.

'ಅದೇನು ಬಿಡಿಸಿ ಹೇಳೋ ಬಡ್ಡೆತ್ತುದ' ಅಂತ ರೇಗಿದೆ.



'ಮದ್ವೆ ಆಗದೆ ತಪ್ಪು ಮಾಡ್ದೆ ಸಾ' ಅಂದ!

ಆಶ್ಚರ್ಯ ಆಯಿತು. ಮದುವೆ ವಯಸ್ಸು ಮೀರಿತ್ತು. 'ಯಾವ ಯಾವ ವಯಸ್ನಲ್ಲಿ ಏನೇನು ಆಗಬೇಕೋ ಅದಾಗಬೇಕು' ಎಂದು ಹಲವು ಸಲ ಹೇಳಿದ್ದೆ. 'ಕರ್ದಣ್ಣಿ ಕೊಟ್ರೆ ಮಲ್ಗೋನೇನೋ' ಅಂತ ರೇಗಿದ್ದೆ. ಆವಾಗೆಲ್ಲ ಮದುವೆ ಆದವರ ಗೋಳುಗಳನ್ನೆಲ್ಲ ಹಾಸ್ಯ ಕಥೆ ರೂಪದಲ್ಲಿ ಹೇಳ್ತಾ ನಗೆ ಹೊನಲು ಹರಿಸ್ತಿದ್ದ. ಹಸು ಹಾಲು ಅಂತೆಲ್ಲ ಅಸಂಬದ್ಧವಾಗಿ ಬೊಗಳ್ತಿದ್ದ. ಕೆಟ್ಟ ಮೇಲೆ ಬು... ಅಟ್ಟ ಮೇಲೆ ಒಲೆ ಉರೀತು ಅನ್ನೊ ಹ... ಬಡಬಡಿಸ್ತಿದ್ದ.

'ಯಾಕೋ ಈಗ ಹೆಂಗುಸಿನ ಯೋಚ್ನೆ' ಅ...

'ಹೆಂಗ್ಸಲ್ಲ ಸಾ, ಹೆಂಡ್ತಿ ಸಾ' ಅಂದ!

'ವಯಸ್ಸಾದ ಮೇಲೆ ನೋಡ್ಕೊಳ್ಳೋಕೆ ... ಅಂತಾನ.'

'ಮಕ್ಳು ಯಾವನಿಗೆ ಬೇಕು ಸಾ ಹೆಂಡ್ತಿ ಬ...

ಮಕ್ಕಳು ಬೇಡ, ಹೆಂಡ್ತಿ ಬೇಕು! ಆಹಾ ಕ್ಯಾತ ... ಅಂದುಕೊಂಡೆ. ಅನುಮಾನ ಬಂತು. ರಾಜಕೀಯ... ಏರ್ತಿದ್ದ ಮನುಷ್ಯ. ಹೀಗನ್ನ ಬೇಕಾದರೆ ಏನೋ ಇರಬಹುದೇನೋ ಅನ್ನಿಸಿತು.

'ಅದೇನ್ ಬಿಡಿಸಿ ಹೇಳ್ಲ' ಅಂದೆ.

'ಹೇಳ್ತೀನಿ ಸಾ' ಅಂದವನೇ ಹೇಳಲಾರಂಭಿಸಿ... ಸಾರಾಂಶ ಇದು.

ರಾಜಕಾರಣಿ ಆದವನು ಅಧಿಕಾರ ಹಿಡೀಬ... ಅಧಿಕಾರ ಹಿಡಿದ ಮೇಲೆ ಹಣ ಮಾಡಬೇಕು... ಗ್ರಹಚಾರ ಕೆಟ್ಟರೆ ಯಡವಟ್ಟಾಗಬಹುದು. ಜೈ... ಕಾಣಬೇಕಾಗಬಹುದು. ... ತಾತ್ಕಾಲಿಕ ಆದರೂ ಅಧಿ... ಬೇರೆಯವರ್ನ ಕೂರುಸ್ಬೇಕ... ಯಾರನ್ನ ಕೂರುಸ್ತೀರಿ, ... ಕಳ್ಳರು. ನಂಬಿಕಸ್ಥರ ತರಹ... ಆಡ್ತಾರೆ. ಅಧಿಕಾರ ಹಿಡಿ... ವರಸೇನೆ ಬದಲಾಯಿಸ್ತಾ... ಇಂತಹ ಸಮಯದಲ್ಲಿ ... ಅನ್ನೋಳು ಇರಬೇಕು. ... ಪ್ರಸಾದ್ ಯಾದವ್ ನೋ... ಜೈಲಿಗೆ ಹೋಗಬೇಕಾಗಿ... ಹೆಂಡತೀನ ಮುಖ್ಯಮಂ... ಕುರ್ಚಿಲಿ ಕುಳ್ಳಿರಿಸಿದ್ರು! ಜೈಲಿನಲ್ಲಿದ್ದರೂ ಅಧಿಕಾ... ಅನುಭವಿಸಿದ್ರು!

ಅಧಿಕಾರದ್ದು ... ಆಯಿತಲ್ಲ, ಇನ್ನು ಹಣದ ವಿಚಾರಕ್ಕೆ ಬಂದ್ರೆ.... ... ಶಾಸಕರು ಆಸ್ತಿ ವಿವರ ನೀಡಬೇಕು ಅನ್ನೊ... ಮಾಡವ್ರಲ್ಲ... ಆ ವಿವರ ನೋಡಿ. ಎಲ್ರೂ... ಹೆಸರಿನಲ್ಲಿ ಹಣ ಇಟ್ಟರೋರೆ! ಹೆಂಡತಿ ಅನ್ನೋಳು... ಈ ಸೌಲಭ್ಯಾನೆ ಇರುತ್ತಿರಲಿಲ್ಲ!

ಕ್ಯಾತನ ಮಾತಿನಲ್ಲೂ ಹುರುಳಿರಬಹುದೇ...

ಸುಮಾ ಎಂಬಾರ್‌ರವರ ಆತಂಕದ ಬಗ್ಗೆ

ಹದಿನೈದನೇ ಸಂಚಿಕೆಯಲ್ಲಿ 'ಪಟ್ಟಾಭಿ ಮತ್ತು ಪಿಎಫ್ಐ: ಕೆಲವು ಪ್ರಶ್ನೆಗಳು' ಎಂಬ ತಲೆಬರಹದಲ್ಲಿ ಸುಮಾ ಎಂಬಾರ್, ಮೈಸೂರು ಬರೆದಿರುವ ಅನಿಸಿಕೆ ಬಗ್ಗೆ.

ಒಂದನೆಯದಾಗಿ ಪಟ್ಟಾಭಿಯವರು ಇಂದು ದೇಶವು ಎದುರಿಸುತ್ತಿರುವ ಕೋಮುವಾದದ ಬಗ್ಗೆ ಆತಂಕಗೊಂಡಿದ್ದಾರೆ. ಅದರಲ್ಲೂ ಓರ್ವ ಶಿಕ್ಷಕನಾಗಿ ಕೋಮುವಾದದ ಕರಾಳ ಹಸ್ತವು ಆಕ್ಟೋಪಸ್‌ನಂತೆ ಕಾಲೇಜು ಕ್ಯಾಂಪಸ್‌ಗಳಲ್ಲೂ ಹರಡಿ ಅಲ್ಲಿನ ವಿದ್ಯಾರ್ಥಿಗಳೇ ಕೋಮುವಾದವನ್ನು ವಿರೋಧಿಸುವ ಶಿಕ್ಷಕನಿಗೆ ಶಿಕ್ಷೆಯನ್ನು ಕೊಡಲು ಮುಂದಾದುದನ್ನು ಕಣ್ಣಾರೆ ಕಂಡಿದ್ದಾರೆ. ದುರ್ಬಲ ಕಾಲೇಜು ಆಡಳಿತ ಮಂಡಳಿ, ತಮ್ಮ ವಿರುದ್ಧ ಮಾತನಾಡುವವರನ್ನು ಮಟ್ಟ ಹಾಕಲು ಸದಾ ತೊಡೆ ತಟ್ಟನಿಂತ ಆರೆಸ್ಸೆಸ್‌ಗಳು, ವಿದ್ಯಾರ್ಥಿಗಳನ್ನು ಅದಕ್ಕಾಗಿ ತಯಾರಿಗೊಳಿಸುವ ಸ್ಥಾಪಿತ ಹಿತಾಸಕ್ತಿಗಳು ಇವರೆಲ್ಲರ ಮಧ್ಯೆ ಒಂಟಿಯಾಗಿ ದನಿಯೆತ್ತಿದ ಪಟ್ಟಾಭಿಯವರು ನಿಜಕ್ಕೂ ಓರ್ವ ಮಾದರಿ ಹೋರಾಟಗಾರ. ನನ್ನಂಥ ಪಿಎಫ್ಐ ಸದಸ್ಯನಿಗೆ ಅವರಿಂದ ಕಲಿಯಲು ತುಂಬಾ ಇದೆ. ಆದ್ದರಿಂದ ಪಟ್ಟಾಭಿರಾಮ ಕುರಿತು ಸುಮಾರವರು ಬರೆದದ್ದು ಸರಿಯಾಗಿಯೇ ಇದೆ.

ಆದರೆ ಸ್ವಾತಂತ್ರ್ಯದ ನಂತರ ದೇಶದ ಇತಿಹಾಸದಲ್ಲೇ ಮುಸ್ಲಿಮರ ಮಧ್ಯೆ ಹೋರಾಟದ ದಿಸೆಗೆ ಹೊಸ ವ್ಯಾಖ್ಯಾನವನ್ನು ಬರೆದಿದೆ ಪಿಎಫ್ಐ (ಇದು ನನ್ನ ಮಾತಲ್ಲ. ದೇಶದಲ್ಲಿ ವಿವಿಧ ರೀತಿಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮುಸ್ಲಿಮೇತರ ಹೋರಾಟಗಾರರ ಮಾತುಗಳು). ಸ್ವಾತಂತ್ರ್ಯಾನಂತರದ 60 ವರ್ಷಗಳಲ್ಲಿ ಸರ್ವ ಕ್ಷೇತ್ರಗಳಲ್ಲೂ ಹಿಂದುಳಿದ ಜಾತಿ ಪಂಗಡಗಳಿಗಿಂತ ತಳಮಟ್ಟ ಸೇರಿದ ದೇಶದ ಮುಸ್ಲಿಮರ ಬಗ್ಗೆ, ಅವರ ಸ್ಥಿತಿಗತಿಗಳ ಬಗ್ಗೆ ಮತ್ತು ಸಂಘಟಿತರಾಗುವ ಅಗತ್ಯದ ಬಗ್ಗೆ ಕಳೆದ 20 ವರ್ಷಗಳಿಂದ ಮುಸ್ಲಿಮರ ಮಧ್ಯೆ ಜಾಗೃತಿಯನ್ನು ಮೂಡಿಸುತ್ತಿದೆ ಪಿಎಫ್ಐ. ಮುಸ್ಲಿಂ ಜನತೆಯ ಮೂಲಭೂತ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ದಿಸೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಮುಸ್ಲಿಮರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತಿದೆ.

ಇಷ್ಟಕ್ಕೂ ಸುಮಾರವರ ದೂರು ಮುಸ್ಲಿಮರ ಮೂಲಭೂತ(?) ವಾದದ ಬಗ್ಗೆ. ಇಡೀ ದೇಶಕ್ಕೆ ದೇಶವೇ ತಲ್ಲಣಿಸುವಂತೆ ಮಾಡಿದ ಮತ್ತು ತಮ್ಮ ಮುಂದೆ ಯಾವುದೇ ಚುನಾಯಿತ ಸರ್ಕಾರ, ಕೋರ್ಟು ಮತ್ತು ಸಂವಿಧಾನಕ್ಕೆ ಕವಡೆ ಕಾಸಿನ ಬೆಲೆಯಿಲ್ಲವೆಂದು ಸವಾಲು ಹಾಕಿ ಹಾಡು ಹಗಲೇ ಬಾಬರಿ ಮಸೀದಿಯನ್ನು ಕೆಡವಿ ಹಾಕಿದ ಸಂಘ ಪರಿವಾರದ ಭಯೋತ್ಪಾದನೆ ಮತ್ತು ಆ ನಂತರದ ದೇಶದಲ್ಲಿ ಕಂಡಂತಹ ಭೀಕರ ಹತ್ಯಾಕಾಂಡಗಳು ಇದೀಗ ಸನ್ನಿಯಂತೆ ವ್ಯಾಪಿಸಿದ ಸರಣಿ ಬಾಂಬ್ ಸ್ಫೋಟಗಳು ಇವೆಲ್ಲವೂ ಆರೆಸ್ಸೆಸ್‌ಗಳ ಕೊಡುಗೆಗಳು.



ಈ ಎಲ್ಲಾ ಭಯೋತ್ಪಾದನೆಗೆ ಹರಕೆಯ ಕುರಿಗಳಾಗುತ್ತಿರುವವರಲ್ಲಿ ಮೊದಲ ಸಾಲಿನಲ್ಲಿ ಮುಸ್ಲಿಮರು ನಂತರ ಕ್ರೈಸ್ತರು ಮೂರನೆಯದಾಗಿ ದಲಿತರು ಒಬ್ಬರ ಹಿಂದೆ ಒಬ್ಬರಂತೆ ನಿಂತಿದ್ದಾರೆ. ಅದರಲ್ಲೂ ಕರಾವಳಿಯಂತಹ ಕೋಮುಪೀಡಿತ ಪ್ರದೇಶಗಳಲ್ಲಿ ಜಾನುವಾರು ವ್ಯಾಪಾರಿಗಳಾದ ಹಸನಬ್ಬ, ಹಾಜಬ್ಬರನ್ನು ನಗ್ನಗೊಳಿಸಿ ಥಳಿಸಿದ್ದೂ ಅನಿತಾ ಎಂಬ ಯುವತಿಯನ್ನು ಆತ್ಮಹತ್ಯೆಗೆ ದೂಡಿದ್ದೂ ನಡೆಯಿತು. ಮೋಹನ್ ಎಂಬ ಸೈಕೋಪಾತ್‌ನಿಂದ 20ಕ್ಕೂ ಹೆಚ್ಚು ಯುವತಿಯರು ಅತ್ಯಾಚಾರಕ್ಕೊಳಪಟ್ಟು ಕೊಲೆಗೈಯಲ್ಪಟ್ಟಿದ್ದರು. ಆ ಪೈಕಿ ಕಾಣೆಯಾದ ಬಂಟ್ವಾಳದ ಯುವತಿಯೋರ್ವಳ ಕೊಲೆ ಆರೋಪವನ್ನು ಕರಾವಳಿಯ ಮುಸ್ಲಿಮರ ತಲೆಗೂ ಕಟ್ಟಲಾಯಿತು. (ಕಾಣೆಯಾದ ಯುವತಿ ಲವ್ ಜಿಹಾದ್‌ಗೆ ಬಲಿಯಾಗಿದ್ದಾಳೆಂದು ಆರೋಪಿಸಿ ಓರ್ವ ಸ್ವಾಮೀಜಿಯ ನೇತೃತ್ವದಲ್ಲಿ ಬಂಟ್ವಾಳದಲ್ಲಿ ಪ್ರತಿಭಟನೆ ನಡೆದಿತ್ತು!)

ಪಿಎಫ್ಐ ಕರ್ನಾಟಕದಲ್ಲಿ ಸ್ಥಾಪನೆಗೊಳ್ಳುವ ಮೊದಲು ಕರಾವಳಿಯಲ್ಲಿ ಮುಸ್ಲಿಂ ಯುವಕರನ್ನು ಬೀದಿಯಲ್ಲಿ ಅಟ್ಟಾಡಿಸಿ ಹೊಡೆಯುವುದು ಭಜರಂಗಿಗಳಿಗೆ ಒಂದು 'ಹಾಬಿ'ಯಾಗಿ ಹೋಗಿತ್ತು, ಸಾಲದು ಎಂಬಂತೆ ಪೊಲೀಸರಿಂದಲೂ ಅವರು ಹಿಂಸೆಯನ್ನು ಅನುಭವಿಸಬೇಕಿತ್ತು. ಆದರೆ ಪಿಎಫ್ಐ ಬಂದ ನಂತರ ಭಜರಂಗಿಗಳ ಅಟ್ಟಹಾಸ ನಿಂತಿದ್ದು ಪವಾಡದಿಂದಲ್ಲ ಎಂದು ಸುಮಾರವರು ತಿಳಿಯಬೇಕು.

ಇವೆಲ್ಲವನ್ನು ದಿನನಿತ್ಯ ಕಾಣುತ್ತಿರುವ ಪಟ್ಟಾಭಿ, ಜಿ.ರಾಜಶೇಖರರಂತಹ ಮಾನವ ಹಕ್ಕುಗಳ ಹೋರಾಟಗಾರರು ಸ್ವಯಂಪ್ರೇರಿತರಾಗಿ ಪಿಎಫ್ಐ ಸಭೆ ಸಮಾರಂಭಗಳಲ್ಲಿ ಹೋರಾಟದ ಅಖಾಡಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅದು ಬಿಟ್ಟು ಪಿಎಫ್ಐ ಅವರನ್ನು ಜಾದೂ ಮಾಡಿ ತಮ್ಮೊಂದಿಗೆ ಸೇರಿಸಿದ್ದಲ್ಲ, ಮಾತ್ರವಲ್ಲ ಪಿಎಫ್ಐಯ ಬೇರುಗಳಿರುವ ಇತರ ರಾಜ್ಯಗಳಲ್ಲೂ ಪ್ರಗತಿಪರರು, ಚಿಂತಕರು, ಮಾನವ ಹಕ್ಕು ಹೋರಾಟಗಾರರು ಕೈ ಜೋಡಿಸುತ್ತಿರುವುದು ಇದೇ ಕಾರಣದಿಂದ. ಪಿಎಫ್ಐಯ ಕಾರ್ಯಚಟುವಟಿಕೆಗಳ ಬಗ್ಗೆ ಸುಮಾ ಅವರಿಗೆ ಪ್ರಾಮಾಣಿಕವಾಗಿ ತಿಳಿದುಕೊಳ್ಳಬೇಕಿದ್ದರೆ ಹತ್ತಿರದ ಮೈಸೂರಿನಲ್ಲಿರುವ ಪಿಎಫ್ಐ ಆಫೀಸಿಗೊಮ್ಮೆ ಭೇಟಿ ನೀಡಿ ಮತ್ತು ತಮ್ಮ ಹೋರಾಟದೊಂದಿಗೆ ಭಾಗಿಯಾಗಿ ಸ್ವಯಂ ತಿಳಿದುಕೊಳ್ಳಲು ಪ್ರಯತ್ನಿಸಿ. ಅಲ್ಲದಿದ್ದರೆ ದಯವಿಟ್ಟು ಸುಮಾರವರು ಒಂದೆರಡು ತಿಂಗಳುಗಳ ಕಾಲ ಅವಿಭಜಿತ ದಕ್ಷಿಣಕನ್ನಡದ ಜಿಲ್ಲೆಯಲ್ಲಿ ಬಂದು ನಮ್ಮೊಂದಿಗಿರಬೇಕು. ಆ ವೇಳೆ ತಿಳಿಯುತ್ತದೆ ಪಿಎಫ್ಐಯೊಂದಿಗೆ ಬುದ್ಧಿವಂತ... ಯಾತಕ್ಕೆ ಸೇರುತ್ತಿದ್ದಾರೆಂದು?

ಈ ದೇಶ ಸ್ವಾತಂತ್ರ್ಯಗೊಂಡ ನಂತರ ಜನಸ... ಹಾತದಂತೆ ಮುಸ್ಲಿಮರಿಗೆ ಶಿಕ್ಷಣ, ಉದ್ಯೋಗ, ರಾ... ರಂಗಗಳಲ್ಲಿ ಸಮಪಾಲು ಲಭಿಸಿದೆಯೇ? ಮತ್ತು ಧಾರ್ಮಿಕ, ಸಾಂಸ್ಕೃತಿಕ ಮತ್ತು ಅನನ್ಯತೆಯನ್ನು ... ಉಳಿಸಿಕೊಳ್ಳಲು ಸಾಧ್ಯವಾಗಿದೆಯೇ? ಅ... ಕಾಡುತ್ತಿರುವ ಅಭದ್ರತೆಯನ್ನು ಹೋಗಲಾ... ಪ್ರಾಮಾಣಿಕ ಪ್ರಯತ್ನ ಇಲ್ಲಿನ ಯಾವುದಾ... ರಾಜಕೀಯ ಪಕ್ಷಗಳು ಮತ್ತು ಸರ್ಕಾರಗಳು ನಡೆಸಿ... ಇಲ್ಲ ಎನ್ನುತ್ತಿದೆ ಕೇಂದ್ರ ಸರ್ಕಾರ ರಚಿಸಿದ ... ಸಮಿತಿ ವರದಿ.

ಆದ್ದರಿಂದ ದಶಕಗಳಿಂದ ಎಲ್ಲಾ ರೀತಿಯ ... ದಿಂದ ವಂಚಿತರಾದ ಜೀವ, ಮಾನ, ಸೊತ್ತು... ರಕ್ಷಿಸಿಕೊಳ್ಳಲು ಸಾಧ್ಯವಾಗದೇ ಭಯಪೀಡಿ... ವರ್ಗವೊಂದಕ್ಕೆ, ತಳಮಟ್ಟದಿಂದಲೇ ಸಾ... ಯುವಕರನ್ನು ಸೇರಿಸಿ ಅವರಲ್ಲಿ ಆತ್ಮವಿಶ್ವಾ... ಮೂಡಿಸಿ ತಮ್ಮ ಮೇಲಾಗುತ್ತಿರುವ ಅನ್ಯಾಯ ಅ... ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ನಂಬಿಕೆ... ಮುಂದುವರೆಯುತ್ತಿರುವ ಪಿಎಫ್ಐಯ ಹೋ... ಪ್ರಾಮಾಣಿಕತೆಯ ಬಗ್ಗೆ ಪಟ್ಟಾಭಿ, ಜಿ.ರಾಜಶೇಖರ... ಸಾವಿರಾರು ಚಿಂತಕರಿಗೆ ನಂಬಿಕೆ ಇದೆ ಎಂ... ಪಾಪ್ಯುಲರ್ ಫ್ರಂಟ್‌ನ ನಂಬಿಕೆ. ಪಿಎಫ್ಐ ... ಎಂದೂ ಉಳಿಸಿಕೊಳ್ಳುತ್ತದೆ.

ಇದೀಗ ದೇಶದ ಕಾನೂನು, ಸಂವಿಧಾನ, ಜ... ವ್ಯವಸ್ಥೆಯನ್ನು ಸಂಪೂರ್ಣವಾಗಿ ಸ್ವಾಹಾ ಮಾ... ಬಾಯಿತೆರೆದು ನಿಂತಿರುವ ಆರೆಸ್ಸೆಸ್ ಎಂಬ ಮಿ... ಶಕ್ತಿಯನ್ನು ನೋಡಿ ಪ್ರಜಾತಂತ್ರವಾದಿಗಳು ಭ... ತ್ತಿರಬೇಕಾದರೆ ಮೂಲಭೂತವಾದವೆಂಬ ಗುಮ್ಮ... ತಲೆಕೆಡಿಸಿಕೊಳ್ಳುತ್ತಿರುವ ಸುಮಾರವರ ಬಗ್ಗೆ ಅಚ್ಚರಿ... ತ್ತದೆ.

-ಅಬ್ದುಲ್ ರಝಾಕ್ ಕೆ...
ಪಾಪ್ಯುಲರ್ ಫ್ರಂಟ್ ಆಫ್ ಇಂ...

ದುವೆ, ಮರುಮದುವೆ ಮತ್ತು Etc.



...ಮಾ ಲೋಕದ ಜನರೂ ಸಾಮಾನ್ಯ ಜನರಂತೆಯೇ. ...ಮುಕಿನಲ್ಲೂ ಸಂತೋಷ-ನೋವು, ಗಟ್ಟಿಯಾದ ... ಮುರಿದು ಬಿದ್ದ ಸಂಸಾರ, ಎಲ್ಲವೂ ಇರುತ್ತವೆ. ...ೂಡ ಜನಸಾಮಾನ್ಯರಂತೆ ಕಷ್ಟಸುಖಗಳನ್ನು ...ುತ್ತಾರೆ, ಬದುಕಿನ ಸಮಸ್ಯೆಗಳನ್ನು ಹಾದು ಹೊಸ ...ನ್ನೋ, ಹೊಸ ಸಂಗಾತಿಗಳನ್ನೋ ಆಯ್ಕೆ ಮಾಡಿ ...ಬದುಕು ಎಂಬ ಈ ಜಟಕಾ ಬಂಡಿಯಲ್ಲಿ ...

...ನಟ-ನಿರ್ಮಾಪಕ ಪ್ರಕಾಶ್ ರೈ ಮತ್ತು ನಿರ್ದೇಶಕ ...ಬಾಬು ಮರುಮದುವೆಯಾದ ನಂತರ ಮೊದಲ ...ತ್ರಕರ್ತರ ಮುಂದೆ ತಮ್ಮ ಹೊಸ ಪತ್ನಿಯರ ...ಮವಾಗಿ ಹಾಜರಾದರು. ಆದರೆ ಈ ಹಿಂದೆ ... ಇಷ್ಟು ಬಹಿರಂಗವಾಗಿ ನಡೆಯುತ್ತಿರಲಿಲ್ಲ ... ವಿಶೇಷ.

...ಚಿತ್ರರಂಗದಲ್ಲೂ ಸಾಕಷ್ಟು ಮದುವೆಗಳು ಗುಟ್ಟಾಗಿ ...ಅವುಗಳಲ್ಲಿ ಕೆಲ ವಿವಾಹಗಳಂತೂ ಪುರಾಣದ ...ವಿವಾಹಗಳಂತೆ ಗುಪ್ತವಾಗಿ ನಡೆದದ್ದೂ ಉಂಟು. ... ಈ ದೇಶದ ಕಾನೂನನ್ನೇ ಪ್ರಶ್ನಿಸುವ ರೀತಿಯಲ್ಲಿ ...ಉದಾಹರಣೆಗೆ, ದ್ವಿಪತ್ನಿತ್ವಕ್ಕೆ ನಮ್ಮ ಕಾನೂನಿನಲ್ಲಿ ...ಲ್ಲದಿದ್ದರೂ ಸಿನಿಮಾ ಲೋಕದಲ್ಲಿ ಅನೇಕರು ...ಾಗಿಯೇ ಇಬ್ಬರು ಹೆಂಡಿರ ಮುದ್ದಿನ ಗಂಡಂದಿರಾ... ಹಿಂದೆ ಕನ್ನಡ ಚಿತ್ರರಂಗದಲ್ಲಿ ಭಾರೀ ದೊಡ್ಡ ...ಡಿದ ಮದುವೆಯೆಂದರೆ ಪುಟ್ಟಣ್ಣ ಕಣಗಾಲ್ ...ಮದುವೆ. ಅವರ ಮದುವೆ ಒಂದು ರೀತಿಯಲ್ಲಿ ...ವಿವಾಹದಂತೆಯೇ ನಡೆದಿತ್ತು ಎನ್ನಬಹುದು. ... ತನಗಿಂತ ಹಿರಿಯರಾದ ಮತ್ತು ಆಗಲೇ ...ವಾಗಿ ಮಕ್ಕಳನ್ನು ಹೊಂದಿದ್ದ ಪುಟ್ಟಣ್ಣನವರನ್ನು ...ಕೆ ಮದುವೆಯಾದರು? ಅಂತಹ ಅನಿವಾರ್ಯತೆ ...? ಅವರಿಬ್ಬರ ನಡುವಿನ ಪ್ರೇಮ ಸಮಾಜದ ...ವನ್ನು ಮುರಿಯುವಷ್ಟು ಗೊಡ್ಡದಾಗಿದೆಯೇ ...ಗಿನ ಕಾಲದಲ್ಲಿ ಪುಟ್ಟಣ್ಣ ಮತ್ತು ಆರತಿ ಅವರ ...ಗಳು ಕೇಳಿದ್ದರು.

ಅದಕ್ಕಿಂತಲೂ ಮೊದಲು ಅಭಿನಯ ಶಾರದೆ ಜಯಂತಿ ಅವರ ವೈವಾಹಿಕ ಜೀವನದ ಬಗ್ಗೆ ಅವರ ಅಭಿಮಾನಿಗಳಲ್ಲಿ ಕುತೂಹಲ ಮತ್ತು ಜನರಲ್ಲಿ ಸಿಂಪಥಿ ಇತ್ತು. ಒಂದು ಮಗುವಿನ ತಾಯಿ ಆಗಿದ್ದ, ಅದಾಗಲೇ ಎರಡು ಬಾರಿ ಮದುವೆಯಾಗಿದ್ದ ಜಯಂತಿ ಅವರು ಕೊನೆಗೊಮ್ಮೆ ತಮಗಿಂತ ಕಿರಿಯನಾದ ನಟ ರಾಜಶೇಖರ್ ಎಂಬಾತನನ್ನು ಮದುವೆಯಾದಾಗಲಂತೂ ಇಡೀ ಕರ್ನಾಟಕ ದಿಗ್ಭ್ರಾಂತಗೊಂಡಿತ್ತು. ಜಯಂತಿ ಅವರ ಸಮಕಾಲೀನರಾಗಿದ್ದ ನಟಿ ಮಂಜುಳಾ ಕೂಡ ನಿರ್ದೇಶಕ ಅಮೃತಂ ಅವರನ್ನು ಮದುವೆಯಾಗಿದ್ದೂ ಎಲ್ಲರಲ್ಲಿ ಅಚ್ಚರಿ ಮೂಡಿಸಿತ್ತು. ಹಾಗೆಯೇ ನಟಿ ಕಲ್ಪನಾ ಕೂಡ ರಂಗಭೂಮಿ ನಟ ಗುಡಿಗೇರಿ ಬಸವರಾಜ್ ಅವರನ್ನು ಮದುವೆಯಾದಾಗಲೂ ಕಲ್ಪನಾ ಅವರ ಅಭಿಮಾನಿಗಳು ತಲ್ಲಣಗೊಂಡಿದ್ದರು.

ಇದೆಲ್ಲ ಆದನಂತರ ಬಹಳ ಸುದ್ದಿ ಮಾಡಿದ್ದು ನಟ ಜೈಜಗದೀಶ್ ಮತ್ತು ನಾಯಕಿ ವಿಜಯಲಕ್ಷ್ಮಿ ಸಿಂಗ್ ಮದುವೆ. ಅಷ್ಟೊತ್ತಿಗಾಗಲೇ ರೂಪಾ ಎಂಬಾಕೆಯನ್ನು ಮದುವೆಯಾಗಿದ್ದ ಮತ್ತು ಒಂದು ಹೆಣ್ಣು ಮಗಳ ತಂದೆಯಾಗಿದ್ದ ಜೈಜಗದೀಶ್ ಮತ್ತು ವಿಜಯಲಕ್ಷ್ಮಿ ಸಿಂಗ್ ನಡುವಿನ ಲವ್ ಸ್ಟೋರಿ ಬಗ್ಗೆ ಬಹಳಷ್ಟು ಗಾಸಿಪ್ ಕೇಳಿಬಂದಿತ್ತು. ಆದರೆ ಆಗಿನ ಕಾಲದಲ್ಲಿ ಅದನ್ನು ಜನ ನಂಬಿರಲಿಲ್ಲ. ಆದರೆ ಒಂದು ದಿನ ಇದ್ದಕ್ಕಿದ್ದಂತೆ ಮೈಸೂರಿನಲ್ಲಿ ಹಸೆಮಣೆ ಏರಿದ ಜೈಜಗದೀಶ್ ಮತ್ತು ವಿಜಯಲಕ್ಷ್ಮಿ ಮದುವೆಯಾದರು. ಅದಾದ ನಂತರವೇ ಜೈಜಗದೀಶ್ ತನ್ನ ಮೊದಲನೆ ಪತ್ನಿ ರೂಪಾಗೆ ಡೈವೋರ್ಸ್ ನೀಡಿದ್ದು. ಆ ಕತೆ ಅಲ್ಲಿಗೇ ನಿಲ್ಲಲಿಲ್ಲ. ರೂಪಾ ಆನಂತರ ಓರ್ವ ಯಶಸ್ವಿ ಕೋಳಿ ಮಾಂಸದ ಉದ್ಯಮಿಯನ್ನು ಮದುವೆಯಾದರು. ಆತ ಕೂಡ ಈ ಹಿಂದೆ ಮದುವೆಯಾಗಿದ್ದು ಮಕ್ಕಳಿದ್ದರೂ ಆತನ ಹೆಂಡತಿ ತೀರಿಕೊಂಡಿದ್ದರು. ಆದರೆ ಯಾವಾಗ ರೂಪಾ ಆತನ ಎರಡನೆ ಹೆಂಡತಿಯಾಗಿ ಆಗಮಿಸಿದರೋ ಆಗ ಅಪ್ಪನ ಆಸ್ತಿಗೆ ಆಕೆಯೂ ಭಾಗಿಯಾಗುತ್ತಾಳೆಂದು ಆತನ ಬೆಳೆದು ನಿಂತಿದ್ದ ಮಕ್ಕಳು ದಂಗೆ ಎದ್ದರು. ಕೊನೆಗೆ ಆ ಕೋಳಿ ಮಾಂಸದ ಉದ್ಯಮಿ ಅಮೆರಿಕದ ನ್ಯೂಯಾರ್ಕ್ ನಗರದಲ್ಲಿ ಹೃದಯಾಘಾತದಿಂದ ತೀರಿಕೊಂಡರು. ರೂಪಾ ಅವರಿಗೆ ಆತನ ಆಸ್ತಿಯ ಸಾಕಷ್ಟು ಹಣವೂ ಬಂತು. ಇತ್ತೀಚೆಗೆ ರೂಪಾ ಮತ್ತು ಜೈಜಗದೀಶ್ ಅವರ ಪುತ್ರಿ ಅರ್ಪಿತಾಳ ಮದುವೆಯೂ ಆಯಿತೆಂದು ಸುದ್ದಿ. ಈಗ ಜೈಜಗದೀಶ್ ಮತ್ತು ವಿಜಯಲಕ್ಷ್ಮಿ ದಂಪತಿಗೆ ನಾಲ್ವರು ಹೆಣ್ಣು ಮಕ್ಕಳಿದ್ದಾರೆ.



ರಾಧಿಕಾ

ಸುಂದರ ಮತ್ತು ಬುದ್ಧಿಜೀವಿ ನಟ ಎನಿಸಿಕೊಂಡಿದ್ದ ಅನಂತ್‌ನಾಗ್ ಕೂಡ ತಮ್ಮೊಂದಿಗೆ ಕೆಲವು ಸಿನಿಮಾಗಳಲ್ಲಿ ನಟಿಸಿದ್ದ ಪಂಜಾಬಿ ಮೂಲದ ನಟಿ ಗಾಯಿತ್ರಿ ಅವರನ್ನು ಮದುವೆಯಾದ ಸುದ್ದಿ ಬಹಿರಂಗವಾದಾಗ ಬಹಳಷ್ಟು ಜನರಿಗೆ ಅಚ್ಚರಿ ಆಗಿರಲಿಲ್ಲ. ಏಕೆಂದರೆ ಅಷ್ಟೊತ್ತಿಗಾಗಲೇ ಅವರಿಬ್ಬರ ನಡುವೆ ಪ್ರೇಮಾಂಕುರವಾಗಿದ್ದು ಮತ್ತು ಒಂದು ರೀತಿಯಲ್ಲಿ ಮದುವೆಗಿಂತ ಮುನ್ನ ಅವರಿಬ್ಬರು ದಂಪತಿಗಳಂತೆ ಜೀವಿಸುತ್ತಿದ್ದದ್ದೂ ಚಿತ್ರರಂಗದ ಬಹಳಷ್ಟು ಜನರಿಗೆ ಗೊತ್ತಿದ್ದ ವಿಚಾರವಾಗಿತ್ತು.

ಇತ್ತೀಚಿನ ಕೆಲ ನಟಿಯರೂ ತಮ್ಮ ಮೊದಲನೆ ಮದುವೆ ಮುರಿದು ಬಿದ್ದ ನಂತರ ಮರು ಮದುವೆಯಾದ ಉದಾಹರಣೆಗಳೂ ಇವೆ. ಮದುವೆಯಾಗಿ ಅಮೆರಿಕಾಕ್ಕೆ ಹಾರಿಹೋದ ನಟಿ ಸುಧಾರಾಣಿ ಅಲ್ಲಿ ತನ್ನ ಪತಿ ಜೊತೆ ಸಂಸಾರ ನಡೆಸಲಾಗದೆ ಬೆಂಗಳೂರಿಗೆ ವಾಪಸ್ ಬಂದರು. ಆನಂತರ ಅವರು ಮತ್ತೆ ಮದುವೆಯಾಗಿ ಚಿತ್ರೋದ್ಯಮದಲ್ಲಿ ಮುಂದುವರೆದರು.

ಬುದ್ಧಿಜೀವಿ ಮತ್ತು ಬೋಲ್ಡ್ ನಟಿ ಎನಿಸಿಕೊಂಡಿದ್ದ ವಿನಯಾ ಪ್ರಸಾದ್ ತಮ್ಮ ವೃತ್ತಿಜೀವನದ ಆರಂಭದಲ್ಲೇ ವಿಧವೆಯಾದರು. ಆನಂತರ ವಯಸ್ಸಿನಲ್ಲಿ ತಮಗಿಂತ ತುಂಬಾ ಹಿರಿಯರೆನಿಸಿಕೊಂಡಿರುವ ಪ್ರಕಾಶ್ ಎಂಬ ನಿರ್ಮಾಪಕರ ಜೊತೆ ವಿನಯಾ ಪ್ರಸಾದ್ ಮದುವೆಯಾದರು. ಈ ನಡುವೆ ಪ್ರೇಮಿಸಿ ಮದುವೆಯಾಗಿದ್ದ ನಟಿ ಶ್ರುತಿ ಮತ್ತು ನಿರ್ದೇಶಕ ಮಹೇಂದರ್ ಜೀವನದಲ್ಲಿ ಬಿರುಕುಬಿಟ್ಟು ದೊಡ್ಡ ರಂಪಾಟವಾಗಿದ್ದು ಎಲ್ಲರಿಗೂ ಗೊತ್ತಿರುವ ವಿಷಯವೇ.

ಇನ್ನು ಹೊಸ ಹುಡುಗಿಯರಲ್ಲಿ ಹೆಚ್ಚು ಸುದ್ದಿ ಮಾಡಿದ್ದು ರಾಧಿಕಾ. ಈಕೆ ಯಶಸ್ಸು ಪಡೆಯುತ್ತಿದ್ದಂತೆಯೇ ಚಿತ್ರರಂಗಕ್ಕೆ ಕಾಲಿಡುವ ಮುನ್ನವೇ ಕರಾವಳಿಯ ಒಬ್ಬನನ್ನು ಮದುವೆಯಾಗಿದ್ದಳೆಂಬುದು ದೊಡ್ಡ ಸುದ್ದಿಯಾಯಿತು. ಆ ಮದುವೆ ನಡೆದಾಗ ಆಕೆಗಿನ್ನೂ 18 ವಯಸ್ಸು ತುಂಬಿರಲಿಲ್ಲವಾಗಿ ಆ ಮದುವೆ ಕಾನೂನು ಬಾಹಿರವೇ, ಅಕ್ರಮ ಮದುವೆಯೇ ಎಂದೆಲ್ಲ ಚರ್ಚೆ ನಡೆಯುತ್ತಿದ್ದಾಗಲೇ ಆಕೆಯ ಕೈಹಿಡಿದವ ತಾನೆಂದು ಹೇಳಿಕೊಳ್ಳುತ್ತಿದ್ದ ವ್ಯಕ್ತಿ ಅಕಾಲಿಕವಾಗಿ ಮರಣ ಹೊಂದಿದ. ಆತನ ಸಾವಿನೊಂದಿಗೆ ರಾಧಿಕಾಳ ಮೊದಲನೆ ಮದುವೆ ಕುರಿತ ಚರ್ಚೆಯೂ ಕೊನೆಗೊಂಡಿತು. ಆದರೆ ಆನಂತರ ರಾಧಿಕಾ ಹಳೇ ಕಾಲದ ನಟಿಯರಂತೆ 'ಗಾಂಧರ್ವ' ವಿವಾಹವಾದಳು. ತನ್ನ ಎರಡನೆ ಪತಿಗೆ ಗಂಡು ಮಗುವನ್ನೂ ಹೆತ್ತರು. ಆದರೆ ಈಗ ತಾನು ಯಾರನ್ನು ಮದುವೆಯಾಗಿದ್ದೇನೆಂದು ಈತನಕ ರಾಧಿಕಾ ಬೋಲ್ಡ್ ಆಗಿ ಎಲ್ಲೂ ಏನೂ ಹೇಳಿಲ್ಲ.

ಒಂದಂತೂ ಸ್ಪಷ್ಟ. ಈಗ ಕಾಲ ಬದಲಾಗಿದೆ. ಹಿಂದಿನ ಕಾಲದ ನಟಿನಟಿಯರಂತೆ ಇವತ್ತಿನ ಬಹಳಷ್ಟು ಕಲಾವಿದರು ತಮ್ಮ ಮದುವೆಯನ್ನಾಗಲಿ, ಮರುಮದುವೆಯನ್ನಾಗಲಿ ಗುಟ್ಟಾಗಿ ಇಟ್ಟುಕೊಳ್ಳುತ್ತಿಲ್ಲ. ಅದು ಕೂಡ ಜೀವನ ಎಂಬ ಪಯಣದಲ್ಲಿ ನಡೆಯುವ ಸಹಜವಾದ ಮತ್ತು ಅನಿವಾರ್ಯವಾದ ಘಟ್ಟವೆಂಬಂತೆ ಅವರು ಕಾಣುತ್ತಿದ್ದಾರೆ.



ಉದಾಹರಣೆ 'ನಾನೂ ನನ್ನ ಕನಸು' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲೇ ಪ್ರಕಾಶ್ ರೈ ತನ್ನ ಭಾವಿಪತ್ನಿಯನ್ನು ಮಾಧ್ಯಮದವರಿಗೆ ಪರಿಚಯಿಸಿದ್ದರು. ಮೊನ್ನೆ ಅದೇ ಚಿತ್ರದ ಶತದಿನೋತ್ಸವ ಸಂದರ್ಭದಲ್ಲಿ ಪತ್ರಕರ್ತ ಮಿತ್ರರಿಗೆ ಪರಿಚಯಿಸಬೇಕೆಂಬ ಏಕೈಕ ಕಾರಣದಿಂದ ಮುಂಬೈಯಲ್ಲಿ ಚಿತ್ರೀಕರಣದಲ್ಲಿದ್ದ ತನ್ನ ಪತ್ನಿ ಬೆಂಗಳೂರಿಗೆ ಬರಲೇಬೇಕೆಂದು ರೈ ಒತ್ತಾಯಿಸಿದರಂತೆ. ಅದರಂತೆ ಮುಂಬೈಯಿಂದ ರೈ ಪತ್ನಿ ಪೋನಿ ವರ್ಮಾ ಹಾರಿ ಬಂದನಂತರ ಇಬ್ಬರೂ ಒಟ್ಟಿಗೆ ಕುಳಿತು ತಮ್ಮ ನಡುವಿನ ಪ್ರೀತಿ-ಪ್ರೇಮ-ಪ್ರಣಯದ ಬಗ್ಗೆ ಪತ್ರಕರ್ತರ ಪ್ರಶ್ನೆಗಳಿಗೆ ನಿರ್ಭೀತವಾಗಿ ಉತ್ತರಿಸುತ್ತಾ ಹೋದರು.

ಪ್ರಕಾಶ್ ರೈ ಮತ್ತು ಪೋನಿ ವರ್ಮಾಳನ್ನು ಭೇಟಿಯಾದ ಪತ್ರಕರ್ತರು ಮರುದಿನ 'ಮತ್ತೊಂದು ಮದುವೆನಾ?' ಚಿತ್ರ ಮುಹೂರ್ತದಲ್ಲಿ ನಿರ್ದೇಶಕ ದಿನೇಶ್ ಬಾಬು ಮತ್ತು ಅವರು ಇತ್ತೀಚೆಗೆ ಮದುವೆಯಾಗಿರುವ ಚೇತನಾರನ್ನು ಭೇಟಿಯಾದರು. ಈ ಚಿತ್ರದ ನಿರ್ಮಾಪಕ ಉಮೇಶ್ ಬಣಕಾರ್ ಎಲ್ಲರೆದುರು ಈ ದಂಪತಿಯನ್ನು ವೇದಿಕೆಗೆ ಕರೆದು ದೊಡ್ಡ ಹಾರ ಹಾಕಿ ಅಭಿನಂದಿಸಿದರು. ಅನಂತರ ಇಬ್ಬರೂ ಪತ್ರಕರ್ತರ ಪ್ರಶ್ನೆಗಳ ಸುರಿಮಳೆಗೆ ಉತ್ತರಿಸಿದರು.

ಹೀಗೆ ಚಿತ್ರರಂಗದವರು ಮದುವೆ, ಮರು ಮದುವೆ ಬಗ್ಗೆ ಬರೆಯುತ್ತಿರುವ ಈ ಸಂದರ್ಭದಲ್ಲಿ ಇನ್ನೊಂದು ಮದುವೆಯ ಸುದ್ದಿ ಕೇಳಿಬರುತ್ತಿದೆ. ಬಹುಶಃ ಈ ಸಂಚಿಕೆ ನಿಮ್ಮ ಕೈಸೇರುವ ಹೊತ್ತಿಗೆ ನೃತ್ಯ ನಿರ್ದೇಶಕ, ನಟ ಪ್ರಭುದೇವ್ ಮತ್ತು ನಟಿ ನಯನತಾರ ಸತಿಪತಿಗಳಾಗಿ ಹಾರ ಬದಲಾಯಿಸಿದ ಸುದ್ದಿ ನಿಮಗೆ ತಲುಪಲೂಬಹುದು. ಅಂದಹಾಗೆ ಪ್ರಭುದೇವ್ ಅವರಿಗೆ ಇದು ಎರಡನೆ ಮದುವೆ.


ಬಹುತೇಕ ಎಲ್ಲಾ ನಟನಟಿಯರು ತಮ್ಮ ಮರುಮದುವೆ ಬಗ್ಗೆ ನೀಡುವ ಉತ್ತರ ಒಂದೇ ಧಾಟಿಯಲ್ಲಿರುತ್ತದೆ. ಅದೇನೆಂದರೆ 'ಬಣ್ಣದ ಜೀವನ ಮತ್ತು ಜನಪ್ರಿಯತೆ ಬೋರು ಹೊಡೆಸುತ್ತಾ ಏಕಾಂಗಿತನ ಆವರಿಸಿದೆ. ಈ ಹುಡುಗಿ ನನಗೀಗ ಹೊಸ ಶಕ್ತಿ ಮತ್ತು ಜೀವನೋತ್ಸಾಹವನ್ನು ತುಂಬಿದ್ದಾಳೆ... ಇತ್ಯಾದಿ ಇತ್ಯಾದಿ" ಅಂದರೆ ಈ ಜನಪ್ರಿಯತೆ, ಹಣ, ಖ್ಯಾತಿ, ಬಿರುದು ಬಾವಲಿಗಳಿಂದ ಈ ತಾರೆಯರಿಗೆ ಸುಖ ನೆಮ್ಮದಿ ಸಿಗುವುದಿಲ್ಲವೆಂದಾಯಿತು ಅಲ್ಲವೇ?

ಅದು ಅವರ ಖಾಸಗಿ ಆಯ್ಕೆ ಬಿಡಿ. ಹಾಗೇ ನೋಡಿದರೆ ಈಗಿನ ಜಮಾನದ ಹಲವಾರು ನಟನಟಿಯರು ನಿಜಕ್ಕೂ ಬೋಲ್ಡ್ ಆಗಿ ತಮ್ಮ ಮದುವೆಯ ಸುದ್ದಿಯನ್ನು ಮಾಧ್ಯಮದ ಮುಖಾಂತರ ಸಮಾಜಕ್ಕೆ ಹೇಳುತ್ತಾರೆ. ಆದರೆ ಬಣ್ಣದ ಲೋಕದಲ್ಲಿ ಅದೆಷ್ಟೋ ಗಾಂಧರ್ವ ವಿವಾಹಗಳು ಈಗಲೂ ನಡೆಯುತ್ತಿವೆ. ಉದಾಹರಣೆಗೆ ಅಂದು ಕುಳ್ಳ ದ್ವಾರಕೀಶ್ ಇಬ್ಬರ ಹೆಂಡಿರ ಮುದ್ದಿನ ಗಂಡನಾಗಿದ್ದರೆ ಇಂದು ಕರಿ ಚಿರತೆ ವಿಜಯ್ ಕೂಡ ಇಬ್ಬರು ಹೆಂಡತಿಯರ ಪ್ರೀತಿಗೆ ಪಾತ್ರರಾಗಿದ್ದಾರೆ!

• ಶೆಣೈ

shenoylankesh@gmail.com

...ಟು 12': ಎ ಮಿಡ್‌ನೈಟ್ ಸ್ಟೋರಿ!



ಅಮೆರಿಕಾದಲ್ಲಿರುವ ಬಿ.ಸಿ.ಪಾಟೀಲ್ ಅವರ ಸಹೋದರ ಅಶೋಕ್ ಪಾಟೀಲ್ ಮತ್ತೊಂದು ಸಿನಿಮಾ ಮಾಡಲು ಗಾಂಧಿನಗರಕ್ಕೆ ಕಾಲಿಟ್ಟಿದ್ದಾರೆ. ಚಿತ್ರದ ಹೆಸರು '9 ಟು 12'. ಅಂದರೆ ರಾತ್ರಿ ಒಂಭತ್ತರಿಂದ 12 ಗಂಟೆ ತನಕ ಬೆಂಗಳೂರು ನಗರದಲ್ಲಿ ಏನೇನು ನಡೆಯುತ್ತದೆ ಎಂಬುದೇ ಚಿತ್ರದ ಕಥಾವಸ್ತುವಂತೆ! ಅದಕ್ಕಾಗಿ ಅಶೋಕ್ ಪಾಟೀಲ್ ರಾತ್ರಿ ಹೊತ್ತು ಆಟೋಗಳಲ್ಲಿ ಓಡಾಡಿದ್ದಾರಂತೆ, ಬಾರ್-ಪಬ್‌ಗಳಿಗೆ ವಿಸಿಟ್ ನೀಡಿದ್ದಾರಂತೆ, ಹಾಗೂ ಇನ್ನೂ ಅನೇಕ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆದು ನೋಡಬಾರದ್ದನ್ನೆಲ್ಲಾ ನೋಡಿದ್ದಾರಂತೆ! ಅದನ್ನೀಗ ನಾವು ನೋಡಬೇಕಂತೆ!


...ತ್ರದಲ್ಲಿ ಎಂದಿನಂತೆ ಅವರ ಸಹೋದರ ಬಿ.ಸಿ.ಪಾಟೀಲ್ ಇದ್ದೇ ಇರುತ್ತಾರೆ. 'ಅವ್ವ' ಚಿತ್ರದ ...ತಾ ಇದರಲ್ಲಿ ಮತ್ತೊಮ್ಮೆ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾಳೆ. ಅಂದಹಾಗೆ, ಈ ಕೃಷ್ಣವರ್ಣದ ...ತಾ ತನ್ನ ಹೆಸರನ್ನು ಈಗ ನಿವೇದಿತಾ ಎಂದು ಬದಲಾಯಿಸಿದ್ದಾಳೆ. ಹೆಸರು ಬದಲಾಯಿಸಿದ ...ರೂ ಅದೃಷ್ಟ ಕೂಡಿಬರಬಹುದು ಎಂಬುದು ಆಕೆಯ ಅನಿಸಿಕೆ. ಅಂತೂ ಹಲವಾರು ...ಂತರ ನಿರ್ದೇಶನಕ್ಕೆ ಬಂದಿರುವ ಅಶೋಕ್ ಪಾಟೀಲ್ ಮತ್ತು ನಾಯಕಿಯಾಗಿ ಕಾಣಿಸಿಕೊಳ್ಳುತ್ತಿರುವ ...ಗೆ ಬೆಂಗಳೂರಿನ ರಾತ್ರಿ ಜೀವನ ಬ್ರೇಕ್ ಕೊಡುತ್ತದೋ ನೋಡಬೇಕು.

...ಾಗೆ ಬೆಂಗಳೂರಿನ ರಾತ್ರಿ ಜೀವನಕ್ಕೂ ಅಮೆರಿಕಾದ ರಾತ್ರಿ ಜೀವನಕ್ಕೂ ಅಂತಹ ಮಹತ್ತರವಾದ ... ಇಲ್ಲ ಎಂಬುದು ಅಶೋಕ್ ಪಾಟೀಲ್‌ಗೆ ಗೊತ್ತಿಲ್ಲದ ವಿಷಯವೇನಲ್ಲ. ಬಹುಶಃ ಹಾಲಿವುಡ್‌ನ ...ಒಂದು ಚಿತ್ರವನ್ನು ನೋಡಿ ಅದನ್ನು ಈ ಮನುಷ್ಯ ಕನ್ನಡೀಕರಿಸಿದರೂ ಆಶ್ಚರ್ಯಪಡಬೇಕಾಗಿಲ್ಲ.

ರಜನಿಕಾಂತ್ ನಟಿಸಿದ ಚಿತ್ರಗಳ ಕರ್ನಾಟಕದ ಹಂಚಿಕೆ ಇಷ್ಟುದಿನ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷ ಎಚ್.ಡಿ. ಗಂಗರಾಜು ಅವರ ಪಾಲಿಗೇ ಹೋಗುತ್ತಿತ್ತು.

ಈ ಬಾರಿ ಯಾಕೋ ಗಂಗರಾಜು ಪಾಲಿಗೆ 'ಯಂದಿರನ್' ಕೈ ಕೊಟ್ಟಿದ್ದಾನೆ. ಈ ಚಿತ್ರದ ಕರ್ನಾಟಕದ ಡಿಸ್ಟ್ರಿಬ್ಯೂಶನ್ ಹೊಸಬರ ಪಾಲಾಗಿದೆ. ಸ್ಟಾರ್ ಕ್ರಿಯೇಟರ್ಸ್‌ನ ಗುರು ದೇಶಪಾಂಡೆ ಮಧ್ಯಸ್ಥಿಕೆಯಲ್ಲಿ ಮುನಿರಾಜು, ಶ್ರೀಕಾಂತ್, ಮೋಹನ್ ಎಂಬ ಮೂವರು ಪಾಲುದಾರರ 'ವೀರಾಂಜನೇಯ ಸ್ವಾಮಿ ಪ್ರೊಡಕ್ಷನ್ಸ್‌ಗೆ' ಬರೋಬ್ಬರಿ ಎಂಟೂವರೆ ಕೋಟಿ ರೂಪಾಯಿಗಳಿಗೆ ಯಂದಿರನ್ ಮಾರಾಟವಾಗಿದೆ.

ಎಂಟೂವರೆ ಕೋಟಿ ರುಪಾಯಿ ಹೂಡಿ ಕನ್ನಡ ಸಿನಿಮಾಗಳನ್ನು ನಿರ್ಮಿಸಲು ಆಕಾಶ ಭೂಮಿ ನೋಡುವ ನಿರ್ಮಾಪಕರು ತಮಿಳು ಚಿತ್ರವೊಂದರ ಹಕ್ಕು ಪಡೆಯಲು ಇಷ್ಟು ದೊಡ್ಡ ಮೊತ್ತವನ್ನು ಸುರಿದಿರುವುದು ಸಣ್ಣ ವಿಷಯವಂತೂ ಅಲ್ಲ. ರಜನಿಕಾಂತ್ ಸಿನಿಮಾಗಳಿಗೆ ಎಷ್ಟೇ ಪ್ರಚಾರವಿದ್ದರೂ ಒಂದು 'ಬಾಬಾ' ಚಿತ್ರದಂತೆ ಯಂದಿರನ್ ಕೈಕೊಟ್ಟರೆ ವಿತರಕರ ಪಾಡು ಏನಾಗುತ್ತದೋ ಗೊತ್ತಿಲ್ಲ.



ಎಂದಿರನ್ ಬೆಲೆ ಎಂಟೂವರೆ ಕೋಟಿ!

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 29-09-2010 RNI No. KARKAN20

ಮೆಡಿ 'ಕಾಲ್ ಸೀಟು' ಬೇಕೆ? ಪೂಜಾಳನ್ನು ಕೇಳಿ!

ಇವತ್ತು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಪೇಮೆಂಟ್ ಸೀಟು ಪಡೆಯಲು ಏನಿಲ್ಲವೆಂದರೂ ನಲವತ್ತೈವ ಲಕ್ಷ ಕುಕ್ಕಬೇಕು. ಆದರೆ ಪೂಜಾ ಕೊಡಿಸುವುದ ಮ್ಯಾನೇಜ್‌ಮೆಂಟ್ ಕೋಟಾದ ಸೀಟನ್ನು. ಹಾಗಾಗಿ ಪೂಜಾಳಿ ಇಪ್ಪತ್ತು ಲಕ್ಷ ಒಪ್ಪಿಸಿಬಿಟ್ಟರೆ ಅರ್ಧ ಬೆಲೆಗೆ ಸೀಟು ಸಿಕ್ಕಂತಾಗುತ್ತ

ಗಾಂಧಿ ನಗರದ ಪಾಲಿಗೆ ಪೂಜಾ ಗಾಂಧಿಯ ಪವರ್ ಖುಲ್ಲಂ ಖುಲ್ಲಾ ಖಾಲಿಯಾಗಿದೆ.

ಎರಡು ವರ್ಷಗಳ ಹಿಂದೆ ಪೂಜಾಳ ಕಾಲ್‌ಶೀಟ್‌ಗಾಗಿ ಯಾರೆಲ್ಲ ಆಕೆಯ ಬೆನ್ನುಬಿದ್ದಿದ್ದರೋ ಇಂದು ಅವರ್‍ಯಾರೂ ಆಕೆಯತ್ತ ತಿರುಗಿಯೂ ನೋಡುತ್ತಿಲ್ಲ. ಹಿಂದೊಮ್ಮೆ ಇಪ್ಪತ್ತು-ಇಪ್ಪತ್ತೈದು ಲಕ್ಷ ಕೊಡುತ್ತೇವೆಂದರೂ ಪೂಜಾಳ ಕಾಲ್‌ಶೀಟ್ ಸಿಗುತ್ತಿರಲಿಲ್ಲ. ಆದರೀಗ ಪೂಜಾ ಕೇವಲ ಎಂಟು ಲಕ್ಷಕ್ಕೆ ನಟಿಸಲು ಸಿದ್ಧಳಿದ್ದರೂ ಆಕೆಯನ್ನು ಕಾಲ್ ಮಾಡುವವರೇ ಯಾರೂ ಇಲ್ಲ. ಸಿನಿಮಾದವರು ತನಗೆ ದುಡ್ಡುಕೊಡದಿದ್ದರೇನು ಎಂದೋ ಏನೋ ಪೂಜಾ ಇಂದು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಸೀಟು ವ್ಯಾಪಾರಕ್ಕಿಳಿದುಬಿಟ್ಟಿದ್ದಾಳೆ!



ಹೌದು, ಪೂಜಾ ಗಾಂಧಿ ಈಗ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸೀಟುಗಳನ್ನು ಕೊಡಿಸುವ ಬ್ರೋಕರ್ ಕೆಲಸಕ್ಕೆ ಇಳಿದಿರುವ ವಿಚಾರ ಇಡೀ ಗಾಂಧಿನಗರದಲ್ಲಿ ದೊಡ್ಡ ಸುದ್ದಿಯಾಗಿದೆ. ಚೆಕ್ ಮಾಡಬೇಕಿದ್ದರೆ, ಸುಮ್ಮನೆ ಬಿಜಿಎಸ್ ಮೆಡಿಕಲ್ ಕಾಲೇಜ್‌ನ ಮ್ಯಾನೇಜ್‌ಮೆಂಟಿಗೊಂದು ಕರೆ ಒಗಾಯಿಸಿ ನೋಡಿ. 'ನಾವು ಪೂಜಾ ಗಾಂಧಿ ಕಡೆಯವರು, ನಮಗೊಂದು ಸೀಟು ಬೇಕಿತ್ತು' ಎಂದು ಯಾರಾದರೂ ಸುಮ್ಮನೇ ಕೇಳಿದರೂ ಅತ್ತಲಿಂದ 'ಆಯಮ್ಮನಿಗೆ ಸೀಟು ಕೊಟ್ಟೂ ಕೊಟ್ಟೂ ಸಾಕಾಗಿದೆ. ಈಗಾಗಲೇ ಅವರಿವರ ಹೆಸರೇಳೇ ನಾಲ್ಕೈದು ಸೀಟು ಪಡೆದಿದ್ದಾಳೆ. ಇನ್ನೆಷ್ಟು ಅಂತಾ ಕೊಡೋದು. ಸಾಕು ಇಡ್ರಿ ಫೋನು...' ಎಂದು ಗದರಿ ಫೋನು ಕುಕ್ಕುತ್ತಾರೆ.

ಪೂಜಾ ಗಾಂಧಿ ಆರಂಭದಲ್ಲಿ ಸಿನಿಮಾದಲ್ಲಿ ಫೇಮಸ್ ಆಗುತ್ತಿದ್ದಂತೇ ಒಂದಷ್ಟು ಜನ ರಾಜಕಾರಣಿಗಳೊಂದಿಗೂ ಉತ್ತಮ ಬಾಂಧವ್ಯ ಬೆಳೆಸಿಕೊಂಡಳು. ಡಿ.ಕೆ.ಶಿ.ಯಂಥ ಖದರ್‍ರು ಇರುವ ರಾಜಕಾರಣಿಗಳ ಜೊತೆ ವೇದಿಕೆ ಹಂಚಿಕೊಂಡವಳು. ಈಗಲೂ ಬಹಳಷ್ಟು ರಾಜಕಾರಣಿಗಳ ಖಾಸಗಿ ಸಮಾರಂಭಗಳಿಗೆ ಪೂಜಾಳಿಗೆ ಆಹ್ವಾನವಿರುತ್ತದೆ.

ಇರಲಿ, ಒಬ್ಬ ಯಶಸ್ವಿ ನಾಯಕನಟಿ ಎನಿಸಿಕೊಂಡಮೇಲೆ ರಾಜಕಾರಣಿಗಳ ಜೊತೆ ಸಭೆಗಳಲ್ಲಿ ಭಾಗವಹಿಸುವುದು, ಅವರ ಮನೆಯ ಸಮಾರಂಭಗಳಲ್ಲಿ ಭಾಗವಹಿಸುವುದು ಸಹಜವಾಗಿ ಇದ್ದೇ ಇರುತ್ತದೆ. ಆದರೆ ಈಗ ಪೂಜಾ ಮೇಡಮ್ಮು ತಮ್ಮ 'ಪೊಲಿಟಿಕಲ್' ಪವರ್ ಬಳಸಿ ಸೀಟು ವ್ಯಾಪಾರಕ್ಕಿಳಿದಿರುವುದು ಬಹಳಷ್ಟು ಜನರ ತಲೆಗೆ ಹುಳಾ ಬಿಟ್ಟಂಗಾಗಿದೆ.

ಒಂದು ಮೂಲದ ಪ್ರಕಾರ ಹಲವಾರು ರಾಜಕಾರಣಿಗಳಿಂದ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಮೇಲೆ ಇನ್‌ಫ್ಲೂಯೆನ್ಸ್ ಮಾಡಿಸಿ ಒಂದಷ್ಟು ಮಂದಿಗೆ ಸೀಟು ಕೊಡಿಸಿದ್ದಾಳಂತೆ. ಹಾಗೆಂದು ಪೂಜಾಳ ಬಗ್ಗೆಯಾಗಲಿ ಆಕೆಗೆ ಸಹಕರಿಸಿದ ರಾಜಕಾರಣಿಗಳ ಬಗ್ಗೆಯಾಗಲಿ ತಪ್ಪಾಗಿ ಭಾವಿಸುವ ಅಗತ್ಯವಿಲ್ಲ. ಈಕೆ ಸಿನಿಮಾರಂಗದಲ್ಲಿ ಒಂದಿಷ್ಟು ಹೆಸರು ಮಾಡಿರುವುದರಿಂದ 'ಏನೋ ರಿಕ್ವೆಸ್ಟ್ ಮಾಡ್ತಿದಾಳೆ' ಎನ್ನುವ ಕಾರಣಕ್ಕೆ ಎಲ್ಲರೂ ಆಕೆಯ ಕೋರಿಕೆಗೆ ಮಣಿದು ತಮ್ಮ ಪ್ರಭಾವ ಬೀರಿ ಸೀಟು ಕೊಡಿಸಿರಬಹುದು. ಆದರೆ ಆ ಸೀಟುಗಳನ್ನು ಈಕೆ ಕಾಸಿಗೆ ಮಾರಿಕೊಳ್ಳುತ್ತಿದ್ದಾಳೆ ಎನ್ನುವ ಅಸಲೀ ವಿಚಾರ ಮಾತ್ರ ಪಾಪ ಅವರ್‍ಯಾರಿಗೂ ಗೊತ್ತಿರಲಿಲ್ಲ!

ಪೂಜಾ ತನ್ನ ಆಪ್ತರು ಮತ್ತು ಪ್ರಭಾವಿಗಳ ಬಳಿ 'ಐ ವಾಂಟ್ ಎ ಸೀಟ್ ಫಾರ್ ಮೈ ಕಸಿನ್' ಎಂದು ಕೇಳಿ ಈಗಾಗಲೇ ಬಿಜಿಎಸ್ ಮತ್ತು ಕಿಮ್ಸ್ ವಿದ್ಯಾ ಸಂಸ್ಥೆಗಳಲ್ಲಿ ಹತ್ತಾರು ಸೀಟುಗಳನ್ನು ಪಡೆದಿರುವ ಮಾತು ಕೇಳಿಬರುತ್ತಿದೆ. ಆದರೆ ಈಕೆಗೆ ಇಷ್ಟೊಂದು ಜನ ಕಸಿನ್‌ಗಳು ಹೇಗೆ ಬಂದರು, ಎಲ್ಲಿಂದ ಬಂದರು, ಅವರೆಲ್ಲ ಯಾರು ಎಂದು ನೋಡಿದರೆ ಕೇರಳ, ತಮಿಳುನಾಡು ಮತ್ತು ಹೈದ್ರಾಬಾದಿನ ಅಭ್ಯರ್ಥಿಗಳು ಸಿಗುತ್ತಾರೆ. ಪೂಜಾ ಗಾಂಧಿಗೆ ಇಷ್ಟೊಂದು ರಾಜ್ಯದಲ್ಲಿ ಇಷ್ಟೊಂದು ಕಸಿನ್‌ಗಳು ಹೇಗೆ ಹುಟ್ಟಿಕೊಂಡರು ಎಂದು ಹುಡುಕ ಹೊರಟರೆ ಈಕೆಗೆ ಯಾವ ಕಸಿನ್‌ಗಳೂ, ಕವಡೆಗಳೂ ಇಲ್ಲ... ಅದೆಲ್ಲಾ ಆಕೆ ಸೀಟು ಪಡೆಯಲು ಬಿಟ್ಟಿರುವ ರೈಲು ಎಂದು ಗೊತ್ತಾಗುತ್ತದೆ.

ಇವತ್ತು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪೇಮೆಂಟ್ ಸೀಟು ಪಡೆಯಲು ಏನಿಲ್ಲವೆಂದರೂ ನಲವತ್ತೈವತ್ತು ಲಕ್ಷ ಕುಕ್ಕಬೇಕು. ಆದರೆ ಪೂಜಾ ಕೊಡಿಸುವುದು ಮ್ಯಾನೇಜ್‌ಮೆಂಟ್ ಕೋಟಾದ ಸೀಟನ್ನು. ಹಾಗಾಗಿ ಪೂಜಾಳಿಗೆ ಇಪ್ಪತ್ತು ಲಕ್ಷ ಒಪ್ಪಿಸಿಬಿಟ್ಟರೆ ಅರ್ಧ ಬೆಲೆಗೆ ಸೀಟು ಸಿಕ್ಕಂತಾಗುತ್ತದೆ. ಸೀಟು ಬೇಕಿರುವ ಗಿರಾಕಿಗಳನ್ನು ಪೂಜಾಳ ಬಳಿಗೆ ಹಿಡಿದುಕೊಂಡು ಬರಲು ಅನಂತಾಚಲ ಎಂಬ ಮಧ್ಯವರ್ತಿಯಿದ್ದು ಆ ಇಂತಿಷ್ಟು ಕಮಿಷನ್ ಕೈಸೇರುತ್ತಿದೆಯಂತೆ



ಇದು ಹೊಸ ಜಮಾನಾ...

'ಕಳೆದ ಮೂರು ವರ್ಷಗಳಿಂದ ಕನ್ನ ರಂಗದಲ್ಲಿ ನಂಬರ್ ಒನ್ ಹಿರೋಯಿನ್ ದಲ್ಲಿದ್ದ ಪೂಜಾ ಗಾಂಧಿಯ ಜಮಾನ ಮು ಎಂಬ ಮಾತು ಗಾಂಧಿ ನಗರದಿಂದ ಇ ಕೇಳಿಬರುತ್ತಿದೆ. ಗಾಂಧಿನಗರದ ಈ ಅನುವ ಪ್ರಶ್ನೆಗೆ ತಕ್ಕಂತೆ ಇತ್ತೀಚಿಗೆ ಪೂಜಾ ಗಾಂಧಿ ನ ಬಹುತೇಕ ಚಿತ್ರಗಳು ನೆಲಕಚ್ಚಿವೆ.

ಎರಡು ವರ್ಷಗಳ ಹಿಂದೆ ಗಾಂಧಿನಗರ ಪೂಜಾ ಗಾಂಧಿಯನ್ನು 'ಲಕ್ಕಿ ಸ್ಟಾರ್' ಕರೆಯುತ್ತಾ ಆಕೆಯನ್ನು ಅಟ್ಟಕ್ಕೇರಿಸಿದ್ದರು. '2 ನಂ.1 ನಟಿ' ಎಂಬ ಕೀರ್ತಿಗೆ ಪಾತ್ರಳಾಗಿದ್ದ ಗಾಂಧಿಗೆ ಕಳೆದ ವರ್ಷದಿಂದ ಒಂದೇ ಯಶಸ್ಸೂ ಕೈಗೆಟುಕಿಲ್ಲ. 'ಅನು', 'ಕೊ ಕೋಳಿ ನುಂಗಿತ್ತಾ?', 'ಇನಿಯ', 'ಹುಚ್ಚಿ', ' ಕಾದಿರುವೆ', 'ಮಿನುಗು', 'ಗೋಕುಲ', 'ಹರಿ ಹೀಗೆ ಒಂದರ ಹಿಂದೆ ಒಂದು ತೋಪು ಚಿತ್ರ ಆಕೆ ನಟಿಸಿದ್ದರಿಂದ ಯಾವ ಗಾಂಧಿನಗರದ ಅಂದು ಈಕೆಯನ್ನು 'ಲಕ್ಕಿ ಸ್ಟಾರ್' ಕೊಂಡಾಡುತ್ತಿದ್ದರೋ ಅವರೇ ಇಂದು ಪೂಜ 'ಲತ್ತೆ ಸ್ಟಾರ್' ಎಂದು ಬ್ರಾಂಡ್ ಮಾಡಿಬಿಟ್ಟ

ಬಹುಶಃ ಇದಕ್ಕೆಲ್ಲ ಕಾರಣವಾಗಿದ್ದು ತನ್ನ ಪಾತ್ರಗಳ ಆಯ್ಕೆಯಲ್ಲಿ ಎಡವಿದ್ದು. ಮಾ ತನ್ನ ಮೈಮಾಟವನ್ನು ಕಾಪಾಡಿಕೊಳ್ಳುವಲ್ಲಿ ಈಕೆ ವಿಫಲವಾಗಿ ಯದ್ವಾತದ್ವಾ ದುಮ್ಮಿ 'ತೆರೆಯಮೇಲೆ ಆಕೆಯನ್ನು ನೋಡುವುದೇ ಕಷ್ಟ' ಎಂಬ ಕೊಂಕು ಕೇಳಿಬಂದಾಗ ಗೊಂಡ ಪೂಜಾ ರಾಗಿ ಮುದ್ದೆ ತಿ ಒಂದಿಷ್ಟು ವ್ಯಾಯಾಮ ಮಾಡುತ್ತ ಒ ತೂಕ ಕರಗಿಸಿಕೊಂಡಳು. ಆದರೆ ಅ ಗಾಗಲೇ ಆಕೆ ನಟಿಸಿದ್ದ ಮುಕ್ಕಾಲು ಸಿನಿಮಾಗಳು ಅಸುನೀಗಿದ್ದವು.

ಇದಾದನಂತರ ಪೂಜಾ ಗಾ ಸಂಭಾವನೆ ಏಕ್‌ದಂ ಕುಸಿದುಬಿತ್ತು ಆಕೆ 'ತವರಿನ ಋಣ', ಮಹಾರಾಣಿ' ಸೇರಿದಂತೆ ಬ ಸಿನಿಮಾಗಳಲ್ಲಿ ಕೇವಲ ಏಳೆಂಟ ರೂಪಾಯಿಗಳ ಸಂಭಾ ನಟಿಸಿದ್ದಾಳೆ. ಆದರೆ ನಟಿಯೊ ಆ ಹಣ ಯಾವ ವೆಚ್ಚಕ್ಕೂ ಗುವುದಿಲ್ಲ, ಹೀಗಾಗಿ ಪಾಲಿಗೆ ಹೊಸ ವ್ಯಾಪಾರ ಆರಂಭಿಸುವುದು ಅನಿವಾ ವಾದಂತೆ ಕಾಣುತ್ತಿದೆ.

ಅದರ ಆರಂಭಿಕ ಹೆ ಈ ಸೀಟು ವ್ಯಾಪಾರವಿರಬಹುದು

• ಅರುಣೋದ
arunodayagc@gmail.c

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Ra